ಬುಧವಾರ ಜುಲೈ 1 2026 ₹ 7.00 • www.prajavani.net

ಪ್ರಜಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪ

‘ಲಗಾನ್’ಗೆ 25



‘ಲಗಾನ್’ ಚಿತ್ರಕ್ಕೆ 25 ವರ್ಷ ಸಂದ ಸಂಭ್ರಮಕ್ಕಾಗಿ ಭಾರತೀಯ ಅಂಚೆ ಇಲಾಖೆ ಬಿಡುಗಡೆ ಮಾಡಿರುವ ಲಕೋಟೆಯನ್ನು ಹಿಡಿದು ಫೋಟೊಗೆ ಪೋಸ್ ನೀಡಿದ ಚಿತ್ರದ ನಿರ್ಮಾಪಕ, ನಟ ಅಮೀರ್ ಖಾನ್

ಡ್ರಗ್ಸ್ ಮುಕ್ತ ಕರ್ನಾಟಕ ಗುರಿ

‘ಆಪರೇಷನ್ ರೈಸ್’, ‘ಬೇಡ ಬ್ರೋ ಅಭಿಯಾನ’ಕ್ಕೆ ಸಿ.ಎಂ. ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಾದಕ ವಸ್ತುಗಳ ಜಾಲವನ್ನು ಬೇರು ಸಹಿತ ಕಿತ್ತು ಹಾಕಲು ಪಣ ತೊಟ್ಟಿರುವ ಸರ್ಕಾರ, ಎರಡು ವರ್ಷದೊಳಗೆ ‘ಮಾದಕ ವಸ್ತು ಮುಕ್ತ ಕರ್ನಾಟಕ’ವನ್ನಾಗಿ ಮಾಡುವ ಗುರಿ ಹೊಂದಿದೆ. ಇದಕ್ಕಾಗಿ ‘ಆಪರೇಷನ್ ರೈಸ್’ ಕಾರ್ಯಕ್ರಮ ಮತ್ತು ‘ಬೇಡ ಬ್ರೋ’ ಎಂಬ ಅಭಿಯಾನಕ್ಕೆ ಚಾಲನೆ ನೀಡಿದೆ.

ಪೊಲೀಸ್ ಇಲಾಖೆ ನಗರದ ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಅಂತರ ರಾಷ್ಟ್ರೀಯ ಮಾದಕ ವ್ಯಸನ ಮತ್ತು ಕಳ್ಳಸಾಗಣೆ ವಿರೋಧಿ ದಿನ–2026 ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ಅಭಿಯಾನಕ್ಕೆ ಚಾಲನೆ ನೀಡಿದರು.

ರೈಸ್ (RISE) ಎಂಬುದು R-refuse (ನಿರಾಕರಣೆ), I-inform (ಮಾಹಿತಿ ನೀಡುವಿಕೆ), S-support (ಬೆಂಬಲ ನೀಡುವುದು), E-empower (ಸಬಲೀಕರಣ) ಎಂಬ ತತ್ವಗಳ ಆಧಾರದ ಮೇಲೆ ರೂಪಿಸಿದ ಕಾರ್ಯಕ್ರಮ. ಇದು ಮಾದಕ ವಸ್ತುಗಳ ಮಾರಾಟವನ್ನು ಸಂಘಟಿತ ಕಾರ್ಯತಂತ್ರದ ಮೂಲಕ ಪರಿಣಾಮಕಾರಿಯಾಗಿ ನಿಯಂತ್ರಿಸುತ್ತದೆ.

> **ಯುವ ಜನರನ್ನು ‘ಮಾದಕ ವ್ಯಸನ ವಿರೋಧಿ ರಾಯಭಾರಿ’ಗಳಾಗಿ ಸಬಲೀಕರಣಗೊಳಿಸುವ ಮೂಲಕ ಮಾದಕ ವಸ್ತು ಮುಕ್ತ ಸಮಾಜ ನಿರ್ಮಿಸುವುದು ನಮ್ಮ ಉದ್ದೇಶ**
> **ಪ್ರಿಯಾಂಕ್ ಖರ್ಗೆ,** ಗೃಹ ಸಚಿವ

ವಿಶೇಷವಾಗಿ ಯುವಜನರು ಮಾದಕ ವಸ್ತುಗಳನ್ನು ಸಂಪೂರ್ಣವಾಗಿ ತಿರಸ್ಕರಿಸಿ, ಆರೋಗ್ಯಕರ ಮತ್ತು ಜವಾಬ್ದಾರಿಯುತ ಜೀವನಶೈಲಿ ಅಳವಡಿಸಿಕೊಳ್ಳುವಂತೆ ಈ ಕಾರ್ಯಕ್ರಮ ಪ್ರೇರೇಪಿಸುತ್ತದೆ. ಜಾಗೃತಿ ಅಭಿಯಾನ, ಶೈಕ್ಷಣಿಕ ಕಾರ್ಯಕ್ರಮಗಳು ಹಾಗೂ ಸಮುದಾಯ ಆಧಾರಿತ ಚಟುವಟಿಕೆಗಳ ಮೂಲಕ ಮಾದಕ ವ್ಯಸನದ ದುಷ್ಪರಿಣಾಮಗಳ ಕುರಿತು ಜನರಲ್ಲಿ ಅರಿವು ಮೂಡಿಸುವುದು ಪ್ರಮುಖ ಉದ್ದೇಶವಾಗಿದೆ.

ವ್ಯಸನದಿಂದ ಬಳಲುತ್ತಿರುವವರಿಗೆ ಸಮಾಲೋಚನೆ, ಚಿಕಿತ್ಸೆ ಮತ್ತು ಪುನರ್ವಸತಿ ಸೇವೆಗಳು ಸುಲಭವಾಗಿ ಲಭ್ಯವಾಗುವಂತೆ ಉತ್ತೇಜಿಸಲಾಗುತ್ತದೆ. ಮಾದಕ ವಸ್ತುಗಳ ಅಕ್ರಮ ಜಾಲಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದು, ಆರೋಗ್ಯಕರ, ಸುರಕ್ಷಿತ ಮತ್ತು ಮಾದಕ ವಸ್ತು ಮುಕ್ತ ಸಮಾಜ ನಿರ್ಮಿಸುವುದು ಆಪರೇಷನ್ ರೈಸ್‌ನ ಪ್ರಮುಖ ಧ್ಯೇಯವಾಗಿದೆ.

‘ಬೇಡ ಬ್ರೋ’ (BRO): ಯುವ ಜನರನ್ನು ಸಕ್ರಿಯವಾಗಿ ತೊಡಗಿಸಿಕೊಂಡು ಶಿಕ್ಷಣ ಮತ್ತು ಸಮುದಾಯದ ಸಹಭಾಗಿತ್ವದ ಮೂಲಕ ಮಾದಕ ವ್ಯಸನವನ್ನು ತಡೆಗಟ್ಟುವ ಉದ್ದೇಶದಿಂದ ರೂಪಿಸಲಾದ ವಿಶೇಷ ಜಾಗೃತಿ ಕಾರ್ಯಕ್ರಮ ‘ಬೇಡ ಬ್ರೋ’. ▶10



ಅಂತರರಾಷ್ಟ್ರೀಯ ಮಾದಕ ವ್ಯಸನ ಮತ್ತು ಕಳ್ಳ ಸಾಗಾಣಿಕೆ ವಿರೋಧಿ ದಿನದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಫಲಕ ಪ್ರದರ್ಶಿಸಿದರು

ಪ್ರಜಾವಾಣಿ ಚಿತ್ರ. ಪ್ರಶಾಂತ್ ಎಚ್‌.ಜಿ.

ಮಾಹಿತಿ ನೀಡಿದರೆ ಬಹುಮಾನ

‘ಮಾದಕ ವಸ್ತುಗಳ ಸೇವನೆ ಬಗ್ಗೆ ಮಾಹಿತಿ ನೀಡುವ ಸಾರ್ವಜನಿಕರು, ಪೋಷಕರಿಗೆ ಪೊಲೀಸ್ ಇಲಾಖೆಯಿಂದ ಬಹುಮಾನ ನೀಡಲಾಗುವುದು. ಇದರಿಂದ ಸರಬರಾಜು ಜಾಲವನ್ನು ಹತ್ತಿಕ್ಕಬಹುದು. ಡ್ರಗ್ಸ್ ಸೇವನೆ ಸೇರಿದಂತೆ ಇತರೆ ಕಾನೂನುಬಾಹಿರ ಕೃತ್ಯಗಳನ್ನು ನಿಯಂತ್ರಿಸಲು ಸಾರ್ವಜನಿಕರು ಪೊಲೀಸ್ ಇಲಾಖೆಯ ಜೊತೆ ಕೈ ಜೋಡಿಸಬೇಕು’ ಎಂದು ಶಿವಕುಮಾರ್ ಮನವಿ ಮಾಡಿದರು.

ಶಾರ್ಟ್ ಸರ್ಕಿಟ್: ಶಸ್ತ್ರಚಿಕಿತ್ಸಾ ಕೊಠಡಿ ಭಸ್ಮ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಇಲ್ಲಿನ ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಶಸ್ತ್ರಚಿಕಿತ್ಸಾ ಕೊಠಡಿಯೊಂದರಲ್ಲಿ ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಅಗ್ನಿ ಅನಾಹುತ ಸಂಭವಿಸಿದ್ದು, ಅಂದಾಜು ₹ 75 ಲಕ್ಷ ಮೌಲ್ಯದ ವೈದ್ಯಕೀಯ ಉಪಕರಣಗಳು ಭಸ್ಮವಾಗಿವೆ. ರೋಗಿಗಳು ಹಾಗೂ ವೈದ್ಯಕೀಯ ಸಿಬ್ಬಂದಿ ಅಪಾಯದಿಂದ ಪಾರಾಗಿದ್ದಾರೆ.

ಆಸ್ಪತ್ರೆಯ 2ನೇ ಮಹಡಿಯಲ್ಲಿರುವ ಕೀಲು, ಮೂಳೆ, ಕಣ್ಣು, ಕಿವಿ ಹಾಗೂ ಮೂಗಿನ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಮಂಗಳವಾರ ಬೆಳಿಗ್ಗೆ 8.45ಕ್ಕೆ ಈ ಅವಘಡ ಸಂಭವಿಸಿದೆ. ಅಪಾಯದ ಮುನ್ಸೂಚನೆ ಅರಿತ ವೈದ್ಯಕೀಯ ಸಿಬ್ಬಂದಿ ಹೊರಗೆ ಓಡಿ ಬಂದು ಪ್ರಾಣ ಉಳಿಸಿಕೊಂಡಿದ್ದಾರೆ.

ಬೆಳಿಗ್ಗೆ 9ಕ್ಕೆ ಶುರುವಾಗಬೇಕಿದ್ದ ಶಸ್ತ್ರಚಿಕಿತ್ಸೆಗಳಿಗೆ ವೈದ್ಯೆ ಸೇರಿದಂತೆ ಐವರು ಸಿಬ್ಬಂದಿ ಕೊಠಡಿಯನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು. ಶಸ್ತ್ರ-ಚಿಕಿತ್ಸಾ ಕೊಠಡಿಗೆ ದಾಖಲಾಗಲು ರೋಗಿಗಳು ಹೊರಗೆ ಕಾಯುತ್ತಿದ್ದರು. ಈ ವೇಳೆ ಅರಿವಳಿಕೆ ಉಪಕರಗಳಲ್ಲಿ ಶಾರ್ಟ್ ಸರ್ಕಿಟ್ ಉಂಟಾಗಿದೆ. ತಕ್ಷಣ ಎಚ್ಚೆತ್ತ ಸಿಬ್ಬಂದಿ ಅಗ್ನಿನಂದಕಗಳನ್ನು ಬಳಸಿ ಬೆಂಕಿ ಆರಿಸಲು ಪ್ರಯತ್ನಿಸಿದ್ದಾರೆ. ▶11



ಬೆಂಕಿಯನ್ನು ನಂದಿಸಿದ ಅಗ್ನಿಶಾಮಕ ಮತ್ತು ತುರ್ತುಸೇವಾ ಠಾಣೆಯ ಸಿಬ್ಬಂದಿ —ಪ್ರಜಾವಾಣಿ ಚಿತ್ರ: ಸತೀಶ್ ಬಡಿಗೇರ

‘ಪ್ರಯಾಣ ದರ ಪರಿಷ್ಕರಣೆಗೆ ಚಿಂತನೆ’

ಲೆಕ್ಕಾಚಾರದ ಬಳಿಕ ನಿರ್ಧಾರ: ಸಾರಿಗೆ ಸಚಿವ ಬೈರತಿ ಸುರೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದಾರು ತಿಂಗಳಲ್ಲಿ 4 ಬಾರಿ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳವಾಗಿರುವ ಕಾರಣ ಸ್ವಲ್ಪ ಮಟ್ಟಿಗೆ ಪ್ರಯಾಣ ದರ ಹೆಚ್ಚಳ ಮಾಡುವ ಬಗ್ಗೆ ಚಿಂತನೆ ನಡೆದಿದೆ. ಎಷ್ಟು ಪ್ರಮಾಣದಲ್ಲಿ ಹೆಚ್ಚು ಮಾಡಬೇಕು ಎಂಬುದನ್ನು ಅಧಿಕಾರಿಗಳು ಲೆಕ್ಕಾಚಾರ ಮಾಡುತ್ತಿದ್ದಾರೆ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದರು.


ಬೈರತಿ ಸುರೇಶ್

ನಷ್ಟದಲ್ಲಿರುವ ಸಾರಿಗೆ ನಿಗಮಗಳಿಗೆ ಹೆಚ್ಚು ನಷ್ಟವಾಗದಂತೆ, ಜನಸಾಮಾನ್ಯರಿಗೂ ಹೆಚ್ಚು ಹೊರೆಯಾಗದ ರೀತಿ ಪ್ರಯಾಣ ದರವನ್ನು ಹೆಚ್ಚಳ ಮಾಡಬೇಕಾಗಿದೆ. ಸಚಿವ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಂಪುಟ ಸಹೋದ್ಯೋಗಿಗಳೊಂದಿಗೆ ಚರ್ಚಿಸಿ ಅಲ್ಲಿ ತೆಗೆದುಕೊಳ್ಳುವ ನಿರ್ಧಾರದಂತೆ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಕೇಂದ್ರ ಅನುದಾನದ ಎಲೆಕ್ಟ್ರಿಕ್ ಬಸ್‌ಗಳ ಗುತ್ತಿಗೆಗೆ ರಾಜ್ಯ ಸರ್ಕಾರ ಅನುಮೋದನೆ ನೀಡುತ್ತಿಲ್ಲ ಎಂಬ ಸಂಸದ ತೇಜಸ್ವಿ ಸೂರ್ಯ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಸಚಿವರು, ಸಾಧಕ-ಬಾಧಕಗಳ ಬಗ್ಗೆ ಸರ್ಕಾರ ಪರಿಶೀಲನೆ ನಡೆಸಬೇಕು ಎಂದರು.

ಒಟ್ಟು 4,500 ಎಲೆಕ್ಟ್ರಿಕ್ ಬಸ್‌ಗಳನ್ನು ಎಂಟು ವರ್ಷಗಳ ಅವಧಿಯಲ್ಲಿ ಗುತ್ತಿಗೆ ಪಡೆಯಬೇಕಾಗಿದೆ. ಈ ಬಸ್‌ಗಳಿಗೆ ಕೇಂದ್ರ ಸಂಪೂರ್ಣ ಅನುದಾನ ನೀಡುತ್ತಿಲ್ಲ. ಕೇಂದ್ರ ಸರ್ಕಾರ ಒಂದು ಬಸ್‌ಗೆ ₹30 ಲಕ್ಷದಿಂದ ₹35 ಲಕ್ಷ ಮಾತ್ರ ನೀಡುತ್ತದೆ. ರಾಜ್ಯ ಸರ್ಕಾರ ವಾರ್ಷಿಕ ಕಿಲೋ ಮೀಟರ್ ಆಧಾರದಲ್ಲಿ ಸುಮಾರು ₹2,850 ಕೋಟಿಯಿಂದ ₹3,000 ಕೋಟಿಯನ್ನು ಬಸ್ ನೀಡುವ ಗುತ್ತಿಗೆದಾರ ಸಂಸ್ಥೆಗೆ ನೀಡಬೇಕಾಗುತ್ತದೆ. ಈ ಅಂಶವನ್ನು ಹೇಳದೇ ಎಲ್ಲವನ್ನೂ ಕೇಂದ್ರವೇ ನೀಡುತ್ತದೆ ಎಂಬ ರೀತಿಯಲ್ಲಿ ತೇಜಸ್ವಿ ಸೂರ್ಯ ಹೇಳಿಕೆ ನೀಡಿರುವುದು ಜನರನ್ನು ತಪ್ಪುದಾರಿಗೆ ಎಳೆಯುವ ಪ್ರಯತ್ನವಾಗಿದೆ ಎಂದು ತಿರುಗೇಟು ನೀಡಿದರು.

‘ರಾಜ್ಯಕ್ಕೆ ಎಲೆಕ್ಟ್ರಿಕ್ ಬಸ್‌ಗಳ ಅಗತ್ಯವಿದೆ. ಆದರೆ, ಖರ್ಚು ವೆಚ್ಚಗಳನ್ನು ಅವಲೋಕಿಸಿ ನಿರ್ಧಾರ ಕೈಗೊಳ್ಳಲಾಗುತ್ತದೆ. ಪರಿಸ್ಥಿತಿ ಹೀಗಿರುವಾಗ ಈ ಎಲೆಕ್ಟ್ರಿಕ್ ಬಸ್‌ಗಳು ಓಡಲಿ, ಬಿಡಲಿ ರಾಜ್ಯ ಸರ್ಕಾರ ದುಡ್ಡು ಕೊಡಲೇಬೇಕೆಂಬ ನಿಬಂಧನೆ ಹಾಕಲಾಗಿದೆ. ಅಂದರೆ, ಬಸ್ ಕೆಟ್ಟು ಹೋದರೂ ಅಥವಾ ಇನ್ನಿತರ ತಾಂತ್ರಿಕ ಕಾರಣಗಳಿಂದ ಸಂಚರಿಸದಿದ್ದರೂ ಹಣ ಕೊಡಲೇಬೇಕಾಗಿದೆ. ಇದು ಹೇಗೆ ಸಾಧ್ಯ’ ಎಂದು ಪ್ರಶ್ನಿಸಿದ ಸಚಿವರು, ಇದರ ಸಾಧಕ -ಬಾಧಕಗಳನ್ನು ಮುಖ್ಯಮಂತ್ರಿ ಜೊತೆ ಚರ್ಚಿಸಿ ಮುಂದಿನ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಶಕ್ತಿ: ₹5,500 ಕೋಟಿ ಬಾಕಿ

ಶಕ್ತಿ ಯೋಜನೆಯಿಂದ ಸಾರಿಗೆ ನಿಗಮಗಳಿಗೆ ₹5,500 ಕೋಟಿ ಬಾಕಿ ಉಳಿದಿದೆ. ಆದಷ್ಟೂ ಬೇಗ ಈ ಬಾಕಿಯನ್ನು ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿಗೆ ಮನವಿ ಮಾಡಲಾಗುವುದು. ನಿಗಮಗಳ ನೌಕರರಿಗೆ ಬಾಕಿ ಉಳಿದಿರುವ ವೇತನವನ್ನೂ ಆರ್ಥಿಕ ಪರಿಸ್ಥಿತಿಯನ್ನು ಪರಿಶೀಲಿಸಿ ಬಿಡುಗಡೆ ಮಾಡುವ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ಸಚಿವರು ಹೇಳಿದರು.

ಗೃಹ ಜ್ಯೋತಿ: ದಾಖಲೆ ಪರಿಶೀಲನೆ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳ ಮನೆ-ಮನೆ ಪರಿಶೀಲನೆ ಕಾರ್ಯವನ್ನು ಎಲ್ಲ ಎಸ್ಕಾಂಗಳ ಸಿಬ್ಬಂದಿ ಜುಲೈ 1ರಿಂದ ಕೈಗೊಳ್ಳಲಿದ್ದಾರೆ.

2023ರ ಜುಲೈ ತಿಂಗಳಲ್ಲಿ ಜಾರಿಗೆ ಬಂದಿರುವ ಗೃಹ ಜ್ಯೋತಿ ಯೋಜನೆಯ ಪುನರ್ ಪರಿಶೀಲನಾ ಕಾರ್ಯ ನಡೆಯಲಿದ್ದು, ಎಸ್ಕಾಂಗಳ ಮೀಟರ್ ರೀಡರ್‌ಗಳು ಹಾಗೂ ಎಸ್ಕಾಂ ಸಿಬ್ಬಂದಿ ಗ್ರಾಹಕರ ಮನೆಗಳಿಗೆ ಭೇಟಿ ನೀಡಿ, ಫಲಾನುಭವಿಗಳ ದಾಖಲೆ ಪರಿಶೀಲನೆ ನಡೆಸಿ, ಅವರ ಮಾಹಿತಿ ಸಂಗ್ರಹಿಸಿ, ಮೊಬೈಲ್ ಆ್ಯಪ್ ಹಾಗೂ ಘೋಷಣಾ ಪತ್ರ ಮೂಲಕ ಅರ್ಜಿ ಭರ್ತಿ ಪ್ರಕ್ರಿಯೆ ಪೂರ್ಣಗೊಳಿಸಲಿದ್ದಾರೆ.

ಮನೆ ಭೇಟಿ ಸಂದರ್ಭದಲ್ಲಿ ಆಧಾರ್ ಕಾರ್ಡ್, ಫಲಾನುಭವಿಯ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ, ಮತದಾರರ ಗುರುತಿನ ಚೀಟಿ, ಪ್ಯಾನ್ ಕಾರ್ಡ್, ಬಾಡಿಗೆ ಒಪ್ಪಂದದ ಪತ್ರಗಳು (ಅನ್ವಯಿಸುವಲ್ಲಿ ಮಾತ್ರ), ಪಡಿತರ ಚೀಟಿ ಹಾಗೂ ಜಾತಿ ಪ್ರಮಾಣ ಪತ್ರವನ್ನು ತೋರಿಸಲು ಕೋರಲಾಗಿದೆ.

ವಿಟಿಯು: ಐದೇ ನಿಮಿಷದಲ್ಲಿ ಫಲಿತಾಂಶ ಪ್ರಕಟ

ಬೆಳಗಾವಿ: ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು(ವಿಟಿಯು) ಬಿ.ಇ ಮತ್ತು ಬಿ.ಟೆಕ್ ಆರನೇ ಸೆಮಿಸ್ಟರ್ ಪರೀಕ್ಷೆ ಮುಗಿದ ಐದು ನಿಮಿಷದೊಳಗೆ ಫಲಿತಾಂಶ ಪ್ರಕಟಿಸುವ ಮೂಲಕ ದಾಖಲೆ ಬರೆದಿದೆ.

ಕುಲಪತಿ ಪ್ರೊ.ಎಸ್.ವಿದ್ಯಾಶಂಕರ, ಮೌಲ್ಯಮಾಪನ ಕುಲಸಚಿವ ಪ್ರೊ. ಯು.ಜೆ.ಉಜ್ವಲ್ ಹಾಗೂ ಕುಲಸಚಿವ ಪ್ರಸಾದ ರಾಂಪುರೆ ಮಂಗಳವಾರ ಜಂಟಿಯಾಗಿ ಫಲಿತಾಂಶ ಬಿಡುಗಡೆ ಮಾಡಿದರು. ಬಿ.ಇ ಮತ್ತು ಬಿ.ಟೆಕ್ 6ನೇ ಸೆಮಿಸ್ಟರ್ ಪರೀಕ್ಷೆಗೆ 60,856 ವಿದ್ಯಾರ್ಥಿಗಳು ಹಾಜರಾಗಿದ್ದರು. ಒಟ್ಟಾರೆಯಾಗಿ ಶೇ 76.84ರಷ್ಟು ಫಲಿತಾಂಶ ದಾಖಲಾಗಿದೆ.

‘ಇದೇ ವರ್ಷ ವಿವಿಧ ಕೋರ್ಸ್‌ಗಳ ಅಂತಿಮ ವರ್ಷದ 56 ಸಾವಿರ ವಿದ್ಯಾರ್ಥಿಗಳ ಫಲಿತಾಂಶವನ್ನು ಪರೀಕ್ಷೆ ಮುಗಿದ 10 ನಿಮಿಷಗ ಳಲ್ಲಿ ಪ್ರಕಟಿಸಿದ್ದೆವು. 2025ರಲ್ಲಿ 50,321 ವಿದ್ಯಾರ್ಥಿಗಳ ಫಲಿತಾಂಶವನ್ನು ಒಂದು ಗಂಟೆಯಲ್ಲಿ ಪ್ರಕಟಿಸಿದ್ದೆವು. ಈಗ ಐದೇ ನಿಮಿಷದಲ್ಲಿ ಫಲಿತಾಂಶ ಪ್ರಕಟಿಸಿ ಹಿಂದಿನ ಎಲ್ಲ ದಾಖಲೆ ಮುರಿದಿದ್ದೇವೆ’ ಎಂದು ವಿದ್ಯಾಶಂಕರ ಹೇಳಿದರು.

‘ಡಿಜಿಟಲ್ ಮೌಲ್ಯಮಾಪನದಿಂದ ತ್ವರಿತವಾಗಿ ಫಲಿತಾಂಶ ಪ್ರಕಟಣೆಗೆ ಸಿದ್ಧತೆ ಮಾಡಿಕೊಂಡಿದ್ದೆವು. ಎಲ್ಲರ ಸಹಕಾರದಿಂದ ಇದು ಸಾಧ್ಯವಾಗಿದೆ’ ಎಂದು ಯು.ಜೆ.ಉಜ್ವಲ್ ತಿಳಿಸಿದರು.

ಚಿಕಿತ್ಸೆಗೆ ₹2 ಕೋಟಿ ನೆರವು ಸಂಗ್ರಹ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಡ್ಯ ಜಿಲ್ಲೆ ಶಿವಾರ ಗ್ರಾಮದ ಚೇತನ್-ಭಾರ್ಗವಿ ದಂಪತಿಯ ಮಗು ಸಾಯಿ ಚಿರಾಗ್ ಚಿಕಿತ್ಸೆಗಾಗಿ ನಡೆದ ಜನಸಹಾಯ ಅಭಿಯಾನದಲ್ಲಿ ₹2.06 ಕೋಟಿ ಸಂಗ್ರಹವಾಗಿದೆ ಎಂದು ಸಮಾಜಸೇವಕ ಫಯಾಜ್ ಮಾಡೂರು ತಿಳಿಸಿದ್ದಾರೆ.

ರಾಜ್ಯದ ವಿವಿಧ ನಗರ ಮತ್ತು ಪಟ್ಟಣಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿ ನಿಧಿ ಸಂಗ್ರಹಿಸಲಾಗಿತ್ತು. ವಿಷಯ ತಿಳಿದು ಹೊರರಾಜ್ಯದಿಂದಲೂ ಹಣ ಹರಿದು ಬಂತು. ಧರ್ಮ, ಜಾತಿ ಹಾಗೂ ಸಾಮಾಜಿಕ ಸ್ಥಿತಿಗಳನ್ನು ಮೀರಿ ಮಗುವೊಂದರ ಜೀವ ಉಳಿಸಲು ಎಲ್ಲ ಮಾನವೀಯ ಕೈಗಳು ಒಂದಾದ ಪರಿಣಾಮ ದೊಡ್ಡ ಮೊತ್ತ ಸಂಗ್ರಹ ಆಗಿದೆ ಎಂದು ಅವರು ವಿವರಿಸಿದ್ದಾರೆ.



ಜನಸಹಾಯ ಅಭಿಯಾನ ನಡೆದ ಸಂದರ್ಭ

‘ಸಂಗ್ರಹವಾದ ಅಷ್ಟೂ ಮೊತ್ತವನ್ನು ನಾವು ಚೇತನ್ ಅವರಿಗೆ ನೀಡಿದ್ದೇವೆ. ಅದರಲ್ಲಿ ಅವರು ಸಾಯಿ ಚಿರಾಗ್ ಚಿಕಿತ್ಸೆಗೆ ಅಗತ್ಯವಿರುವಷ್ಟು ಮೊತ್ತವನ್ನು ಮಾತ್ರ ಬಳಸಿ, ಉಳಿದ ಸುಮಾರು ₹6.50 ಲಕ್ಷವನ್ನು ಎಸ್‌ಎಂಎ (ಸ್ಪೈನಲ್ ಮಸ್ಕ್ಯುಲಾರ್ ಅಟ್ರೋಫಿ) ಹಾಗೂ ಇತರ ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವ ಮಕ್ಕಳ ಚಿಕಿತ್ಸೆಗೆ ನೀಡಿದ್ದಾರೆ. ನಮ್ಮ ಅಭಿಯಾನದಿಂದ ಹಲವು ಮಕ್ಕಳಿಗೆ ಅನುಕೂಲ ಆಗಿದೆ. ಒಳ್ಳೆಯ ಉದ್ದೇಶ ಇಟ್ಟುಕೊಂಡು ಕೈಗೊಳ್ಳುವ ಕಾರ್ಯಕ್ಕೆ ಸಮಾಜದಲ್ಲಿ ಸದಾ ಉತ್ತಮ ಸ್ಪಂದನೆ ಸಿಗುತ್ತದೆ ಎಂಬುದಕ್ಕೆ ಈ ಪ್ರಯತ್ನವೇ ಸಾಕ್ಷಿ’ ಎಂದು ಅವರು ತಿಳಿಸಿದ್ದಾರೆ.

ಪಾಸ್‌ಪೋರ್ಟ್ ನವೀಕರಣಕ್ಕೆ ಮೋಸದ ಜಾಲ: ಹೈಕೋರ್ಟ್ ಕಳವಳ

‘ಯಾರಾದರೂ ಸರಿ, ಮುಲಾಜಿಲ್ಲದೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಸಸ್ಥಳದ ನಕಲಿ ರುಜುವಾತು ಒದಗಿಸಿ ಪಾಸ್‌ಪೋರ್ಟ್ ನವೀಕರಣಕ್ಕೆ ಸಹಕರಿಸುವ ಜಾಲದ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ಹೈಕೋರ್ಟ್, ‘ಯಾವುದೇ ವ್ಯಕ್ತಿ, ಆತ ನಾಗರಿಕನಾಗಿರಲಿ, ಮಧ್ಯವರ್ತಿಯಾಗಿರಲಿ ಅಥವಾ ಸಾರ್ವಜನಿಕ ಸೇವಕನಾಗಿರಲಿ, ಕರ್ತವ್ಯ ಲೋಪ ಎಸಗಿ ರಾಷ್ಟ್ರದ ಹಿತಾಸಕ್ತಿಗೆ ವಿರುದ್ಧವಾಗಿ ವರ್ತಿಸಿದ್ದಾನೆ ಎಂದರೆ ಅಂಥವರನ್ನು ಮುಲಾಜಿಲ್ಲದೆ ವಿಚಾರಣೆಗೆ ಒಳಪಡಿಸಬೇಕು’ ಎಂದು ರಾಜ್ಯ ಪ್ರಾಸಿಕ್ಯೂಷನ್‌ಗೆ ತಾಕೀತು ಮಾಡಿದೆ.

ಆಂಧ್ರಪ್ರದೇಶ ಭಯೋತ್ಪಾದನಾ ನಿಗ್ರಹ ದಳಕ್ಕೆ ಬೇಕಾಗಿದ್ದ ವ್ಯಕ್ತಿಯೊಬ್ಬರ ಪಾಸ್‌ಪೋರ್ಟ್ ನವೀಕರಣಕ್ಕೆ ಸಹಕರಿಸಿದ ಆರೋಪ ಹೊತ್ತಿರುವ ಉಪ್ಪಿನಂಗಡಿ ಟ್ರಾವೆಲ್ ಏಜೆಂಟ್ ಯು.ಎಂ.ಹೈದರ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಜಾಗೊಳಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

> **ದೇಶದ್ರೋಹದ ಕೃತ್ಯಗಳಲ್ಲಿ ತೊಡಗಿಸಿಕೊಳ್ಳುವ ಜನರಿಂದ ಮಾತ್ರವೇ ರಾಷ್ಟ್ರೀಯ ಭದ್ರತೆ ಅಪಾಯಕ್ಕೆ ಸಿಲುಕುವುದಿಲ್ಲ; ಬದಲಿಗೆ ಅಂತಹ ಕೃತ್ಯಕ್ಕೆ ಸಹಾಯ ಮಾಡುವ ವ್ಯಕ್ತಿಯೂ ಅದಕ್ಕೆ ಅಷ್ಟೇ ಜವಾಬ್ದಾರನಾಗಿರುತ್ತಾನೆ**
> **ನ್ಯಾ.ಎಂ.ನಾಗಪ್ರಸನ್ನ**

‘ಅರ್ಜಿದಾರರು ತಾವು ದೈಹಿಕವಾಗಿ ಅಂಗವಿಕಲ, ಅನಾರೋಗ್ಯ ಪೀಡಿತ ಮತ್ತು ಪ್ರಾಮಾಣಿಕ ಎಂದು ಪ್ರತಿಪಾದಿಸಿ ಕಾನೂನಿನ ಆಶ್ರಯ ಪಡೆಯುವುದಕ್ಕೆ ಈ ಹಂತದಲ್ಲಿ ಸಮ್ಮತಿಸಲಾಗದು. ಇಂತಹ ಮನವಿಗಳು, ಎಷ್ಟೇ ಸಹಾನುಭೂತಿಯಿಂದ ಕೂಡಿದ್ದರೂ, ಆರೋಪಗಳ ಗಾಂಭೀರ್ಯವನ್ನು ಮರೆಮಾಚಲು ಸಾಧ್ಯವಿಲ್ಲ. ತಾವು ನಿರಪರಾಧಿ ಎಂದು ಹೇಳಿಕೊಳ್ಳುವುದಾದರೆ ವಿಚಾರಣೆಯನ್ನು ಎದುರಿಸಿ ದೋಷಮುಕ್ತರಾಗಲಿ’ ಎಂದು ಅಭಿಪ್ರಾಯಪಟ್ಟಿದೆ.

‘ಇಂತಹ ವಿಷಯ ಖಾಸಗಿ ಅಪರಾಧ ವಿಷಯವಾಗಿ ಉಳಿಯುವುದಿಲ್ಲ. ಆರೋಪಗಳು ವಿಚಾರಣೆಯಲ್ಲಿ ಸಾಬೀತಾದರೆ, ಸಾಮಾನ್ಯ ಕ್ರಿಮಿನಲ್ ದುಷ್ಕೃತ್ಯವನ್ನು ಮೀರುತ್ತವೆ. ರಾಷ್ಟ್ರದ ಭದ್ರತೆ ಮತ್ತು ಸಾರ್ವಭೌಮತ್ವಕ್ಕೆ ಅಪಾಯ ತಂದೊಡ್ಡುತ್ತವೆ’ ಎಂದು ನ್ಯಾಯಪೀಠ ಆತಂಕ ಹೊರಹಾಕಿದೆ.

ಪ್ರಕರಣ: ಉಪ್ಪಿನಂಗಡಿಯ ಯು.ಎಂ.ಹೈದರ್ ಟ್ರಾವೆಲ್ ಏಜೆನ್ಸಿ ನಡೆಸುವ 60 ವರ್ಷದ ಅಂಗವಿಕಲರು. ಇವರು ತಮ್ಮ ಬಳಿ ಬರುವ ಪಾಸ್‌ಪೋರ್ಟ್ ನವೀಕರಣದ ಅರ್ಜಿಗಳನ್ನು ಪೊಲೀಸ್ ಪರಿಶೀಲನೆಗೆ ಒಪ್ಪಿಸುವ ಕೆಲಸ ಮಾಡುತ್ತಾರೆ. ಇವರು 2010ರ ಸೆ. 1ರಿಂದ 2013ರ ಸೆ. 15ರ ಮಧ್ಯದ ಅವಧಿಯಲ್ಲಿ ಪ್ರಕರಣದ ಇತರೆ ಆರೋಪಿಗಳ ಜೊತೆ ಸೇರಿ ಪಾಸ್‌ಪೋರ್ಟ್ ನವೀಕರಿಸಲು ನಕಲಿ ದಾಖಲೆ ಸೃಷ್ಟಿಸಿದ ಆರೋಪ ಎದುರಿಸುತ್ತಿದ್ದಾರೆ.

15 ಅರ್ಜಿದಾರರ ಪಾಸ್‌ಪೋರ್ಟ್‌ಗಳಿಗೆ ಒಂದೇ ಮನೆಯ ವಿಳಾಸ ತೋರಿಸಿ ವಂಚಿಸಿರುವುದನ್ನು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ. ಈ ಪ್ರಕರಣದ ಮೊದಲನೇ ಆರೋಪಿ ಇಬ್ರಾಹಿಂ ಖಲೀಲ್ ಆಂಧ್ರಪ್ರದೇಶದ ಭಯೋತ್ಪಾದನಾ ನಿಗ್ರಹ ದಳಕ್ಕೆ ಬೇಕಾಗಿದ್ದ ವ್ಯಕ್ತಿ. ಇವರ ಪಾಸ್‌ಪೋರ್ಟ್ ನವೀಕರಣವನ್ನು ಹೈದರ್ ಮಾಡಿಸಿಕೊಟ್ಟಿರುವ ಗಂಭೀರ ಆರೋಪವಿದೆ.

‘ಕಾನ್‌ಸ್ಟೆಬಲ್ ಗಂಭೀರ’

‘ಹೈದರ್ ಕಳುಹಿಸಿಕೊಟ್ಟ ಎಲ್ಲಾ ಹದಿನೈದು ಅರ್ಜಿಗಳನ್ನು ಪರಿಶೀಲಿಸಿ ಅವುಗಳಿಗೆ ಹಸಿರು ನಿಶಾನೆ ತೋರಿರುವ ಪೊಲೀಸ್ ಕಾನ್‌ಸ್ಟೆಬಲ್ ಲಕ್ಷ್ಮಣ್ ಪಾತ್ರ ಗಂಭೀರವಾದುದು. ಅವರು ನಿರ್ಲಕ್ಷ್ಯದಿಂದ ಅನುಮತಿ ನೀಡಿದ್ದಾರೆಯೋ ಅಥವಾ ದುರುದ್ದೇಶದಿಂದ ಸಹಕರಿಸಿದ್ದಾರೆಯೋ ಎಂಬುದು ಅಗತ್ಯವಾಗಿ ತನಿಖೆಯ ಭಾಗ. ಹೀಗಾಗಿ, ಇವರ ನಡವಳಿಕೆ ನ್ಯಾಯಾಂಗ ಪರಿಶೀಲನೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ’ ಎಂದು ನ್ಯಾಯಪೀಠ ಆದೇಶದಲ್ಲಿ ಉಲ್ಲೇಖಿಸಿದೆ.

‘ಹೈದರ್ ಅವರು ಎರಡನೇ ಆರೋಪಿ ಎಕೆ ಅಲಿಯಾಸ್ ಕಮಲ್ ಶೇಖ್ ಜೊತೆ ಸೇರಿ 1ನೇ ಆರೋಪಿ ಇಬ್ರಾಹಿಂ ಖಲೀಲ್ ಮತ್ತು ನಾಲ್ಕನೇ ಆರೋಪಿ ಮೊಹಮದ್ ಹುಸೇನ್ ಅವರಿಗೆ ಪಾಸ್‌ಪೋರ್ಟ್ ಹೊಂದಲು ನಕಲಿ ದಾಖಲೆ ಸೃಷ್ಟಿಸಿ ಸಹಕರಿಸಿದ್ದಾರೆ. ಈ ದಾಖಲೆಗಳನ್ನು ಪೊಲೀಸ್ ಸಿಬ್ಬಂದಿ ಲಕ್ಷ್ಮಣ ಪುರಸ್ಕರಿಸಿದ್ದಾರೆ’ ಎಂದು ದೋಷಾರೋಪ ಪಟ್ಟಿಯಲ್ಲಿ ವಿವರಿಸಲಾಗಿದೆ.


ಚಿತ್ರಕಲಾವಿದ ಕೆ.ಟಿ.ಶಿವಪ್ರಸಾದ್ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಹಾಸನ: ಅಂತರರಾಷ್ಟ್ರೀಯ ಖ್ಯಾತಿಯ ಚಿತ್ರಕಲಾವಿದ ಕೆ.ಟಿ.ಶಿವಪ್ರಸಾದ್ (79) ಅವರು ಮಂಗಳವಾರ ನಿಧನರಾದರು. ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದ ಅವರು ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಅವರಿಗೆ ಪತ್ನಿ ಲೇಖಕಿ ಕೆ.ಟಿ. ಸುವರ್ಣ ಇದ್ದಾರೆ. ಶಿವಪ್ರಸಾದ್ ಅವರ ಪಾರ್ಥಿವ ಶರೀರವನ್ನು ಬುಧವಾರ (ಜುಲೈ 1) ಬೆಂಗಳೂರಿನಿಂದ ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನಕ್ಕೆ ತರಲಾಗುವುದು. ಬೆಳಿಗ್ಗೆ 9.30ರಿಂದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದ್ದು, ಮಧ್ಯಾಹ್ನ 2 ಗಂಟೆಗೆ ಬಿಟ್ಟಗೋಡನಹಳ್ಳಿ ಶಾಂತಿಧಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉದ್ಯಮಿ ದಿವಂಗತ ಎಚ್.ಟಿ. ಕಾರ್ಲೆ ಅವರ ಪುತ್ರರಾದ ಕೆ.ಟಿ. ಶಿವಪ್ರಸಾದ್, ತಮ್ಮ ಅದ್ಭುತ ಚಿತ್ರಕಲೆ ಹಾಗೂ ಛಾಯಾಚಿತ್ರಗಳ ಮೂಲಕ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸಿದ್ದರು. ಅವರ ಕಲಾಕೃತಿಗಳಲ್ಲಿ ಬಂಡಾಯ ಸಾಹಿತ್ಯ ಚಳವಳಿಯ ಪ್ರಭಾವವಿತ್ತು. ಕಲೆ ಮತ್ತು ಸೌಂದರ್ಯ ಪ್ರಜ್ಞೆಯನ್ನು ಸಮಾಜವಾದಿ ಉದ್ದೇಶಗಳೊಂದಿಗೆ ಬೆಸೆಯುವ ಪ್ರಯತ್ನದಲ್ಲಿ ಶಿವಪ್ರಸಾದ್ ಯಶಸ್ವಿಯಾಗಿದ್ದರು.


ಕೆ.ಟಿ. ಶಿವಪ್ರಸಾದ್

ರೈತರು, ಕಾರ್ಮಿಕರು, ದಲಿತರು ಹಾಗೂ ಶೋಷಿತರ ಬದುಕನ್ನು ತಮ್ಮ ಚಿತ್ರಗಳಲ್ಲಿ ಬಿಂಬಿಸಿದ್ದರು. ಕಲೆಯನ್ನು ಸಮಾಜ ಪರಿವರ್ತನೆಯ ಸಾಧನವನ್ನಾಗಿ ಮಾಡಿದ್ದರು. ದಲಿತ, ರೈತ ಹಾಗೂ ಸಮಾಜವಾದ ಚಳವಳಿಯಲ್ಲಿ ಸಕ್ರಿಯವಾಗಿ ಅವರು ಗುರುತಿಸಿಕೊಂಡಿದ್ದರು. ಕರ್ನಾಟಕದ ರೈತ ಚಳವಳಿಯಲ್ಲಿ ಜಪ್ತಿ ತಡೆ ಹಾಗೂ ಮರು ಜಪ್ತಿ ಚಳವಳಿ ನಡೆಸುವ ಮೂಲಕ ಹೋರಾಟದ ಹೊಸ ಪರಿಕಲ್ಪನೆಯನ್ನು ಆರಂಭಿಸಿದ್ದರು. ನಂತರ ಅವರು ದಲಿತ ಸಂಘರ್ಷ ಸಮಿತಿ ಸೇರಿದ್ದರು. ಸಾಹಿತಿ ಪೂರ್ಣಚಂದ್ರ ತೇಜಸ್ವಿ ಅವರ ಆಪ್ತರಾಗಿದ್ದ ಶಿವಪ್ರಸಾದ್, ಕುಪ್ಪಳಿಯ ಕವಿಶೈಲದ ವಿನ್ಯಾಸ ಮಾಡಿದ್ದರು.

ಶಿವಪ್ರಸಾದ್ ಅವರಿಗೆ ಬಾಲ್ಯದಿಂದಲೇ ಚಿತ್ರಕಲೆಯತ್ತ ಆಸಕ್ತಿ ಇತ್ತು. ಆದರೆ, ಆ ಕಾಲದಲ್ಲಿ ಚಿತ್ರಕಲೆಗೆ ಅಷ್ಟಾಗಿ ಮನ್ನಣೆ ಇರದೇ ಇದ್ದುದರಿಂದ, ಕುಟುಂಬದ ಇಚ್ಛೆಯಂತೆ ಎಂಜಿನಿಯರಿಂಗ್ ಕಾಲೇಜು ಸೇರಬೇಕಾಯಿತು. ಆದರೆ, ಕಲೆಯ ಮೇಲಿದ್ದ ಒಲವಿನಿಂದಾಗಿ ಎಂಜಿನಿಯರಿಂಗ್ ಅಧ್ಯಯನ ಅರ್ಧಕ್ಕೇ ಬಿಟ್ಟು, ಮುಂಬೈನ ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್ ಸೇರಿದರು. 1973ರಲ್ಲಿ ಚಿತ್ರಕಲೆಯಲ್ಲಿ ಡಿಪ್ಲೊಮಾ ಪದವಿ ಪಡೆದರು. ನಂತರದ ದಿನಗಳಲ್ಲಿ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡರು.

ಅವರ ಕಲಾಕೃತಿಗಳು ದೇಶ-ವಿದೇಶಗಳಲ್ಲಿ ಅಪಾರ ಪ್ರಶಂಸೆ ಗಳಿಸಿವೆ. 1976ರಿಂದ ಬೆಂಗಳೂರು, ಮೈಸೂರು, ಮುಂಬೈ ಮತ್ತು ನವದೆಹಲಿಗಳಲ್ಲಿ ಇವರ ಹಲವು ಏಕವ್ಯಕ್ತಿ ಪ್ರದರ್ಶನಗಳು ನಡೆದಿವೆ. ಮುಂಬೈನ ಜಹಾಂಗೀರ್ ಆರ್ಟ್ ಗ್ಯಾಲರಿ, ಚೆನ್ನೈನ ಸಾಕ್ಷಿ ಗ್ಯಾಲರಿ ಹಾಗೂ ನವದೆಹಲಿಯ ಆರ್ಟ್ ಟುಡೇಗಳಲ್ಲಿ ಇವರ ಕಲಾ ಪ್ರದರ್ಶನ ನಡೆದಿವೆ.

ಭೋಪಾಲ್ ಬಿನ್ನಾಲೆ (1988), ಬಾಂಬೆ ಆರ್ಟ್ ಸೊಸೈಟಿ ಶತಮಾನೋತ್ಸವ ಪ್ರದರ್ಶನ (1989) ಹಾಗೂ ಹಾಂಗ್‌ಕಾಂಗ್ ಗ್ಯಾಲರಿಗಳಲ್ಲೂ (1996) ಇವರ ಕಲಾಕೃತಿಗಳು ಪ್ರದರ್ಶನಗೊಂಡಿದ್ದವು. 1996ರಲ್ಲೇ ಜಹಾಂಗೀರ್ ಆರ್ಟ್ ಗ್ಯಾಲರಿಯಲ್ಲಿ ನಡೆದ ಸಮಕಾಲೀನ ಭಾರತೀಯ ಕಲಾವಿದರ ಪ್ರದರ್ಶನದಲ್ಲೂ ಭಾಗವಹಿಸಿದ್ದರು.

ಕಲೆಗೆ ಅವರು ಸಲ್ಲಿಸಿದ ಅನನ್ಯ ಸೇವೆ ಗುರುತಿಸಿ, 2001ರಲ್ಲಿ ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತ್ತು.

f prajavani.net prajavani

ಬುಧವಾರ, ಜುಲೈ 1, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 181 | ಪುಟ 16

www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ

ಸ್ಕ್ಯಾನ್ ಮಾಡಿ



ಜೊಕೊ ಶುಭಾರಂಭ

ಸರ್ಬಿಯಾದ ದಿಗ್ಗಜ ಆಟಗಾರ ನೊವಾಕ್ ಜೊಕೊವಿಚ್ ಅವರು ವಿಂಬಲ್ಡನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಚೀನಾದ ವು ಯಿಬಿಂಗ್ ಅವರನ್ನು ಮಣಿಸಿ ಶುಭಾರಂಭ ಮಾಡಿದರು

ಸೆನ್ಸೆಕ್ಸ್ 76,478 | ನಿಫ್ಟಿ 23,865 | $/₹ 94.56 | ಚಿನ್ನ (Std. 10g) ₹1,46,300 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,38,900 (ಬೆಂಗಳೂರು)

ಮೊಬೈಲ್ ಆ್ಯಪ್ ಬಳಕೆ ತರಬೇತಿ ಇಲ್ಲ

ಎಸ್‌ಐಆರ್: ಮಂಗಳವಾರ ಬೆಳಿಗ್ಗೆಯಷ್ಟೇ ಬಿಎಲ್‌ಒಗಳಿಗೆ ಲಭ್ಯವಾದ ಆ್ಯಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್‌ಐಆರ್) ಭಾಗವಾಗಿ ಮತದಾರರಿಗೆ ಗಣತಿ ನಮೂನೆ ವಿತರಿಸುವ ಕಾರ್ಯ ಮಂಗಳವಾರ ಆರಂಭವಾಗಿದೆ. ಆದರೆ, ಈ ಕಾರ್ಯಕ್ಕಾಗಿ ರೂಪಿಸಿರುವ ಅಪ್ಲಿಕೇಷನ್ ಬಳಕೆ ಬಗ್ಗೆ ಮತಗಟ್ಟೆ ಅಧಿಕಾರಿಗಳಿಗೆ ಪ್ರಾಯೋಗಿಕ ತರಬೇತಿ ನೀಡಿರದ ಕಾರಣ ಗಣತಿ ನಮೂನೆ ಡಿಜಿಟಲೀಕರಣಕ್ಕೆ ತೊಡಕಾಗಿದೆ.

ರಾಜ್ಯದ ಎಲ್ಲ 5.54 ಕೋಟಿ ಮತದಾರರ ಗಣತಿ ನಮೂನೆಗಳನ್ನು (ಎನ್ಯುಮರೇಷನ್ ಅರ್ಜಿ) ದ್ವಿಪ್ರತಿಯಲ್ಲಿ ಮುದ್ರಿಸಿ, ಮತಗಟ್ಟೆ ಅಧಿಕಾರಿಗಳಿಗೆ (ಬಿಎಲ್‌ಒ) ನೀಡಲಾಗಿದೆ. ಗಣತಿ ನಮೂನೆ ವಿತರಣೆ, ಡಿಜಿಟಲೀಕರಣ, ವಿವರ ತಿದ್ದುಪಡಿ, ಮತದಾರರ ಚಿತ್ರ ದಾಖಲೀಕರಣ ಮೊದಲಾದ ಪ್ರಕ್ರಿಯೆಗಳನ್ನು ಬಿಎಲ್‌ಒ ಅಪ್ಲಿಕೇಷನ್ ಮೂಲಕ ಮಾಡಬೇಕಿದೆ. ಮಂಗಳವಾರ ಬೆಳಿಗ್ಗೆಯಷ್ಟೇ ಈ ಆ್ಯಪ್ ಅನ್ನು ಬಿಎಲ್‌ಒಗಳಿಗೆ ಲಭ್ಯಗೊಳಿಸಲಾಗಿದೆ (ಎನೇಬಲ್ ಮಾಡಲಾಗಿದೆ). ಈ ಕಾರಣದಿಂದ ಆ್ಯಪ್ ಬಳಕೆ ಬಗ್ಗೆ ಪ್ರಾಯೋಗಿಕ ತರಬೇತಿಯನ್ನು ಬಿಎಲ್‌ಒಗಳಿಗೆ ನೀಡಲು ಸಾಧ್ಯವಾಗಿಲ್ಲ.

ಎಸ್‌ಐಆರ್‌ನ ಉಳಿದೆಲ್ಲಾ ಪ್ರಕ್ರಿಯೆಯ ಕುರಿತಾಗಿ ಬಿಎಲ್‌ಒಗಳಿಗೆ ಈಗಾಗಲೇ ಹಲವು ಹಂತಗಳಲ್ಲಿ ತರಬೇತಿ ನೀಡಲಾಗಿದೆ. ಆ್ಯಪ್ ಬಳಕೆ ಕುರಿತು ಪ್ರಾಯೋಗಿಕ ತರಬೇತಿ ಸಾಧ್ಯವಾಗದ ಕಾರಣಕ್ಕೆ, ವಿಡಿಯೊ ನೋಡಿಕೊಂಡು ಕಲಿತುಕೊಳ್ಳುವಂತೆ ಬಿಎಲ್‌ಒಗಳಿಗೆ ಸೂಚಿಸಲಾಗಿದೆ.

▶10

ಸಿಜೆಐಗೆ ಪತ್ರ

ನವದೆಹಲಿ: ದೇಶದಲ್ಲಿ ನಡೆಯುತ್ತಿರುವ ಎಸ್‌ಐಆರ್ ಹಾಗೂ ಈ ಪ್ರಕ್ರಿಯೆಯಲ್ಲಿ ಚುನಾವಣಾ ಆಯೋಗದ ಪಾತ್ರ ಕುರಿತು ಗಮನ ಹರಿಸುವಂತೆ ಕೋರಿ 23 ವಿರೋಧ ಪಕ್ಷಗಳು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರಿಗೆ ಮಂಗಳವಾರ ಜಂಟಿ ಪತ್ರ ಸಲ್ಲಿಸಿವೆ.



ಡಿ.ಕೆ.ಶಿವಕುಮಾರ್ ಅವರು ಗಣತಿ ನಮೂನೆ ಕುರಿತಾಗಿ ಮತಗಟ್ಟೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಅವರ ಪತ್ನಿ ಉಷಾ ಅವರು ಉಪಸ್ಥಿತರಿದ್ದರು

‘ಒಂದೆರಡು ದಿನದಲ್ಲಿ ಸರಿಹೋಗಲಿದೆ’

‘ಬಿಎಲ್‌ಒಗಳಿಗೆ ಆ್ಯಪ್ ಅನ್ನು ಮಂಗಳವಾರವಷ್ಟೇ ಲಭ್ಯಗೊಳಿಸಿದೆ. ಹೀಗಾಗಿ ಪೂರ್ಣ ಪ್ರಮಾಣದ ತರಬೇತಿ ನೀಡಲು ಸಾಧ್ಯವಾಗದೇ ಇರಬಹುದು. ಒಂದೆರಡು ದಿನಗಳಲ್ಲಿ ಈ ಸಮಸ್ಯೆ ಬಗೆಹರಿಯಲಿದೆ. ಇದರ ಹೊರತಾಗಿ ಗಣತಿ ನಮೂನೆ ವಿತರಣೆ ಕಾರ್ಯ ಸರಾಗವಾಗಿ ನಡೆದಿದೆ’ ಎಂದು ಚುನಾವಣಾಧಿಕಾರಿ ಕಚೇರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಮೊದಲ ದಿನದ ತೊಡಕು–ತಗಾದೆ

- ಗಣತಿ ನಮೂನೆ ವಿತರಣೆಯ ನಂತರ ಮನೆಯ ಗೋಡೆಯ ಮೇಲೆ ಚೀಟಿ ಅಂಟಿಸಬೇಕಿದೆ. ಆದರೆ, ಒಂದೇ ಕುಟುಂಬದ ಸದಸ್ಯರು ಎರಡು ಅಥವಾ ಮೂರು ಮತಗಟ್ಟೆಗಳಲ್ಲಿ ಹಂಚಿಹೋಗಿದ್ದಾರೆ. ಅಂತಹ ಮನೆಗಳಿಗೆ ಯಾವ ಬಿಎಲ್‌ಒ ಚೀಟಿ ಅಂಟಿಸಬೇಕು ಎಂಬ ಗೊಂದಲ ಉಂಟಾಗಿತ್ತು.
- ಬೆಂಗಳೂರಿನ ವೈಯಾಲಿಕಾವಲ್, ಶ್ರೀರಾಂಪುರ, ಗೋಪಾಲಪುರ ಭಾಗದಲ್ಲಿ ತಮಿಳು ಭಾಷಿಕರ ಸಂಖ್ಯೆ ಹೆಚ್ಚು ಇದೆ. ಈ ಪ್ರದೇಶದಲ್ಲಿ ಕನ್ನಡದಲ್ಲಿ ಇರುವ ಗಣತಿ ನಮೂನೆಗಳನ್ನು ವಿತರಿಸಲಾಗಿದೆ. ಇದು ಗೊಂದಲಕ್ಕೆ ಕಾರಣವಾಗಿದೆ.
- ಬೆಂಗಳೂರಿನ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಬಿಎಲ್‌ಒಗಳು ಮನೆ–ಮನೆ ಭೇಟಿ ನೀಡುವ ವಿಚಾರವಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ಮಧ್ಯೆ ಜಟಾಪಟಿ ನಡೆದಿದೆ.

ಜುಲೈನಲ್ಲೂ ಮಳೆ ಕೊರತೆ

ನವದೆಹಲಿ (ಪಿಟಿಐ): ‘ದೇಶವು ತೀವ್ರವಾದ ಮುಂಗಾರು ಮಳೆ ಕೊರತೆ ಎದುರಿಸುತ್ತಿದ್ದು, ಜೂನ್ ಬಳಿಕ, ಇದೀಗ ಜುಲೈ ತಿಂಗಳಲ್ಲೂ ವಾಡಿಕೆಗಿಂತಲೂ ಕಡಿಮೆ ಮಳೆಯಾಗಲಿದೆ’ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಹೇಳಿದೆ.

ವಿವರ ▶7



ನೀಟ್ ಅವ್ಯವಸ್ಥೆ ವಿರುದ್ಧ ಸಚಿವರ ಸಭೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ನೀಟ್ ಸೇರಿದಂತೆ ಕೇಂದ್ರ ಸರ್ಕಾರ ನಡೆಸುವ ಪರೀಕ್ಷೆಗಳ ವ್ಯವಸ್ಥೆ ಸುಧಾರಿಸಬೇಕು. ಇಲ್ಲದಿದ್ದರೆ ಪರೀಕ್ಷೆಗಳ ಹೊಣೆಯನ್ನು ರಾಜ್ಯ ಸರ್ಕಾರಕ್ಕೆ ಒಪ್ಪಿಸಬೇಕು’ ಎಂದು ಒತ್ತಡ ಹೇರಲು ಎಲ್ಲ ರಾಜ್ಯಗಳ ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಸಚಿವರ ಸಭೆ ಕರೆಯಲು ಕರ್ನಾಟಕ ಸರ್ಕಾರ ಸಿದ್ಧತೆ ನಡೆಸಿದೆ.

‘ಕಳೆದ ಐದು ವರ್ಷಗಳಿಂದ ನೀಟ್ ಪರೀಕ್ಷೆಗಳಲ್ಲಿ ಅವ್ಯವಸ್ಥೆ ಉಂಟಾಗುತ್ತಿದೆ. ಇದರಿಂದಾಗಿ, ಲಕ್ಷಾಂತರ ವಿದ್ಯಾರ್ಥಿಗಳು ತೊಂದರೆ ಅನುಭವಿಸಿದ್ದಾರೆ. ನೀಟ್ ಪರೀಕ್ಷೆ ನಡೆಸುವ ಹೊಣೆಯನ್ನು ರಾಜ್ಯಕ್ಕೆ ನೀಡುವಂತೆ ಒತ್ತಾಯಿಸಿ ವಿಧಾನಮಂಡಲದ ನಿರ್ಣಯ ತೆಗೆದುಕೊಳ್ಳಲಾಗಿದೆ. ಇದೀಗ, ಕೇಂದ್ರದ ಮೇಲೆ ಒತ್ತಡ ಹೇರಲು ಸಚಿವರ ಸಭೆ ನಡೆಸಲು ಯೋಜಿಸಲಾಗಿದೆ’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ತಿಳಿಸಿದರು.

ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ಅವರು ಈ ವಿಷಯ ತಿಳಿಸಿದರು.

▶10

‘ಪತ್ನಿಗೆ ಪೋಷಕರ ನೆರವಿದ್ದರೂ ಜೀವನಾಂಶ ನಿರಾಕರಿಸುವಂತಿಲ್ಲ’



ಪ್ರಯಾಗರಾಜ್ (ಪಿಟಿಐ): ವಿಚ್ಛೇದಿತ ಮಹಿಳೆಗೆ ತಂದೆ–ತಾಯಿಯಿಂದ ಆರ್ಥಿಕ ನೆರವು ದೊರೆಯುತ್ತದೆ ಎಂಬ ಕಾರಣಕ್ಕೆ ಪತಿಯು ಜೀವನಾಂಶ ನಿರಾಕರಿಸುವಂತಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ಹೇಳಿದೆ.

ಬುಲಂದ್‌ಶಹರ್‌ನ ಕೌಟುಂಬಿಕ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಮಹಿಳೆ ಮತ್ತು ಆಕೆಯ ಅಪ್ರಾಪ್ತ ವಯಸ್ಸಿನ ಇಬ್ಬರು ಮಕ್ಕಳು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯವು, ಮೇಲಿನ ಅಭಿಪ್ರಾಯವನ್ನು ವ್ಯಕ್ತಪಡಿಸಿತು.

ನ್ಯಾಯಮೂರ್ತಿ ಗರೀಮಾ ಪ್ರಸಾದ್ ಅವರು, ‘ಸಿಆರ್‌ಪಿಸಿಯ ಸೆಕ್ಷನ್ 125ರ ಅಡಿಯಲ್ಲಿ ಪತ್ನಿಯ ಪೋಷಕರು ಆಕೆಗೆ ಆರ್ಥಿಕವಾಗಿ ನೆರವಾಗಿದ್ದಾರೆ ಎಂಬ ಕಾರಣಕ್ಕಾಗಿ ಪತಿಯು ಆಕೆಗೆ ಜೀವನಾಂಶ ನಿರಾಕರಿಸುವಂತಿಲ್ಲ’ ಎಂದು ಹೇಳಿದರು. ಬಳಿಕ ಪತ್ನಿಗೆ ಜೀವನಾಂಶವಾಗಿ ಪ್ರತಿ ತಿಂಗಳು ₹5,000 ಮತ್ತು ಮಕ್ಕಳ ಪಾಲನೆ ಪೋಷಣೆಗಾಗಿ ತಲಾ ₹4,000 ನೀಡಲು ಆದೇಶಿಸಿದರು.

ಕೌಟುಂಬಿಕ ನ್ಯಾಯಾಲಯವು 2023ರ ಡಿಸೆಂಬರ್‌ನಲ್ಲಿ, ‘ಮಕ್ಕಳ ಪಾಲನೆ ಪೋಷಣೆಗಾಗಿ ಪ್ರತಿ ಮಗುವಿಗೆ ₹3,000ದಂತೆ ಜೀವನಾಂಶ ನೀಡಬೇಕು’ ಎಂದು ಆದೇಶಿಸಿತ್ತು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಮಳೆಯಾಗುವ ಸಾಧ್ಯತೆ ಇದೆ

ಬೀದಿ ನಾಯಿ ನಿಯಂತ್ರಣ: 3 ವರ್ಷ ಗಡುವು

ಪ್ರತಿ ವರ್ಷ 90 ಸಾವಿರ ನಾಯಿಗಳಿಗೆ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ನಡೆಸಿ: ಕೃಷ್ಣ ಬೈರೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಮುಂದಿನ ಮೂರು ವರ್ಷಗಳಲ್ಲಿ ಬೀದಿನಾಯಿಗಳನ್ನು ಸಂಪೂರ್ಣವಾಗಿ ನಿಯಂತ್ರಿಸಲು ಸಮಗ್ರ ಕಾರ್ಯಸೂಚಿ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಜಿಬಿಎ ವ್ಯಾಪ್ತಿಯಲ್ಲಿ ಪಶುಸಂಗೋಪನೆ ಹಾಗೂ ಸಸಿಗಳನ್ನು ನೆಟ್ಟು ಪೋಷಿಸುವಿಕೆ ಕುರಿತು ಮಂಗಳವಾರ ಸಭೆ ನಡೆಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, 'ಐದು ದಶಕದಿಂದ ಪ್ರಯತ್ನಿಸುತ್ತಿದ್ದರೂ ನಗರದಲ್ಲಿ ನಿರೀಕ್ಷೆಯಂತೆ ಬೀದಿನಾಯಿಗಳನ್ನು ನಿಯಂತ್ರಿಸಲು ಸಾಧ್ಯವಾಗಿಲ್ಲ. ನಾಗರಿಕರ ಆತಂಕ ಮತ್ತು ಅಭಿಪ್ರಾಯಗಳಿಗೆ ಸರ್ಕಾರ ಸ್ಪಂದಿಸುತ್ತಿದ್ದು, ಪರಿಣಾಮಕಾರಿ ಪರಿಹಾರ ಕಂಡುಕೊಳ್ಳಲಾಗುವುದು' ಎಂದು ಹೇಳಿದರು.

'ಸಾರ್ವಜನಿಕರ ತೆರಿಗೆ ಹಣವನ್ನು ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಗೆ ವ್ಯಯಿಸುತ್ತಿದ್ದರೂ ನಿರೀಕ್ಷಿತ ಫಲಿತಾಂಶ ದೊರೆತಿಲ್ಲ. ಬೀದಿ ನಾಯಿಗಳಿಂದ ಸಾರ್ವಜನಿಕರು ಎದುರಿಸುತ್ತಿರುವ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲು ಸೂಚಿಸಲಾಗಿದೆ' ಎಂದು ಹೇಳಿದರು.

'ಪ್ರತಿ ವರ್ಷ ನಡೆಸುತ್ತಿರುವ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಪ್ರಮಾಣವನ್ನು ದುಪ್ಪಟ್ಟುಗೊಳಿಸುವಂತೆ ಸೂಚಿಸಲಾಗಿದೆ. ಅದರಂತೆ 90 ಸಾವಿರ ನಾಯಿಗಳಿಗೆ ಶಸ್ತ್ರಚಿಕಿತ್ಸೆ ಮಾಡಲಾಗುವುದು. ಅದಕ್ಕೆ ಅಗತ್ಯ ಮೂಲಸೌಕರ್ಯ ಮತ್ತು ಸಂಪನ್ಮೂಲಗಳನ್ನು ಹೆಚ್ಚಿಸಲಾಗುವುದು. ಇದೇ ರೀತಿ ಮೂರು ವರ್ಷಗಳ ಕಾಲ ನಿರಂತರವಾಗಿ ಕಾರ್ಯನಿರ್ವಹಿಸಿ ನಗರದಲ್ಲಿ ನಾಯಿಗಳನ್ನು ಸಂಪೂರ್ಣ ನಿಯಂತ್ರಿಸಬೇಕೆಂದು ಸೂಚಿಸಲಾಗಿದೆ' ಎಂದರು.

ಸಂಸ್ಥೆಗಳ ಸೇವೆ ಬಳಸಿ: 'ನಿಯಂತ್ರಣ ಕಾರ್ಯವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹೆಚ್ಚಿನ ಸಂಸ್ಥೆಗಳನ್ನು ತೊಡಗಿಸಿಕೊಳ್ಳಬೇಕು. ನಾಗರಿಕರಲ್ಲಿ ಜಾಗೃತಿ ಮೂಡಿಸಬೇಕು. ಆಸಕ್ತ ಸಂಸ್ಥೆಗಳು ಹಾಗೂ ಸಂಘಟನೆಗಳನ್ನು ಪ್ರೋತ್ಸಾಹಿಸಬೇಕು. ಬೆಂಗಳೂರು ನಗರದಲ್ಲಿರುವ ಸಂಸ್ಥೆಗಳ ಜೊತೆಗೆ ಇತರೆ ನಗರಗಳ ಸಂಸ್ಥೆಗಳಿಗೂ ಅವಕಾಶ ಕಲ್ಪಿಸಿ ಕಾರ್ಯಸಾಮರ್ಥ್ಯ ಹೆಚ್ಚಿಸಲು ಸೂಚಿಸಲಾಗಿದೆ' ಎಂದು ತಿಳಿಸಿದರು.

'ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪಶುವೈದ್ಯರ ಜೊತೆಗೆ ಹೊರಗುತ್ತಿಗೆ ಆಧಾರದ ಮೇಲೆ ಹೆಚ್ಚುವರಿ ವೈದ್ಯರನ್ನು ನೇಮಕ ಮಾಡಿಕೊಂಡು ಶಸ್ತ್ರಚಿಕಿತ್ಸೆಯ ಪ್ರಮಾಣವನ್ನು ಹೆಚ್ಚಿಸುವಂತೆಯೂ ಸೂಚಿಸಲಾಗಿದೆ' ಎಂದು ಹೇಳಿದರು.

'ಪ್ರಸಕ್ತ ಸಾಲಿನಲ್ಲಿ ಸಾರ್ವಜನಿಕರು ಹಾಗೂ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಸಹಭಾಗಿತ್ವದಲ್ಲಿ ಸಸಿ ನೆಟ್ಟು ಪೋಷಿಸಲಾಗುವುದು. ಈ ಸಂಬಂಧ ಪ್ರತಿಯೊಂದು ಪಾಲಿಕೆಯೂ ಸಮಗ್ರ ಯೋಜನೆ ರೂಪಿಸಿ ಅನುಷ್ಠಾನಗೊಳಿಸುವಂತೆ ಸೂಚಿಸಲಾಗಿದೆ' ಎಂದು ಹೇಳಿದರು.

'ನಗರದಲ್ಲಿ ಸಸಿ ನೆಡುವ ಕಾರ್ಯದಲ್ಲಿ ನಾಗರಿಕರಿಗೆ ಮೊದಲ ಆದ್ಯತೆ ನೀಡಲಾಗುವುದು. ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಸಸಿಗಳ ಕುರಿತು ಬೇಡಿಕೆ ಸಲ್ಲಿಸಿದರೆ, ಪೂರೈಸಿ ನೆಡುವ ವ್ಯವಸ್ಥೆ ಮಾಡಲಾಗುವುದು. ಬಳಿಕ ರಸ್ತೆ ಬದಿ ಹಾಗೂ ಕೆರೆಗಳ ಸುತ್ತಮುತ್ತ ಸಸಿ ನೆಡಲಾಗುವುದು. ಮೇಲ್ವಿಚಾರಣೆಗಾಗಿ ಸಹಾಯಕ ಎಂಜಿನಿಯರ್‌ಗಳನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗುವುದು' ಎಂದು ಹೇಳಿದರು.

ಸಭೆಯಲ್ಲಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್, ಪಾಲಿಕೆ ಆಯುಕ್ತರಾದ ರಮೇಶ್ ಡಿ.ಎಸ್., ಪೊಮ್ಮಲ ಸುನೀಲ್ ಕುಮಾರ್, ಜಿ. ಜಗದೀಶ್, ರಮೇಶ್ ಕೆ.ಎನ್., ಡಾ.ರಾಜೇಂದ್ರ ಕೆ.ವಿ., ವಿಶೇಷ ಆಯುಕ್ತರಾದ ವೆಂಕಟಾಚಲಪತಿ ಪಾಲ್ಗೊಂಡಿದ್ದರು.

ಸಸಿ ನೆಡುವ ಯೋಜನೆ

64,130	ಪ್ರಸಕ್ತ ಸಾಲಿನಲ್ಲಿ ನೆಡಲು ಉದ್ದೇಶಿಸಿರುವ ಸಸಿಗಳು
20 ಲಕ್ಷ	18 ವರ್ಷದಲ್ಲಿ ನೆಡಲಾಗಿರುವ ಸಸಿಗಳು
85%	ಇದುವರೆಗೆ ನಡೆದಿರುವ ಮರಗಳ ಸಮೀಕ್ಷೆ
11 ಲಕ್ಷ	ಸಮೀಕ್ಷೆಯ ಪ್ರಕಾರ ಇರುವ ಮರಗಳು

'ಪಾದಚಾರಿ ಮಾರ್ಗ: ಯಾರನ್ನೂ ಒಕ್ಕಲೆಬ್ಬಿಸುತ್ತಿಲ್ಲ'

'ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆಯನ್ನು ನಡೆಸಲಾಗುತ್ತಿದೆಯೇ ಹೊರತು ಯಾರನ್ನೂ ಒಕ್ಕಲೆಬ್ಬಿಸುವ ಕೆಲಸವನ್ನು ಮಾಡುತ್ತಿಲ್ಲ' ಎಂದು ಸಚಿವರು ಸ್ಪಷ್ಟಪಡಿಸಿದರು.

'ನಗರದಲ್ಲಿ ಸುಮಾರು ಶೇಕಡ 20ರಷ್ಟು ಪ್ರಮುಖ ರಸ್ತೆಗಳಲ್ಲಿ ಮಾತ್ರ ಪಾದಚಾರಿಗಳ ಸುರಕ್ಷತೆ ದೃಷ್ಟಿಯಿಂದ ಬೀದಿ ವ್ಯಾಪಾರ ಮಾಡದಂತೆ ಮನವಿ ಮಾಡಲಾಗಿದೆ. ಉಳಿದ ಶೇಕಡ 80ರಷ್ಟು ರಸ್ತೆಗಳಲ್ಲಿ ವ್ಯಾಪಾರ ನಡೆಸಲು ಅವಕಾಶವಿದೆ' ಎಂದರು.

'ಪಾದಚಾರಿಗಳಿಗೆ ಸುಗಮ ಸಂಚಾರ ಕಲ್ಪಿಸಲು ಎಲ್ಲರೂ ಸಹಕರಿಸಬೇಕು. ಅಂಗಡಿ ಮುಂಭಾಗದಲ್ಲಿ ಅಕ್ರಮ ಒತ್ತುವರಿ ಮಾಡಿಕೊಂಡಿರುವವರು ಸ್ವಯಂಪ್ರೇರಿತವಾಗಿ ತೆರವುಗೊಳಿಸಬೇಕು. ಇಲ್ಲದಿದ್ದರೆ ನಿಯಮಾನುಸಾರ ತೆರವುಗೊಳಿಸಿ ದಂಡ ವಿಧಿಸಲಾಗುವುದು' ಎಂದು ಸಚಿವರು ಎಚ್ಚರಿಕೆ ನೀಡಿದರು.

ಸಸಿಗಳ ಮಾಹಿತಿ: ಸ್ಪಷ್ಟತೆ ಇಲ್ಲ

'16 ವರ್ಷಗಳ ಅವಧಿಯಲ್ಲಿ ಸುಮಾರು 20 ಲಕ್ಷ ಸಸಿಗಳನ್ನು ನೆಟ್ಟಿರುವುದಾಗಿ ದಾಖಲೆಗಳಿವೆ. ಆದರೆ, ಮರಗಳ ಗಣತಿ ವೇಳೆ ಸುಮಾರು 11 ಲಕ್ಷ ಮರಗಳಷ್ಟೇ ಇರುವ ಸಾಧ್ಯತೆ ಕಂಡುಬಂದಿದೆ. ಉಳಿದ ಸಸಿಗಳ ಕುರಿತು ಸ್ಪಷ್ಟ ಮಾಹಿತಿ ಲಭ್ಯವಿಲ್ಲ. ಪ್ರತಿಯೊಂದು ಸಸಿ ನೆಡುವ ಕಾರ್ಯಕ್ಕೂ ಸಂಪೂರ್ಣ ಉತ್ತರದಾಯಿತ್ವ ಮತ್ತು ದಾಖಲೆ ನಿರ್ವಹಣೆ ಕಡ್ಡಾಯವಾಗಬೇಕು ಎಂದು ಸೂಚಿಸಲಾಗಿದೆ' ಎಂದು ಹೇಳಿದರು.

'ಒಂದು ಸಸಿ ನೆಡುವ ಪ್ರಕ್ರಿಯೆಯಲ್ಲಿ ಗುಂಡಿ ತೋಡುವುದು, ಮುಚ್ಚುವುದು, ಸಸಿ ಖರೀದಿ, ರಕ್ಷಣಾ ಕವಚ ಅಳವಡಿಕೆ, ಕಡ್ಡಿ ಅಳವಡಿಕೆ, ನೀರುಣಿಸುವುದು, ಕಾವಲು, ಮೂರು ವರ್ಷಗಳ ನಿರ್ವಹಣೆ ಹಾಗೂ ಇತರೆ ವೆಚ್ಚಗಳು ಸೇರಿ ಸುಮಾರು ₹2,300 ವ್ಯಯವಾಗುತ್ತದೆ. ಬದಲಿ ಸಸಿ ನೆಡುವ ಕಡ್ಡಾಯ ಅರಣ್ಯೀಕರಣ ಯೋಜನೆಯಲ್ಲಿ ಪ್ರತಿ ಸಸಿಗೆ ಸುಮಾರು ₹3,108 ವೆಚ್ಚವಾಗುತ್ತದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ' ಎಂದು ಸಚಿವರು ತಿಳಿಸಿದರು. '2.5 ಅಡಿ ಉದ್ದ, 2.5 ಅಡಿ ಅಗಲ ಹಾಗೂ 2.5 ಅಡಿ ಆಳದ ಗುಂಡಿ ಅಗೆದು ಸಸಿ ನೆಡಬೇಕು. ಆದರೆ ಕೆಲವೆಡೆ ಪಾದಚಾರಿ ಮಾರ್ಗದ ಪೇವರ್ಸ್ ತೆಗೆದು ಸಸಿ ನೆಡುವುದು ಕಂಡುಬಂದಿದೆ. ಹಾಗೆ ಮಾಡದಂತೆ ಸೂಚಿಸಲಾಗಿದೆ' ಎಂದರು.

2000	ಬೀದಿನಾಯಿಗಳ ಸಂಪೂರ್ಣ ನಿಯಂತ್ರಣ ಕಾರ್ಯ ಶುರುವಾದ ವರ್ಷ
8.80 ಲಕ್ಷ	ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಗೊಳಗಾದ ನಾಯಿಗಳು
3.10 ಲಕ್ಷ	2019ರ ಸಮೀಕ್ಷೆ ಪ್ರಕಾರ ನಗರದಲ್ಲಿರುವ ನಾಯಿಗಳು
2.79 ಲಕ್ಷ	2023ರ ಸಮೀಕ್ಷೆ ಪ್ರಕಾರ ನಗರದಲ್ಲಿರುವ ನಾಯಿಗಳು
45,000	ಪ್ರತಿ ವರ್ಷ ನಡೆಯುವ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಗಳು
₹42 ಕೋಟಿ	ಐದು ವರ್ಷಗಳಲ್ಲಿ ಶಸ್ತ್ರಚಿಕಿತ್ಸೆಗೆ ಮಾಡಿದ ವೆಚ್ಚ

ಎತ್ತಿನಹೊಳೆಗೆ ₹4,708 ಕೋಟಿ: ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬರ ಪೀಡಿತ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸುವ ಎತ್ತಿನಹೊಳೆ ಯೋಜನೆಯ ವೆಚ್ಚದ ಪೈಕಿ ₹4,708.14 ಕೋಟಿಯನ್ನು ಜಲ ಜೀವನ್ ಮಿಷನ್ ಅಡಿಯಲ್ಲಿ ಭರಿಸುವಂತೆ ಕೇಂದ್ರ ಸರ್ಕಾರಕ್ಕೆ ಕೋರಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು.



ಸಿ.ಆರ್.ಪಾಟೀಲ ಅವರಿಗೆ ಈಶ್ವರ ಖಂಡ್ರೆ ಹೂಗುಚ್ಛ ನೀಡಿದರು. ವಿ.ಸೋಮಣ್ಣ ಇದ್ದರು

ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ ಹಾಗೂ ರಾಜ್ಯ ಸಚಿವ ವಿ. ಸೋಮಣ್ಣ ಅವರನ್ನು ನವದೆಹಲಿಯಲ್ಲಿ ಮಂಗಳವಾರ ಭೇಟಿ ಮಾಡಿ ಅವರು ಮನವಿ ಸಲ್ಲಿಸಿದರು.

ನೀರಿನ ಕೊರತೆಯಿರುವ ಕೋಲಾರ, ಚಿಕ್ಕಬಳ್ಳಾಪುರ, ಹಾಸನ, ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಜಿಲ್ಲೆಗಳ ಸುಮಾರು 6,657 ಹಳ್ಳಿಗಳು ಮತ್ತು 38 ಪಟ್ಟಣಗಳ 75.59 ಲಕ್ಷ ಜನರಿಗೆ ಕುಡಿಯುವ ನೀರು ಪೂರೈಸುವ ಈ ಯೋಜನೆಯನ್ನು ಜೆಜೆಎಂ ಯೋಜನೆಯಡಿ ಪರಿಗಣಿಸುವಂತೆ ಕೋರಲಾಗಿದೆ ಎಂದರು.

ಎತ್ತಿನಹೊಳೆ ಯೋಜನೆಯನ್ನು ರಾಜ್ಯ ಸರ್ಕಾರವೇ ಬಹುತೇಕ ಪೂರ್ಣಗೊಳಿಸಿದೆ. ಇನ್ನೂ ಸುಮಾರು ₹9,416.28 ಕೋಟಿ ಮೊತ್ತದ ಉಳಿಕೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕೇಂದ್ರ ಸರ್ಕಾರದಿಂದ ಶೇಕಡ 50ರಷ್ಟು ಪಾಲು ನೀಡುವಂತೆ ಕೋರಿ ಈ ಮನವಿ ಪತ್ರ ಸಲ್ಲಿಸಲಾಗಿದೆ ಎಂದು ಅವರು ತಿಳಿಸಿದರು.

ಈ ಯೋಜನೆಯ ಮೂಲಕ ಪಶ್ಚಿಮ ಘಟ್ಟಗಳ ಮೇಲ್ಭಾಗದಿಂದ ಬರಪೀಡಿತ ಜಿಲ್ಲೆಗಳಿಗೆ 24.01 ಟಿಎಂಸಿ ನೀರು ಪೂರೈಸಲಾಗುತ್ತದೆ. ಇದರಲ್ಲಿ 14.056 ಟಿಎಂಸಿಯನ್ನು ಕುಡಿಯುವ ನೀರು ಹಾಗೂ 9.953 ಟಿಎಂಸಿ ನೀರನ್ನು ಅಂತರ್ಜಲ ಮರುಪೂರಣಕ್ಕಾಗಿ ಬಳಸಲಾಗುವುದು ಎಂದರು.

ಕೇಂದ್ರವೇ ವೆಚ್ಚ ಭರಿಸಲು ಮನವಿ: ಸಂವರ್ಧನೆ ಮತ್ತು ಮರು ಸುಧಾರಣೆ ಕಾಮಗಾರಿಗಳ ವೆಚ್ಚವನ್ನು ಜಲ ಜೀವನ ಮಿಷನ್ ಅಡಿಯಲ್ಲಿ ಕೇಂದ್ರ ಸರ್ಕಾರ ಭರಿಸಬೇಕು ಎಂದು ಅವರು ಮನವಿ ಮಾಡಿದರು. ಜೆಜೆಎಂ ಕಾಮಗಾರಿಗಳ ನವೀಕರಣ ಮತ್ತು ತ್ವರಿತ ಯೋಜನೆ ಕಾಮಗಾರಿಗಳಿಗೆ ಕೇಂದ್ರ ಸರ್ಕಾರವು ವೆಚ್ಚ ಭರಿಸುವುದಿಲ್ಲ ಮತ್ತು ಅಂತಹ ಕಾಮಗಾರಿಗಳನ್ನು ರಾಜ್ಯ ಸರ್ಕಾರದ ಸಂಪನ್ಮೂಲದ ಮೂಲಕ ಪೂರ್ಣಗೊಳಿಸಬೇಕು ಎಂದು ಜಲಶಕ್ತಿ ಸಚಿವಾಲಯವು 2025ರ ಆಗಸ್ಟ್ ಹಾಗೂ ಡಿಸೆಂಬರ್‌ನಲ್ಲಿ ಪತ್ರ ಬರೆದಿತ್ತು. ಇದರಿಂದಾಗಿ, ರಾಜ್ಯದ ಮೇಲೆ ಹೆಚ್ಚಿನ ಹೊರೆ ಹೊರಿಸಿದಂತಾಗಿದೆ ಎಂದು ಅವರು ತಿಳಿಸಿದರು.

ಇಂತಹ ಯೋಜನೆಗಳ ಅಂದಾಜು ವೆಚ್ಚ ₹25,451 ಕೋಟಿ ಆಗಿದ್ದು, ರಾಜ್ಯವು ₹14,382 ಕೋಟಿ ವೆಚ್ಚ ಮಾಡಿದೆ. ₹11,069 ಕೋಟಿ ಮರು ಪಾವತಿ ಮಾಡಬೇಕಿದೆ. ಈ ಹಣವನ್ನು ಕೇಂದ್ರ ಸರ್ಕಾರ ಭರಿಸಬೇಕು ಎಂದು ಆಗ್ರಹಿಸಿದರು.

ಬಹುಗ್ರಾಮ ಕುಡಿಯುವ ನೀರು ಯೋಜನೆಗೆ ಕೋರಿಕೆ: ಬೀದರ್ ಮತ್ತು ಕಲಬುರಗಿ ಜಿಲ್ಲೆಗಳಿಗೆ ಕುಡಿಯುವ ನೀರು ಖಾತ್ರಿಪಡಿಸುವ ಬಹು ಗ್ರಾಮ ಕುಡಿಯುವ ಯೋಜನೆಗೆ ಅನುಮೋದನೆ ನೀಡಬೇಕು ಎಂದು ಈಶ್ವರ ಖಂಡ್ರೆ ಕೋರಿದರು.

ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ನಾರಾಯಣಪುರ ಜಲಾಶಯದ ಸಂಗ್ರಹಣೆಯಿಂದ ನೀರನ್ನು ಎತ್ತುವಳಿ ಮಾಡುವ ಉದ್ದೇಶದ ಯೋಜನೆಗೆ ಅಂದಾಜು ವೆಚ್ಚ ₹7,200 ಕೋಟಿ ಆಗುತ್ತದೆ. ಬೀದರ್ ಮತ್ತು ಕಲಬುರಗಿ ಜಿಲ್ಲೆಗಳ ಒಟ್ಟು 28 ಲಕ್ಷ ಜನರಿಗೆ ಕುಡಿಯುವ ನೀರು ಪೂರೈಸಲು ಈ ಯೋಜನೆ ಸಹಕಾರಿ ಆಗಲಿದೆ ಎಂದು ಅವರು ತಿಳಿಸಿದರು.

ಚಿಕ್ಕಪೇಟೆ ಅಕ್ರಮ ಕಟ್ಟಡಗಳ ಸಮೀಕ್ಷೆ

ಬೆಂಗಳೂರು: ನಗರದ ಹಳೆಯ ಮಾರುಕಟ್ಟೆ ಪ್ರದೇಶಗಳಲ್ಲಿ ಒಂದಾದ ಚಿಕ್ಕಪೇಟೆಯಲ್ಲಿರುವ ಅನಧಿಕೃತ ಕಟ್ಟಡಗಳನ್ನು ಗುರುತಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ನಿರ್ಧರಿಸಿದ್ದು, ಸಮಗ್ರವಾಗಿ ಸಮೀಕ್ಷೆ ನಡೆಸಲು ನಗರ ಯೋಜನಾಧಿಕಾರಿಗಳನ್ನು ಒಳಗೊಂಡ ವಿಶೇಷ ಸಮಿತಿಯನ್ನು ರಚಿಸುವಂತೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚಿಸಿದರು.

'ಚಿಕ್ಕಪೇಟೆಯಂಥ ಸೂಕ್ಷ್ಮ ಪ್ರದೇಶಗಳಲ್ಲಿ ಬೆಂಕಿ ಅನಾಹುತಗಳು ನಡೆಯುವ ಸಾಧ್ಯತೆಗಳನ್ನು ಪರಿಗಣಿಸಿ, ಕೂಡಲೇ ಅಗ್ನಿಸುರಕ್ಷತೆಯ ಪರಿಶೀಲನೆ ನಡೆಸಬೇಕು, 'ಕಟ್ಟಡಗಳಲ್ಲಿ ತುರ್ತು ನಿರ್ಗಮನ ಬಾಗಿಲು/ಕಿಟಕಿಗಳಿವೆಯೇ? ಅಗ್ನಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ? ಎಂಬುದನ್ನು ಕೂಲಂಕಷವಾಗಿ ಪರಿಶೀಲಿಸಬೇಕು' ಎಂದರು.

ಸುದ್ದಿ 2 ನಿಮಿಷ

'ಸೆಲ್ಫಿಬುಕ್' ಆ್ಯಪ್ ಲೋಕಾರ್ಪಣೆ

ಬೆಂಗಳೂರು: ಕೃತಕ ಬುದ್ಧಿಮತ್ತೆ ಆಧಾರಿತ ಡಿಜಿಟಲ್ ಐಡೆಂಟಿಟಿ ಮತ್ತು ಎಂಗೇಜ್‌ಮೆಂಟ್ ಮಾನಿಟೈಸೇಶನ್ ಸಲುವಾಗಿ ರೂಪಿಸಿರುವ 'ಸೆಲ್ಫಿಬುಕ್' ಆ್ಯಪ್ ಅನ್ನು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಲೋಕಾರ್ಪಣೆ ಮಾಡಿದರು.

ವಿಶ್ವ ಸಾಮಾಜಿಕ ಜಾಲತಾಣಗಳ ದಿನವಾದ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, 'ಯುವಜನರ ಅಭಿವ್ಯಕ್ತಿ ಸಾಮರ್ಥ್ಯಗಳಿಗೆ ತಕ್ಕಂತೆ ನೂತನ ತಂತ್ರಜ್ಞಾನಗಳು ಸಿಗುವಂತಿರಬೇಕು. ಸೆಲ್ಫಿಬುಕ್‌ನಂತಹ ಸ್ವದೇಶಿ ತಂತ್ರಜ್ಞಾನವು ಸಾಮಾನ್ಯ ಬಳಕೆದಾರರು ಮತ್ತು ಸಣ್ಣ ಉದ್ಯಮಿಗಳಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಬಲ್ಲವು' ಎಂದರು.

ಶಾಸಕರಾದ ಕೆ.ಎಸ್. ನವೀನ್, ಸಲೀಂ ಅಹ್ಮದ್, 'ಸ್ವದೇಶಿ ತಂತ್ರಜ್ಞಾನ ವೇದಿಕೆಗಳಿಗೆ ಬೆಂಬಲ ಅಗತ್ಯ' ಎಂದರು. ಗೌರಿಗದ್ದೆ ಆಶ್ರಮದ ವಿನಯ್ ಗುರೂಜಿ ಮಾತನಾಡಿದರು.

ಸೆಲ್ಫಿಬುಕ್ ಆ್ಯಪ್‌ನಲ್ಲಿ ಸೆಲ್ಫಿ, ಶಾಟ್ಸ್, ಪಿಂಗ್, ಫೀಡ್, ಜಾಬ್ಸ್, ವೀವ್ ಪ್ರೈಸ್ ಹಾಗೂ ಕ್ಲುಸ್ಟರ್ ಸೇರಿ ಹಲವು ವೈಶಿಷ್ಟ್ಯಗಳನ್ನು ಅಳವಡಿಸಲಾಗಿದೆ. ಡಿಜಿಟಲ್ ವಹಿವಾಟು ಮತ್ತು ರಿವಾರ್ಡ್‌ಗಳಿಗಾಗಿ ವಿಶೇಷ ಯುಟಿಲಿಟಿ ಕಾಯಿನ್ ವ್ಯವಸ್ಥೆಯನ್ನೂ ಪರಿಚಯಿಸಲಾಗಿದೆ. ಸಂಸ್ಥೆಯ ಸಿಇಒ ಹಾಗೂ ಸಂಸ್ಥಾಪಕ ನಂಜೇಶ್ ಬೆಣ್ಣೂರು ಉಪಸ್ಥಿತರಿದ್ದರು.

ಬೆಂಗಳೂರು ಕೆಂಪೇಗೌಡರ ದೂರದೃಷ್ಟಿ: ಜಯಕರ



ಬೆಂಗಳೂರು: 'ಅಂತರರಾಷ್ಟ್ರೀಯ ಭೂಪಟದಲ್ಲಿ ಬೆಂಗಳೂರು ಹೆಗ್ಗುರುತಾಗಲು ನಾಡಪ್ರಭು ಕೆಂಪೇಗೌಡರ ದೂರದೃಷ್ಟಿ ಕಾರಣ' ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಸ್.ಎಂ.ಜಯಕರ ಹೇಳಿದರು.

ಜ್ಞಾನಭಾರತಿಯಲ್ಲಿ ನಾಡಪ್ರಭು ಕೆಂಪೇಗೌಡ ಮಾನವಿಕ ಮತ್ತು ಸಮಾಜ ವಿಜ್ಞಾನಗಳ ಕೇಂದ್ರವು ಮಂಗಳವಾರ ಆಯೋಜಿಸಿದ್ದ ಕೆಂಪೇಗೌಡ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು.

'ಮಹಾನ್ ವ್ಯಕ್ತಿಗಳ ಆದರ್ಶವು ಆಯಾ ಕಾಲಕ್ಕೆ ಸೀಮಿತವಾಗದೇ ಶತಮಾನಗಳಿಗೆ ದಾರಿದೀಪವಾಗಿರುತ್ತದೆ. ಅವರ ಚಿಂತನೆಗಳು ವಿದ್ಯಾರ್ಥಿಗಳಿಗೆ ಮಾದರಿಯಾಗಬೇಕು' ಎಂದರು.

ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯ ಗಾ.ನಂ. ಶ್ರೀಕಂಠಯ್ಯ ಮಾತನಾಡಿ, 'ಬೆಂಗಳೂರು ವಿಜ್ಞಾನ, ತಂತ್ರಜ್ಞಾನ, ಆರೋಗ್ಯ, ಉದ್ಯೋಗಾವಕಾಶಗಳ ಕೇಂದ್ರವಾಗಿದ್ದು, ಜಾಗತಿಕ ಮಟ್ಟದಲ್ಲಿ ಸ್ಥಾನವನ್ನು ಪಡೆದಿದೆ. ನಗರದ ಪರಿಸರ ಕೇಂದ್ರಿತ ಸುಸ್ಥಿರ ಅಭಿವೃದ್ಧಿಗೆ ವೈಜ್ಞಾನಿಕ ಕ್ರಮಗಳು ಅಗತ್ಯವಾಗಿವೆ' ಎಂದರು.

ಕುಲಸಚಿವರಾದ ಕೆ.ಟಿ.ಶಾಂತಲಾ, ಪ್ರೊ.ಸಿ.ಎಸ್.ಕರಿಗಾರ್, ಕೇಂದ್ರದ ನಿರ್ದೇಶಕ ಪುಟ್ಟಸ್ವಾಮಯ್ಯ, ಸಿಂಡಿಕೇಟ್ ಸದಸ್ಯ ಗಂಗರಾಜು, ಪ್ರೊ.ಬಸವರಾಜ ಬೆಣ್ಣಿ, ಪ್ರೊ.ಕೃಷ್ಣ ಉಪಸ್ಥಿತರಿದ್ದರು.

ಜುಲೈ 3ರಿಂದ ಕೃಷಿ ತಂತ್ರಜ್ಞಾನ, ತೋಟಗಾರಿಕೆ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಲ್ಲತ್ತಹಳ್ಳಿಯ ಭಾರತೀಯ ತೋಟಗಾರಿಕೆ ನಿರ್ವಹಣಾ ಸಂಸ್ಥೆಯು (ಐಐಪಿಎಂಬಿ) ಜುಲೈ 3 ಮತ್ತು 4ರಂದು 'ಕೃಷಿ ತಂತ್ರಜ್ಞಾನ ಮತ್ತು ತೋಟಗಾರಿಕೆ 5.0' ಅಂತರರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಿದ್ದು, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಉದ್ಘಾಟಿಸಲಿದ್ದಾರೆ' ಎಂದು ಸಂಸ್ಥೆಯ ಪ್ರೊ.ಜಾನ್ ಮನೋರಾಜ್ ತಿಳಿಸಿದರು.

'ಜ್ಞಾನಭಾರತಿ ಆವರಣದಲ್ಲಿನ ಸಂಸ್ಥೆಯ ಎಸ್‌ಇಐಎಫ್ ಸಭಾಂಗಣದಲ್ಲಿ ಉದ್ಘಾಟನೆ ನಡೆಯಲಿದ್ದು, ಕಾಫಿ ಮಂಡಳಿ ಸಿಇಒ ಎಂ.ಕೂರ್ಮಾರಾವ್, ಚಹಾ ಮಂಡಳಿ ಉಪಾಧ್ಯಕ್ಷ ಸಿ.ಮುರುಗನ್, ಸಂಬಾರ ಪದಾರ್ಥ ಮಂಡಳಿ ಕಾರ್ಯದರ್ಶಿ ಎಂ.ಎಸ್. ಮಣಿವಣ್ಣನ್ ಪಾಲ್ಗೊಳ್ಳುವರು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದೇಶದ ತಂತ್ರಜ್ಞರಲ್ಲದೇ ನೆದರ್ಲೆಂಡ್, ಅಮೆರಿಕ, ಶ್ರೀಲಂಕಾದ 100ಕ್ಕೂ ಹೆಚ್ಚು ತಂತ್ರಜ್ಞರು ಸಮ್ಮೇಳನದಲ್ಲಿ ಪ್ರಬಂಧ ಮಂಡಿಸಲಿದ್ದಾರೆ.

'ಕೃಷಿ ಮತ್ತು ತೋಟಗಾರಿಕೆ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ಸೇರಿ ತಂತ್ರಜ್ಞಾನ ಅಳವಡಿಕೆ ನಡೆಯುತ್ತಿದ್ದು, ಜಾಗತಿಕ ತಾಪಮಾನ ಏರಿಕೆ, ಹವಾಮಾನ ವೈಪರೀತ್ಯದ ವೇಳೆ ಕೃಷಿಯ ಸುಸ್ಥಿರ ಬೆಳವಣಿಗೆಗೆ ಈ ಹೊಸ ತಂತ್ರಜ್ಞಾನಗಳು ಪೂರಕವಾಗಿವೆ. ಹೊಸ ಸವಾಲು ಮತ್ತು ಪರಿಹಾರದ ಬಗ್ಗೆ ಸಮ್ಮೇಳನವು ಬೆಳಕು ಚೆಲ್ಲಲಿದೆ' ಎಂದು ವಿವರಿಸಿದರು.

ಗೋಷ್ಠಿಯಲ್ಲಿ ಸಂಸ್ಥೆಯ ಪ್ರೊ.ಅರ್ಚನಾ ತುಳಸೀಧರನ್ ಪಾಲ್ಗೊಂಡಿದ್ದರು.

'ಎಸ್‌ಟಿಪಿ ಘಟಕ: ಎಚ್ಚರಿಕೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳಲ್ಲಿ (ಎಸ್‌ಟಿಪಿ) ಅವಘಡಗಳು ಉಂಟಾಗದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು' ಎಂದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷೆ ಡಾ.ಎನ್. ಮಂಜುಳಾ ಹೇಳಿದರು.



'ಆರೋಗ್ಯ ಮತ್ತು ಸುರಕ್ಷತೆ' ಕುರಿತು ಕಾವೇರಿ ಭವನದಲ್ಲಿ ಸೋಮವಾರ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಜಲಮಂಡಳಿ ಅಧ್ಯಕ್ಷೆ ಡಾ.ಎನ್.ಮಂಜುಳಾ ಮಾತನಾಡಿದರು

'ಆರೋಗ್ಯ ಮತ್ತು ಸುರಕ್ಷತೆ' ಕುರಿತು ಕಾವೇರಿ ಭವನದಲ್ಲಿ ಸೋಮವಾರ ಜಲಮಂಡಳಿಯು ಏರ್ಪಡಿಸಿದ್ದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, 'ನೌಕರರು ಸುರಕ್ಷತೆಗೆ ಆದ್ಯತೆ ನೀಡಬೇಕು. ಸಮಸ್ಯೆಗಳು ಉದ್ಭವಿಸದಂತೆ ಮುಂಜಾಗ್ರತಾ ಕ್ರಮಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸಬೇಕು' ಎಂದು ಸೂಚಿಸಿದರು.

'ನೌಕರರ ಸುರಕ್ಷತೆ ದೃಷ್ಟಿಯಿಂದ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಪ್ರತಿಯೊಬ್ಬರೂ ಮುಕ್ತವಾಗಿ ಚರ್ಚಿಸಬೇಕು. ತೊಂದರೆ, ಸಮಸ್ಯೆಗಳಿದ್ದರೆ ಕೂಡಲೇ ಗಮನಕ್ಕೆ ತರಬೇಕು' ಎಂದರು.

ಜಲಮಂಡಳಿಯ ಮುಖ್ಯ ಎಂಜಿನಿಯರ್‌ಗಳು ಹಾಗೂ ಎಸ್‌ಟಿಪಿ ವಿಭಾಗದ ನೌಕರರು ಪಾಲ್ಗೊಂಡರು.

ಜನನಾಯಕರಾಗಿ ಗುರುತಿಸಿಕೊಂಡವರ ಶಕ್ತಿ ತುಳಿಯಲು ಸಾಧ್ಯವಿಲ್ಲ: ಕೆ.ಎನ್. ರಾಜಣ್ಣ

'2028ರ ಚುನಾವಣೆ ಗೆಲ್ಲಲು ಸಿದ್ದರಾಮಯ್ಯ ಬೇಕು'

ಬೆಂಗಳೂರು: 'ಸಿದ್ದರಾಮಯ್ಯ ಒಬ್ಬ ಜನ ನಾಯಕ. ಅವರನ್ನು ದೂರ ಇಟ್ಟು ಪಕ್ಷ ಸಂಘಟನೆ ಮಾಡುತ್ತೇವೆಂದರೆ, ಅದು ಒಂದು ದೊಡ್ಡ ಪ್ರಮಾದವಾಗಲಿದೆ' ಎಂದು ಶಾಸಕ ಕೆ.ಎನ್. ರಾಜಣ್ಣ ಅಭಿಪ್ರಾಯಪಟ್ಟರು.



ನನಗೆ ಮಂತ್ರಿ ಸ್ಥಾನ ಬೇಡ. ಸಚಿವ ಸ್ಥಾನದ ಆಕಾಂಕ್ಷಿ ಎಂದು ನಾನು ಎಲ್ಲೂ ಹೇಳಿಲ್ಲ. ಹೀಗಾಗಿ ನನಗೆ ಕೊಟ್ಟರೂ ಸಚಿವ ಸ್ಥಾನ ಬೇಡ
ಕೆ.ಎನ್. ರಾಜಣ್ಣ ಶಾಸಕ

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸಿದ್ದರಾಮಯ್ಯ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋದರೆ ಮಾತ್ರ ನಾವು 2028ರ ಚುನಾವಣೆ ಗೆಲ್ಲುತ್ತೇವೆ' ಎಂದೂ ಹೇಳಿದರು.

'ಸದ್ಯದಲ್ಲಿಯೇ ಪಾಲಿಕೆ ಚುನಾವಣೆ ಎದುರಿಸಬೇಕಾಗುತ್ತದೆ. ಸಿದ್ದರಾಮಯ್ಯ ಅವರನ್ನು ಕಡೆಗಣಿಸಲು ಸಾಧ್ಯವೇ ಇಲ್ಲ. ಜನ ನಾಯಕರೆಂದು ಗುರುತಿಸಿಕೊಂಡವರ ಶಕ್ತಿ, ಜನಪ್ರಿಯತೆಯನ್ನು ತುಳಿಯಲು ಸಾಧ್ಯವೂ ಇಲ್ಲ' ಎಂದರು. 'ಹಾಗೆಂದು, ವೈರಾಗ್ಯ ಎಂದೇನೂ ಇಲ್ಲ. ನಾನು ಎರಡು ವರ್ಷ ಸಚಿವನಾಗಿ ನನ್ನ ಕೆಲಸವನ್ನು ಪ್ರಾಮಾಣಿಕವಾಗಿ, ದಕ್ಷತೆಯಿಂದ ಮಾಡಿದ್ದೇನೆ. ಹೀಗಾಗಿ, ಬೇರೆಯವರಿಗೂ ಅವಕಾಶ ಕೊಡಲಿ' ಎಂದರು.

ಸಂಕ್ಷಿಪ್ತ ಸುದ್ದಿ

ಬಾಕಿ ಹಣ ಬಿಡುಗಡೆ ಸಿ.ಎಂ ಭರವಸೆ

ಬೆಂಗಳೂರು: ಬಾಕಿ ಇರುವ ಹಣದಲ್ಲಿ ಶೇಕಡ 50ರಷ್ಟನ್ನು ಮೂರು ತಿಂಗಳ ಒಳಗಾಗಿ ಬಿಡುಗಡೆಗೆ ಸೂಕ್ತ ಕ್ರಮ ಕೈಗೊಳ್ಳಲು ಆರ್ಥಿಕ ಇಲಾಖೆಗೆ ಸೂಚನೆ ನೀಡಿರುವುದಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಮಂಜುನಾಥ್ ಮಾಹಿತಿ ನೀಡಿದ್ದಾರೆ.

ಗುತ್ತಿಗೆದಾರರ ಬಾಕಿ ಹಣ ಬಿಡುಗಡೆ ವಿಚಾರಕ್ಕೆ ಸಂಬಂಧಿಸಿ ನಡೆದ ಸಭೆ ಬಳಿಕ ಮಾತನಾಡಿ, ‘ಸಿಎಂಎಸ್ (ಗುತ್ತಿಗೆ ನಿರ್ವಹಣಾ ವ್ಯವಸ್ಥೆ) ಅನನುಕೂಲತೆ ಬಗ್ಗೆ ಮಾಹಿತಿ ಪಡೆದ ಬಳಿಕ ಅದನ್ನು ರದ್ದುಪಡಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಹೇಳಿದರು’ ಎಂದರು.

ಬಿಬಿಎಂಪಿ ಗುತ್ತಿಗೆದಾರರ ಶೇಕಡ 10ರಷ್ಟು ಬಾಕಿ ಹಣ ಬಿಡುಗಡೆ ಬಗ್ಗೆ ಸಚಿವ ಕೃಷ್ಣ ಬೈರೇಗೌಡ ಅವರ ಜೊತೆ ಚರ್ಚಿಸಿ ಬಿಡುಗಡೆ ಮಾಡಲಾಗುವುದು ಎಂದರು.

ಆರ್. ಮಂಜುನಾಥ ಅವರನ್ನು ವಿಧಾನ ಪರಿಷತ್ ಸದಸ್ಯರಾಗಿ ನೇಮಕ ಮಾಡುವಂತೆ ಮನವಿ ಮಾಡಲಾಯಿತು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಎಂ.ನಂದಕುಮಾರ್ ತಿಳಿಸಿದರು.

‘ತಮಿಳುನಾಡಿನ ತಕರಾರಿಗೆ ತಕ್ಕ ಉತ್ತರ’

ಬೆಂಗಳೂರು: ‘ಸಣ್ಣಪುಟ್ಟ ನೆಪಗಳನ್ನು ಮುಂದಿಟ್ಟುಕೊಂಡು ಮೇಕೆದಾಟು ಯೋಜನೆ ವಿರುದ್ಧ ತಮಿಳುನಾಡು ಸುಪ್ರೀಂ ಕೋರ್ಟ್‌ನಲ್ಲಿ ತಕರಾರು ಮಾಡುತ್ತಿದೆ. ಅವರ ತಕರಾರಿಗೆ ತಕ್ಕ ಉತ್ತರ ನೀಡಬೇಕು’ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚಿಸಿದರು.

ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು. ‘ಬಂಡೀಪುರ ಹಾಗೂ ನಾಗರಹೊಳೆ ರಾಷ್ಟ್ರೀಯ ಉದ್ಯಾನಗಳಲ್ಲಿನ ಸಫಾರಿ ಮತ್ತು ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳನ್ನು ಪುನರಾರಂಭಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು’ ಎಂದರು.

ಅಭಯಸೂರ್ಯಗೆ 4 ಚಿನ್ನ


ಅಭಯ ಸೂರ್ಯ

ಬೆಂಗಳೂರು: ನಗರದಲ್ಲಿ ಈಚೆಗೆ ನಡೆದ ಕರ್ನಾಟಕ ರಾಜ್ಯ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸೇಂಟ್ ಜೋಸೆಫ್ ಶಾಲೆಯ 10ನೇ ತರಗತಿ ವಿದ್ಯಾರ್ಥಿ ಪಿ.ಅಭಯಸೂರ್ಯ, ನಾಲ್ಕು ಚಿನ್ನದ ಪದಕ ಗೆದ್ದಿದ್ದಾರೆ.

10 ಮೀಟರ್ಸ್ ಓಪನ್ ಏರ್‌ಸೈಟ್ ರೈಫೆಲ್ ಸ್ಪರ್ಧೆಯ ಸೀನಿಯರ್, ಜ್ಯೂನಿಯರ್, ಯುವ ಮತ್ತು ಪುರುಷರ ಉಪ ವಿಭಾಗಗಳಲ್ಲಿ ಚಿನ್ನಕ್ಕೆ ಕೊರಳೊಡ್ಡಿದರು. ಅಭಯಸೂರ್ಯ ಅವರನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅಭಿನಂದಿಸಿದರು. ಅಭಯ ಅವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಮತ್ತು ಮೀರಾ ದಂಪತಿ ಪುತ್ರ.

‘ಭಾಷಾಭಿವೃದ್ಧಿ ಕಾಯ್ದೆಗಿಲ್ಲ ನಿಯಮ’

ಎಂಟು ತಿಂಗಳಿಂದ ಕಾನೂನು ಇಲಾಖೆಯಲ್ಲೇ ಉಳಿದ ಕಡತ: ಬಿಳಿಮಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾಲ್ಕು ವರ್ಷದ ಹಿಂದೆ ರಾಜ್ಯ ಸರ್ಕಾರವು ರೂಪಿಸಿದ್ದ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕಾಯ್ದೆಗೆ ನಿಯಮಗಳೇ ಇಲ್ಲ. ನಿಯಮಗಳನ್ನು ರಚಿಸಿ ಸಲ್ಲಿಸಿದ್ದ ಕಡತವು ಎಂಟು ತಿಂಗಳಿಂದ ಕಾನೂನು ಇಲಾಖೆಯಲ್ಲೇ ಉಳಿದಿದೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ವಿಷಾದಿಸಿದರು.

ಇಂಗ್ಲಿಷ್ ಶಾಲೆಗಳಲ್ಲಿ ಕನ್ನಡ ಕಲಿಕೆ ಮತ್ತು ಸಮಗ್ರ ಕನ್ನಡ ಅನುಷ್ಠಾನದ ಕುರಿತು ‘ಕನ್ನಡ ಮೊದಲು’ ಸ್ನೇಹಿತರು ಮತ್ತು ಸಂಘಗಳ ಬಳಗವು ಇಲ್ಲಿ ಮಂಗಳವಾರ ಏರ್ಪಡಿಸಿದ್ದ ಸಭೆಯಲ್ಲಿ ಮಾತನಾಡಿ, ‘ಬೆಳಗಾವಿಯಲ್ಲಿ ಕಳೆದ ಅಧಿವೇಶನದಲ್ಲಿ ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಅವರು ಕಾಯ್ದೆ ಕುರಿತು ಪ್ರಶ್ನೆ ಕೇಳುವ ಹೊತ್ತಿಗೆ ಒಂದು ಸಭೆಯಷ್ಟೆ ನಡೆದಿತ್ತು. ನಂತರ ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರ ನೇತೃತ್ವದಲ್ಲಿ ಸಭೆ ನಡೆದು, ನಿಯಮಗಳನ್ನು ರಚಿಸಿ ಕಾನೂನು ಇಲಾಖೆಗೆ ಕಳಿಸಲಾಗಿದೆ. ನಂತರ ಯಾವ ಬೆಳವಣಿಗೆಯೂ ಆಗಿಲ್ಲ’ ಎಂದು ಹೇಳಿದರು.

‘ಇದು ಸರ್ಕಾರದ ಉನ್ನತ ಅಧಿಕಾರಿಗಳನ್ನೇ ಕೇಂದ್ರದಲ್ಲಿರಿಸಿಕೊಂಡು ರಚಿಸಲಾದ ಕಾಯ್ದೆ. ಪ್ರಾಧಿಕಾರದ ನಿಯಮಗಳನ್ನೇ ಕಾಯ್ದೆಗೂ ಕಾಪಿ ಆ್ಯಂಡ್ ಪೇಸ್ಟ್ ಮಾಡಲಾಗಿದೆ. ಒಂದೇ ಉದ್ದೇಶಕ್ಕೆ ಸರ್ಕಾರ ಎರಡು ಕಾಯ್ದೆ ರಚಿಸಿದ್ದೇಕೆ ಎಂದು ನಾನು ಸಭೆಯಲ್ಲಿ ಆಕ್ಷೇಪಿಸಿದ್ದೆ. ಕಾಯ್ದೆಯನ್ನೇ ಜಾರಿಗೊಳಿಸುವುದಾದರೆ ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ಮುಚ್ಚಿಬಿಡಿ. ಆಗದಿದ್ದರೆ 2022ರ ಕಾಯ್ದೆಯನ್ನು ಜಾರಿಗೆ ತರುವ ಹೊಣೆ ಪ್ರಾಧಿಕಾರದ್ದು ಎಂದು ನಿಯಮಗಳಲ್ಲಿ ತಿದ್ದುಪಡಿ ಮಾಡಬೇಕು. ಆಗದಿದ್ದರೆ ಅದನ್ನೇ ಕಾಯ್ದೆಯಲ್ಲಿ ತಿದ್ದುಪಡಿ ಮಾಡಿ ಸೇರಿಸಬೇಕು ಎಂದು ಒತ್ತಾಯಿಸಿದ್ದೆ. ನಂತರ ತಿದ್ದುಪಡಿ ಮಾಡಿ ಕಾನೂನು ಇಲಾಖೆಗೆ ಸಲ್ಲಿಸಲಾಗಿದೆ’ ಎಂದರು.

‘ತಿದ್ದುಪಡಿ ಕುರಿತು ಕಾನೂನು ಇಲಾಖೆಯ ಪ್ರಮುಖರೊಬ್ಬರನ್ನು ಕೇಳಿದಾಗ, ಅವರು, ಪ್ರಾಧಿಕಾರವು ಕನ್ನಡ ಸಂಸ್ಕೃತಿ ಇಲಾಖೆಯ ಎಲ್ಲಾ ಅಧಿಕಾರವನ್ನು ಕಸಿದುಕೊಳ್ಳಲು ಬಯಸುತ್ತದೆಯೇ ಎಂದು ಆಕ್ಷೇಪಿಸಿ, ಅಚ್ಚರಿ ಮೂಡಿಸಿದರು. ಏಕೆಂದರೆ, ಇಲಾಖೆ ಮತ್ತು ಪ್ರಾಧಿಕಾರದ ನಡುವೆ ಯಾವ ಘರ್ಷಣೆಯೂ ಇದುವರೆಗೆ ನಡೆದಿಲ್ಲ’ ಎಂದರು.

ಸಭೆಯಲ್ಲಿ ‘ಮುಖ್ಯಮಂತ್ರಿ’ ಚಂದ್ರು, ಎಲ್.ಹನುಮಂತಯ್ಯ, ಡಾ.ವಸುಂಧರಾ ಭೂಪತಿ, ಬಿ.ಟಿ.ಲಲಿತಾ ನಾಯಕ್, ನೇ.ಭ.ರಾಮಲಿಂಗ ಶೆಟ್ಟಿ, ಪಾಲನೇತ್ರ, ಕೆ.ನಲಿಗೌಡ, ಜ್ಞಾನೇಶ್ವರ್ ಎಂ., ಸಾರಿಕಾ ಶೋಭಾ, ವಾಣಿ ಅಲ್ಲಾರಂಡ ಪಾಲ್ಗೊಂಡಿದ್ದರು.


‘ಕನ್ನಡ ಮೊದಲು’ ಸ್ನೇಹಿತರು ಮತ್ತು ಸಂಘಗಳ ಬಳಗವು ಏರ್ಪಡಿಸಿದ್ದ ಸಭೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಪುರುಷೋತ್ತಮ ಬಿಳಿಮಲೆ ಮಾತನಾಡಿದರು — ಪ್ರಜಾವಾಣಿ ಚಿತ್ರ

> **ಕಾಯ್ದೆಗೆ ನಿಯಮಗಳ ರಚನೆಯಾದ ಬಳಿಕ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ತಂತಾನೆ ಕೊನೆಯುಸಿರೆಳೆಯುತ್ತದೆ. ನಿಧಾನವಾದ ಸಾವಿನಂತೆ. ಇದನ್ನು ವಿಷಾದದಿಂದ ಹೇಳುತ್ತಿಲ್ಲ**
> **ಪುರುಷೋತ್ತಮ ಬಿಳಿಮಲೆ,** ಪ್ರಾಧಿಕಾರದ ಅಧ್ಯಕ್ಷ

‘ಪಿಒಪಿ ನಿರ್ದೇಶನ ಈಗಲೇ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣೇಶೋತ್ಸವ ಹಬ್ಬದ ಸಮಯದಲ್ಲಿ ಪಿಒಪಿ (ಪ್ಲಾಸ್ಟರ್ ಆಫ್ ಪ್ಯಾರಿಸ್) ಮೂರ್ತಿಗಳನ್ನು ನಿಷೇಧಿಸುವ ಬದಲು ಈಗಲೇ ನಿಷೇಧ ಹೇರಬೇಕು. ವಿಗ್ರಹ ತಯಾರಿಸುವ ಮೊದಲೇ ನಿರ್ದೇಶನ ನೀಡಬೇಕು ಎಂದು ಶಾಸಕ ಎಸ್. ಸುರೇಶ್ ಕುಮಾರ್ ಅವರು ಜಿಬಿಎ ಮುಖ್ಯ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ಮುಂದಿನ ಸೆಪ್ಟೆಂಬರ್ 14ರಂದು ಗಣೇಶ ಹಬ್ಬ ಇದೆ. ಪಿಒಪಿ ವಿಗ್ರಹಗಳನ್ನು ಬಳಸುವುದರಿಂದ ಪರಿಸರಕ್ಕೆ ಹಾನಿಯಾಗುತ್ತದೆ. ಧಾರ್ಮಿಕ ಭಾವನೆಗಳಿಗೂ ಧಕ್ಕೆಯಾಗುತ್ತದೆ. ಪ್ರತಿ ವರ್ಷವೂ ‘ಪಿಒಪಿ ಮೂರ್ತಿಗಳನ್ನು ನಿಷೇಧಿಸಲಾಗಿದೆ’ ಎಂದು ನಗರ ಪಾಲಿಕೆ ಸೇರಿದಂತೆ ಆಯಾ ಸ್ಥಳೀಯ ಸಂಸ್ಥೆಗಳು ಪ್ರಕಟಣೆ ಹೊರಡಿಸುತ್ತವೆ. ಅಷ್ಟು ಹೊತ್ತಿಗೆ ಪಿಒಪಿ ಮೂರ್ತಿಗಳನ್ನು ತಯಾರಿಸಿ ಆಗಿರುತ್ತದೆ ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಸ್ಥಳೀಯವಾಗಿ ಮಣ್ಣಿನಿಂದ ತಯಾರಿಸಿದ ಮೂರ್ತಿಗಳನ್ನೇ ಬಳಸಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹಬ್ಬಕ್ಕೆ 75 ದಿನ ಇರುವಾಗಲೇ ಜೂನ್ 28ರ ‘ಮನ್‌ಕಿ ಬಾತ್’ನಲ್ಲಿ ತಿಳಿಸಿದ್ದಾರೆ. ಪಿಒಪಿ ಮೂರ್ತಿಗಳಿಂದ ಉಂಟಾಗುವ ಮಾಲಿನ್ಯದ ಬಗ್ಗೆಯೂ ಗಮನ ಸೆಳೆದಿದ್ದಾರೆ. ಹಾಗಾಗಿ ಪಿಒಪಿ ಮೂರ್ತಿಗಳಿಗೆ ಅವಕಾಶ ನೀಡುವುದಿಲ್ಲ ಎಂದು ನಿರ್ದೇಶನ ನೀಡಬೇಕು. ವಿಗ್ರಹಗಳ ಮಾರಾಟ ಮಾಡಲು ಗುರುತಿಸಲಾಗುವ ಜಾಗಗಳಲ್ಲಿ ಪಿಒಪಿಗೆ ಅವಕಾಶವಿಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು ಎಂದು ಕೋರಿದ್ದಾರೆ.

ಗಣೇಶ ಮಹೋತ್ಸವ ಆಚರಿಸಲು ಅರ್ಜಿ ಸಲ್ಲಿಸುವ ಸಂಘ ಸಂಸ್ಥೆಗಳಿಂದ ಪಿಒಪಿ ಮೂರ್ತಿ ಬಳಸುವುದಿಲ್ಲ ಎಂಬ ಪ್ರಮಾಣಪತ್ರವನ್ನು ತೆಗೆದುಕೊಳ್ಳಬೇಕು. ಪಿಒಪಿ ತಯಾರಕರಿಗೂ ಎಚ್ಚರಿಕೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಮತದಾನದ ಹಕ್ಕು ಉಳಿಸಿಕೊಳ್ಳಿ: ಸಿ.ಎಂ

ಗಣತಿ ನಮೂನೆ ಭರ್ತಿ ಕಾರ್ಯ: ಶಾಶ್ವತ ನಿವಾಸಿ ಪ್ರಮಾಣಪತ್ರ ನೀಡಲು ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ರಾಜ್ಯದ ಎಲ್ಲ ಮತದಾರರೂ ಗಣತಿ ನಮೂನೆಯನ್ನು ಸಲ್ಲಿಸಿ, ಮತದಾನದ ಹಕ್ಕು ಉಳಿಸಿಕೊಳ್ಳಬೇಕು. ಇಲ್ಲದಿದ್ದಲ್ಲಿ ಸರ್ಕಾರದ ಸೌಲಭ್ಯಗಳನ್ನು ಪಡೆಯುವುದು ಕಷ್ಟವಾಗಲಿದೆ' ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ತಮ್ಮ ಸದಾಶಿವನಗರದ ಮನೆಯಲ್ಲಿ ಮಂಗಳವಾರ ಗಣತಿ ನಮೂನೆಯನ್ನು ಭರ್ತಿ ಮಾಡಿ, ಮತಗಟ್ಟೆ ಅಧಿಕಾರಿಗಳಿಗೆ ಹಿಂತಿರುಗಿಸಿದ ನಂತರ ಸುದ್ದಿಗಾರರ ಜತೆ ಅವರು ಮಾತನಾಡಿದರು.

'ನನ್ನ ಗಣತಿ ನಮೂನೆಯನ್ನು ಭರ್ತಿ ಮಾಡಿ, ಸಹಿ ಮಾಡಿ ಸಲ್ಲಿಸಿರುವೆ. ನೀವು ನಿಮ್ಮ ಹೆಸರಿನ ಜತೆಗೆ ಈ ಹಿಂದೆ ಮತದಾರರ ಪಟ್ಟಿ ಪರಿಷ್ಕರಣೆ ಸಮಯದಲ್ಲಿ ನೀಡಲಾಗಿದ್ದ ದೂರವಾಣಿ ಸಂಖ್ಯೆಯನ್ನು ನಮೂದಿಸಿ. ಇಲ್ಲವಾದರೆ ಹೊಸ ಮೊಬೈಲ್ ಸಂಖ್ಯೆಯನ್ನು ಅಧಿಕಾರಿಗಳ ಮೂಲಕ ಸೇರ್ಪಡೆ ಮಾಡಿಸಿಕೊಳ್ಳಿ' ಎಂದು ಮತದಾರರಿಗೆ ಸಲಹೆ ನೀಡಿದರು.

'ಮತದಾರರು ತಮ್ಮ ಹೆಸರು ತಿದ್ದುಪಡಿ ಮಾಡಿಕೊಳ್ಳಲು ಅವಕಾಶ ವಿದೆ. ಕುಟುಂಬದವರ ಪರವಾಗಿ ಒಬ್ಬರೇ ಎಲ್ಲರ ಅರ್ಜಿ ತುಂಬಬಹುದು. ಅದನ್ನು ಸ್ವೀಕಾರ ಮಾಡಿಕೊಳ್ಳಲಾಗುವುದು. ಮತದಾರರು ತಮ್ಮ ಫೋಟೋ ಬದಲಾಯಿಸಿಕೊಳ್ಳಬೇಕಾದರೆ ಅರ್ಜಿ ಜತೆಗೆ, ಹೊಸ ಫೋಟೋ ನೀಡಬಹುದು. ಹೊಸ ಮತದಾರರು ನಿವಾಸ ದೃಢೀಕರಣ ಪತ್ರ ನೀಡಬೇಕು. ಜನರಿಗೆ ಶಾಶ್ವತ ನಿವಾಸಿ ಪ್ರಮಾಣಪತ್ರ ನೀಡಲು ಸರ್ಕಾರ ಕ್ರಮ ತೆಗೆದುಕೊಂಡಿದೆ' ಎಂದರು.

'ಆ್ಯಪ್ ಮೂಲಕ ಗಣತಿ ನಮೂನೆ ಸಲ್ಲಿಸುವ ಬಗ್ಗೆ ನನಗೆ ಮಾಹಿತಿ ಇಲ್ಲ. ಇತರರ ಸಹಾಯ ಪಡೆದುಕೊಂಡು ಆ ಕೆಲಸ ಮಾಡಿದೆ. ಬೇರೆ ರಾಜ್ಯಗಳಲ್ಲಿ ಸರ್ಕಾರಿ ಸವಲತ್ತನ್ನು ಆಯಾ ರಾಜ್ಯದ ಮತದಾರರಿಗೆ ಮಾತ್ರವೇ ನೀಡಲಾಗುತ್ತಿದೆ. ಅದೇ ವ್ಯವಸ್ಥೆ ರಾಜ್ಯದಲ್ಲೂ ಬರಬಹುದು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಎಸ್‌ಐಆರ್: ಮನೆ ಭೇಟಿ ಶುರು

ಬೆಂಗಳೂರು: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಅಂಗವಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಮಂಗಳವಾರ ಬೂತ್ ಮಟ್ಟದ ಅಧಿಕಾರಿಗಳು ಮನೆ-ಮನೆಗೆ ಭೇಟಿ ನೀಡಿ ಮತದಾರರ ಮಾಹಿತಿಯನ್ನು ಪರಿಶೀಲಿಸಿ, ಗಣತಿ ನಮೂನೆಗಳನ್ನು ವಿತರಿಸಿದರು.

'ಜುಲೈ 29ರವರೆಗೆ ನಡೆಯಲಿರುವ ಈ ವಿಶೇಷ ಅಭಿಯಾನದಲ್ಲಿ ಮತದಾರರು ಬಿಎಲ್‌ಒಗಳಿಗೆ ಅಗತ್ಯ ದಾಖಲೆಗಳನ್ನು ಸಲ್ಲಿಸಿ ಸಹಕರಿಸಬೇಕು, ಮತದಾರರ ಪಟ್ಟಿಯನ್ನು ಇನ್ನಷ್ಟು ನಿಖರ ಹಾಗೂ ದೋಷರಹಿತವಾಗಿಸಲು ಇದು ಸಹಕಾರಿ' ಎಂದು ಜಿಬಿಎ ಮುಖ್ಯ ಆಯುಕ್ತರು ಹಾಗೂ ಜಿಲ್ಲಾ ಚುನಾವಣಾಧಿಕಾರಿಯಾದ ಮಹೇಶ್ವರ್ ರಾವ್ ಮನವಿ ಮಾಡಿದ್ದಾರೆ.



'ಎಸ್‌ಐಆರ್' (ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ) ವಿರೋಧಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಎಸ್‌ಐಆರ್ ವಿರೋಧಿ ಜಾತ್ಯತೀತ ಪಕ್ಷಗಳು–ಜನಪರ ಸಂಘಟನೆಗಳ ಒಕ್ಕೂಟ ಮಂಗಳವಾರ ಪ್ರತಿಭಟನೆ ನಡೆಸಿತು

ಎಸ್‌ಐಆರ್ ವಿರೋಧಿಸಿ ಪ್ರತಿಭಟನೆ

ಬೆಂಗಳೂರು: ಚುನಾವಣಾ ಆಯೋಗವು ನಡೆಸುತ್ತಿರುವ 'ಎಸ್‌ಐಆರ್' (ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ) ವಿರೋಧಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಎಸ್‌ಐಆರ್ ವಿರೋಧಿ ಜಾತ್ಯತೀತ ಪಕ್ಷಗಳು–ಜನಪರ ಸಂಘಟನೆಗಳ ಒಕ್ಕೂಟ ಮಂಗಳವಾರ ಪ್ರತಿಭಟನೆ ನಡೆಸಿತು. ತಾರ್ಕಿಕ ವ್ಯತ್ಯಾಸ (ಲಾಜಿಕಲ್ ಡಿಸ್ಕ್ರಿಪೆನ್ಸಿ) ಸಾಫ್ಟ್‌ವೇರ್ ಅನ್ನು ರಾಜ್ಯದಲ್ಲಿ ಬಳಸಬಾರದು. ಇದು ಚುನಾವಣಾ ಕೈಪಿಡಿ ಹಾಗೂ ಪ್ರಕಟಿತ ಎಸ್‌ಐಆರ್ ನಿಯಮಗಳಲ್ಲೂ ಇರಲಿಲ್ಲ. ಈ ಸಾಫ್ಟ್‌ವೇರ್ ಯಾವುದೇ ವಿಶ್ವಾಸಾರ್ಹ ಸಂಸ್ಥೆಯಿಂದ ಪರೀಕ್ಷಿಸಲ್ಪಟ್ಟು, ಅನುಮೋದನೆ ಪಡೆದಿಲ್ಲ ಎಂದು ಪ್ರತಿಭಟನಕಾರರು ತಿಳಿಸಿದರು.

ಕರಡು ಮತದಾರರ ಪಟ್ಟಿಯನ್ನು ಗ್ರಾಮ, ವಾರ್ಡ್ ಸಭೆಗಳಲ್ಲಿ ಸಾರ್ವಜನಿಕ ಪರಿಶೀಲನೆಗೆ ಒಳಪಡಿಸಬೇಕು. ಆಯೋಗದ ಕೈಪಿಡಿಯಲ್ಲಿ ತಿಳಿಸಿದಂತೆ, ಗ್ರಾಮ, ವಾರ್ಡ್ ಪ್ರದೇಶದ ಸಭೆಗಳನ್ನು ಕರೆದು, ಕರಡು ಮತದಾರರ ಪಟ್ಟಿಯಲ್ಲಿನ ಆ ಪ್ರದೇಶದ ಭಾಗವನ್ನು ಓದಬೇಕು. ಮತದಾರರ ಪಟ್ಟಿಯಲ್ಲಿ ಆಗಿರುವ ಸೇರ್ಪಡೆ ಹಾಗೂ ನಿರಾಕರಣೆಯನ್ನು ಗಮನಕ್ಕೆ ತಂದು ಅಗತ್ಯ ತಿದ್ದುಪಡಿಗಳನ್ನು ಮಾಡಬೇಕು ಎಂದು ಒತ್ತಾಯಿಸಿದರು. ಮನವಿ, ಆಕ್ಷೇಪಣೆಗಳನ್ನು ಸಲ್ಲಿಸಲು ಕನಿಷ್ಠ ಆರು ತಿಂಗಳ ಸಮಯಾವಕಾಶ ಇರಬೇಕು. ಲಕ್ಷಾಂತರ ಜನರ ಹೆಸರು ಮತದಾರರ ಪಟ್ಟಿಯಿಂದ ಬಿಟ್ಟುಹೋಗಲು ಈ ಪ್ರಕ್ರಿಯೆಯಲ್ಲಿರುವ ಗಡಿಬಿಡಿಯೂ ಒಂದು ಮುಖ್ಯ ಕಾರಣವಾಗಿದೆ. ಜನರ ಬಳಿ ಇರುವ ದಾಖಲೆಗಳನ್ನು ಆಯೋಗ ಒಪ್ಪುತ್ತಿಲ್ಲ. ಆಯೋಗ ಕೇಳುವ ದಾಖಲೆಗಳು ಸಾಮಾನ್ಯವಾಗಿ ಜನರ ಬಳಿ ಇಲ್ಲ. ದಾಖಲೆಗಳನ್ನು ಹೊಂದಿಸಿಕೊಳ್ಳಲು ಸಮಯಾವಕಾಶ ಬೇಕೇಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಜನಶಕ್ತಿಯ ರಾಜ್ಯ ಘಟಕದ ಅಧ್ಯಕ್ಷ ನೂರ್ ಶ್ರೀಧರ್, ನಾಗೇಶ್ ಅರಳುಕುಪ್ಪೆ, ರವಿ ಮೋಹನ್, ವರದರಾಜೇಂದ್ರ, ಶ್ರೀನಿವಾಸ್, ಸತ್ಯ ಮತ್ತಿತರರು ಹಾಜರಿದ್ದರು.

ಚಿಟಿಕೆ ಸುದ್ದಿ

ಸಂಕೀರ್ಣ ಶಸ್ತ್ರಚಿಕಿತ್ಸೆ ಯಶಸ್ವಿ

ಬೆಂಗಳೂರು: ನಾಗರಬಾವಿಯಲ್ಲಿರುವ ಫೋರ್ಟಿಸ್ ಆಸ್ಪತ್ರೆಯು 4 ವರ್ಷದ ಬಾಲಕಿ ಮತ್ತು 60 ವರ್ಷದ ವೃದ್ಧರೊಬ್ಬರ ಮೂತ್ರಪಿಂಡಗಳಲ್ಲಿದ್ದ ಕಲ್ಲುಗಳನ್ನು ಶಸ್ತ್ರಚಿಕಿತ್ಸೆ ಮೂಲಕ ಯಶಸ್ವಿಯಾಗಿ ಹೊರತೆಗೆದಿದೆ.

ಆಸ್ಪತ್ರೆಯ ಕಿಡ್ನಿ ವಿಭಾಗದ ಹೆಚ್ಚುವರಿ ನಿರ್ದೇಶಕ ಡಾ.ಕೆ.ಪ್ರೇಮ್‌ಕುಮಾರ್ ಮತ್ತು ಡಾ.ವಿಶಾಲ್ ಅವರು ಇಬ್ಬರನ್ನೂ ಅಪಾಯದಿಂದ ಪಾರು ಮಾಡಿದರು ಎಂದು ಆಸ್ಪತ್ರೆಯ ನಿರ್ದೇಶಕ ರತೀಫ್ ನಾಯಕ್ ಪ್ರಕಟಣೆಯಲ್ಲಿ ಹೇಳಿದ್ದಾರೆ.

ಕಾಸಿಯಾ ಅಧ್ಯಕ್ಷರಾಗಿ ನಿಂಗಣ್ಣ ಎಸ್.ಬಿರಾದಾರ



ಬೆಂಗಳೂರು: ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) 2026–27ನೇ ಸಾಲಿನ ಅಧ್ಯಕ್ಷರಾಗಿ ನಿಂಗಣ್ಣ ಎಸ್.ಬಿರಾದಾರ ಅಧಿಕಾರ ವಹಿಸಿಕೊಂಡಿದ್ದಾರೆ. ಎಚ್.ಎಸ್. ರಾಮಕೃಷ್ಣಯ್ಯ (ಉಪಾಧ್ಯಕ್ಷ), ಸಿ.ಪ್ರಕಾಶ್ (ಗೌರವ ಪ್ರಧಾನ ಕಾರ್ಯದರ್ಶಿ), ಎಸ್.ರವಿರಾಜ್ ಶೆಟ್ಟಿ (ಖಜಾಂಚಿ), ಎಂ.ಎ.ಗಿರಿ (ಜಂಟಿ ಕಾರ್ಯದರ್ಶಿ–ನಗರ), ಮಲ್ಲೇಶ್ ಬಿ ಜಾಡರ್ (ಜಂಟಿ ಕಾರ್ಯದರ್ಶಿ–ಗ್ರಾಮೀಣ).

ನಿಧನ ವಾರ್ತೆ

ಎಸ್.ವಿಜಯಾ



ಬೆಂಗಳೂರು: ನಗರದ ಎಚ್. ಗೊಲ್ಲಹಳ್ಳಿ ನಿವಾಸಿ ಎಸ್.ವಿಜಯಾ (63) ಮಂಗಳವಾರ ನಿಧನರಾದರು.

ಅವರಿಗೆ ಪತಿ ಮತ್ತು ನಾಲ್ವರು ಪುತ್ರಿಯರು ಇದ್ದಾರೆ. ಇವರ ಪತಿ ಬಿ. ಆರ್.ಸದಾಶಿವ ಅವರು ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ (ಟಿಪಿಎಂಎಲ್) ನಿವೃತ್ತ ಉದ್ಯೋಗಿ. ಕೆಂಗೇರಿ ಚಿತಾಗಾರದಲ್ಲಿ ಬುಧವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಎಪಿಎಸ್: ಪದಾಧಿಕಾರಿಗಳ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಳೆಯ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ, ಒಟ್ಟು 14 ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಎಪಿಎಸ್ ಶಿಕ್ಷಣ ಸಂಸ್ಥೆಗೆ ಹೊಸ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.

ವಿಷ್ಣು ಭರತ್ ಆಲಂಪಳ್ಳಿ (ಅಧ್ಯಕ್ಷ), ಐ.ಎಸ್. ಪ್ರಸಾದ್ ಮತ್ತು ವಿಜಯ್ ಭಾಸ್ಕರ್ ಆರ್.ವಿ. (ಉಪಾಧ್ಯಕ್ಷರು), ಎ.ಪ್ರಕಾಶ್ (ಪ್ರಧಾನ ಕಾರ್ಯದರ್ಶಿ), ಕೆ.ಎಸ್.ಅಖಿಲೇಶ್ ಬಾಬು (ಖಜಾಂಚಿ), ಪಿ.ಕೃಷ್ಣಸ್ವಾಮಿ ಮತ್ತು ಎ.ರಾಮ್ ಪ್ರಸಾದ್ (ಜಂಟಿ ಕಾರ್ಯದರ್ಶಿಗಳು), ಎ.ಪಿ. ಆಚಾರ್ಯ, ಎ.ಆರ್.ಆಚಾರ್ಯ ಮತ್ತು ಎ.ಮುರಳೀಧರ (ಕಾಯಂ ಸದಸ್ಯರು), ಟಿ.ವಿ.ಪ್ರಭು, ಸಿ.ನಾಗರಾಜ್, ಎಚ್. ವಿ.ಗೌತಮ, ಕೆ.ಪಿ.ನರಸಿಂಹಮೂರ್ತಿ, ರಾಜೀವ್, ಮೋಹನ್ ದೇವ್ ಆಳ್ವ, ವಿಜಯಾನಂದ್, ಮಂಜುನಾಥ್, ಕಿಶೋರ್ ಕುಮಾರ್ ಮತ್ತು ಮಂಜುಳಾ ಬಿಂದು ಮಾಧವ ರಾವ್ ಚುನಾಯಿತ ಟ್ರಸ್ಟಿಗಳಾಗಿ ಆಯ್ಕೆಯಾಗಿದ್ದಾರೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಶಾಸಕ ವಿಶ್ವನಾಥ್ ಹೇಳಿಕೆಗೆ ಒಕ್ಕಲಿಗ ಗೌಡ ಸಂಘದ ಆಕ್ರೋಶ

ಪುತ್ತೂರು (ದಕ್ಷಿಣ ಕನ್ನಡ): 'ಯಲಹಂಕದ ಶಾಸಕ ಎಸ್. ಆರ್.ವಿಶ್ವನಾಥ್ ಅವರು ಮಂಗಳೂರು ಕಡೆಯ ಎಲ್ಲಾ ಗೌಡರು ಒಕ್ಕಲಿಗರೇ ಅಲ್ಲ ಎಂದು ಹೇಳಿಕೆ ನೀಡಿದ್ದು, ಅವರು ಬಹಿರಂಗ ಕ್ಷಮೆ ಯಾಚಿಸಬೇಕು. ಇಲ್ಲದಿದ್ದರೆ ಒಕ್ಕಲಿಗ ಗೌಡ ಸೇವಾ ಸಂಘ ಜಿಲ್ಲಾ ಮಟ್ಟದ ಸಂಘಟನೆಯೊಂದಿಗೆ ಕಾನೂನು ಹೋರಾಟ ಅಥವಾ ಪ್ರತಿಭಟನೆ ನಡೆಸಲಿದೆ' ಎಂದು ಪುತ್ತೂರು ಒಕ್ಕಲಿಗ ಗೌಡ ಸೇವಾ ಸಂಘ ಎಚ್ಚರಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಪುತ್ತೂರು ತಾಲ್ಲೂಕು ಒಕ್ಕಲಿಗ ಗೌಡ ಸೇವಾ ಸಂಘದ ಅಧ್ಯಕ್ಷ ಸುಂದರ ಗೌಡ ನಡುಬೈಲು, 'ಎಸ್.ಆರ್.ವಿಶ್ವನಾಥ್ ಅವರು ಡಿ.ವಿ.ಸದಾನಂದ ಗೌಡ ಅವರ ಕುರಿತು ಮಾತನಾಡಿದ ವೇಳೆ ಮಂಗಳೂರು ಭಾಗದ ಒಕ್ಕಲಿಗ ಸಮಾಜಕ್ಕೆ ಅಪಮಾನ ಮಾಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಕ್ಕಲಿಗ ಸಮಾಜವನ್ನು ಬೆಳೆಸಲು ಆದಿಚುಂಚನಗಿರಿ ಸ್ವಾಮೀಜಿ ಪ್ರಮುಖ ಪಾತ್ರ ವಹಿಸಿದ್ದಾರೆ. ಎಸ್. ಆರ್.ವಿಶ್ವನಾಥ್ ಸಮಾಜವನ್ನು ಒಡೆಯುವ ಹೇಳಿಕೆ ನೀಡಿದ್ದಾರೆ' ಎಂದರು.

ಸಂಘದ ಸಲಹಾ ಸಮಿತಿ ಅಧ್ಯಕ್ಷ ಚಿದಾನಂದ ಬೈಲಾಡಿ ಮಾತನಾಡಿ, '1837ರಲ್ಲೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೆದಂಬಾಡಿ ರಾಮಯ್ಯ ಗೌಡ ಮುಂಚೂಣಿಯಲ್ಲಿದ್ದರು. ಇಂಥ ಹಲವು ಇತಿಹಾಸ ಇರುವ ಕರಾವಳಿ ಭಾಗದ ಒಕ್ಕಲಿಗರಿಗೆ ಶಾಸಕರ ಹೇಳಿಕೆ ನೋವು ತಂದಿದೆ' ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಡಾ.ಶ್ರೀಧರ್ ಗೌಡ ಪಾಣತ್ತಿಲ, ಮಾಜಿ ಅಧ್ಯಕ್ಷ ರವಿ ಮುಂಗ್ಲಿಮನೆ, ವಿಶ್ವನಾಥ ಗೌಡ ಕೆಯ್ಯೂರು, ಶ್ರೀಧರ್ ಗೌಡ ಕಣಜಾಲು ಭಾಗವಹಿಸಿದ್ದರು.

ಸುದ್ದಿ 2 ನಿಮಿಷ

ಬಿಡದಿ ಟೌನ್‌ಶಿಪ್ ಪ್ರಶ್ನಿಸಿ ಪಿಐಎಲ್

ಬೆಂಗಳೂರು: ಬಿಡದಿ ಟೌನ್‌ಶಿಪ್ ನಿರ್ಮಾಣ ಯೋಜನೆ ಪ್ರಶ್ನಿಸಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಲಾಗಿದ್ದು ಇದು ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇಕಿದೆ.

ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕಿನ ಸಾಮಾಜಿಕ ಕಾರ್ಯಕರ್ತ ರಾಜೇಶ್ ಕಂಪಲಾಪುರ ಬಸವಣ್ಣ ಈ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಯಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಜಿಬಿಡಿಎ (ಗ್ರೇಟರ್ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ), ಕೆಐಎಡಿಬಿ (ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ) ಮತ್ತು ರಾಮನಗರ ಜಿಲ್ಲಾಧಿಕಾರಿಯನ್ನು ಪ್ರತಿವಾದಿಗಳನ್ನಾಗಿ ಕಾಣಿಸಲಾಗಿದೆ.

ಅರ್ಜಿಯಲ್ಲಿ ಏನಿದೆ?: 'ರಾಮನಗರ ಜಿಲ್ಲೆಯ ಬಿಡದಿ ತಾಲ್ಲೂಕಿನ ಕೆಂಪಯ್ಯನ ಪಾಳ್ಯದ 384.22, ಮಂಡಲಹಳ್ಳಿಯ 71.13 ಮತ್ತು ವಡೇರಹಳ್ಳಿಯ 63.10 ಎಕರೆ ಸೇರಿದಂತೆ ಒಟ್ಟು 519 ಎಕರೆ ಭೂಸ್ವಾಧೀನಕ್ಕೆ ನಗರಾಭಿವೃದ್ಧಿ ಇಲಾಖೆ ಹೊರಡಿಸಿರುವ ಅಧಿಸೂಚನೆ ಅನಿಯಂತ್ರಿತ, ಕಾನೂನು ಮತ್ತು ಪರಿಸರ ವಿರೋಧಿಯಾಗಿದ್ದು ಇದನ್ನು ರದ್ದುಪಡಿಸಬೇಕು' ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

'ಸರ್ಕಾರದ ಈ ನಿರ್ಧಾರ ಆಹಾರ ಭದ್ರತೆ, ಸಾಮಾಜಿಕ ಪರಿಣಾಮ ಮೌಲ್ಯಮಾಪನದಡಿ ರೂಪಿಸಲಾಗಿರುವ ಕಡ್ಡಾಯವಾದ ಶಾಸನಬದ್ಧ ಸುರಕ್ಷತಾ ಕ್ರಮಗಳನ್ನು ನಿರ್ಲಕ್ಷಿಸಿದೆ. ಡಾ. ಎಂ.ಗೋವಿಂದ ರಾವ್ ಸಮಿತಿ ವರದಿ– 2026ಕ್ಕೆ ವಿರುದ್ಧವಾಗಿದೆ. ಕಲ್ಯಾಣ ಮತ್ತು ಕಿತ್ತೂರು ಕರ್ನಾಟಕದ ಬರಪೀಡಿತ ಮತ್ತು ಹಿಂದುಳಿದ ತಾಲ್ಲೂಕುಗಳಿಗೆ ಅಭಿವೃದ್ಧಿ ವಿಸ್ತರಿಸುವುದನ್ನು ತಡೆಯುತ್ತಿದೆ ಮತ್ತು ಸಂವಿಧಾನದ 14 ಮತ್ತು 21ನೇ ವಿಧಿಗಳ ಅಡಿಯಲ್ಲಿ ಖಾತರಿಪಡಿಸಲಾದ ಮೂಲಭೂತ ಹಕ್ಕುಗಳು ಹಾಗೂ ನಿರ್ದೇಶನ ತತ್ವಗಳ ಸಂಪೂರ್ಣ ಉಲ್ಲಂಘನೆಯಾಗಿದೆ' ಎಂದು ಆಕ್ಷೇಪಿಸಿದ್ದಾರೆ.



ಏಜೆಂಟರ ನಡುವೆ ಜಟಾಪಟಿ

ಬೆಂಗಳೂರು: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯು (ಎಸ್‌ಐಆರ್) ಮಂಗಳವಾರದಿಂದ ಆರಂಭವಾಗಿದ್ದು, ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ರಾಯಪುರ ವಾರ್ಡ್‌ನಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಏಜೆಂಟರ ನಡುವೆ ವಾಗ್ವಾದ ನಡೆದಿದೆ.

ಎಸ್‌ಐಆರ್ ಕಾರ್ಯಕ್ಕೆ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 31 ಮತಗಟ್ಟೆಯ ಅಧಿಕಾರಿಗಳು ಹಾಜರಾಗಬೇಕಿತ್ತು. ಆದರೆ, 14 ಮಂದಿಯಷ್ಟೇ ಹಾಜರಾಗಿದ್ದರು. ಉಳಿದ ಸಿಬ್ಬಂದಿ ಬರುವವರೆಗೂ ಎಸ್‌ಐಆರ್ ಆರಂಭಿಸಲು ಅವಕಾಶ ನೀಡುವುದಿಲ್ಲ ಎಂದು ಕಾಂಗ್ರೆಸ್ ಏಜೆಂಟರು ಪಟ್ಟು ಹಿಡಿದರು.

ಮತ್ತೊಂದೆಡೆ ಬಿಜೆಪಿ ಕಾರ್ಯಕರ್ತರು ಸ್ಥಳಕ್ಕೆ ಬಂದು ಲಭ್ಯವಿರುವ ಸಿಬ್ಬಂದಿಯೊಂದಿಗೆ ಪ್ರಕ್ರಿಯೆ ಆರಂಭಿಸಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದರು. ಇದರಿಂದ ಎರಡೂ ಪಕ್ಷಗಳ ಮುಖಂಡರ ನಡುವೆ ಮಾತಿನ ಚಕಮಕಿ ಉಂಟಾಗಿ ಕೆಲಕಾಲ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು. ಗೊಂದಲದ ವಾತಾವರಣ ನಿರ್ಮಾಣ ಆಗುತ್ತಿದ್ದಂತೆಯೇ ಚುನಾವಣಾ ನೋಂದಣಾಧಿಕಾರಿ ಫಾತಿಮಾ ಅವರು ಸ್ಥಳಕ್ಕೆ ಬಂದು ಪರಿಸ್ಥಿತಿ ತಿಳಿಗೊಳಿಸಿದರು. ಕರ್ತವ್ಯಕ್ಕೆ ಹಾಜರಾಗದ ಬಿಎಲ್‌ಒಗಳಿಗೆ ಕರೆ ಮಾಡಿ ತರಾಟೆಗೆ ತೆಗೆದುಕೊಂಡರು ಎಂದು ಮೂಲಗಳು ತಿಳಿಸಿವೆ. ಈ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ ಎಂದು ಪೊಲೀಸರು ಮಾಹಿತಿ ನೀಡಿದರು.

ಬಾಂಗ್ಲಾದ ಇಬ್ಬರ ಸೆರೆ, 10 ಮಹಿಳೆಯರ ವಶ

ಅಕ್ರಮ ವಾಸ: ಕೇಂದ್ರ ಅಪರಾಧ ವಿಭಾಗದ ಪೊಲೀಸರ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ನೆಲಸಿದ್ದ ಬಾಂಗ್ಲಾದೇಶದ ಇಬ್ಬರನ್ನು ಬಂಧಿಸಿ 10 ಮಹಿಳೆಯರನ್ನು ಕೇಂದ್ರ ಅಪರಾಧ ವಿಭಾಗದ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಬಾಂಗ್ಲಾದ ಮನ್ಸೂರ್ ಅಲಿ (29) ಮತ್ತು ಮುಕಲ್ (32) ಬಂಧಿತರು.

10 ಮಹಿಳೆಯರನ್ನು ವಶಕ್ಕೆ ಪಡೆದು ವಿದೇಶಿ ಪ್ರಾದೇಶಿಕ ನೋಂದಣಿ ಕಚೇರಿ (ಎಫ್‌ಆರ್‌ ಆರ್‌ಒ) ಅಧಿಕಾರಿಗಳಿಗೆ ಒಪ್ಪಿಸಲಾಗಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಮಾನವ ಕಳ್ಳ ಸಾಗಣೆ ಮೂಲಕ ಬಾಂಗ್ಲಾದೇಶದಿಂದ ಮಹಿಳೆಯರನ್ನು ಕರೆತಂದು ಬಾಣಸವಾಡಿ ಮತ್ತು ಹೆಣ್ಣೂರು ಠಾಣಾ ವ್ಯಾಪ್ತಿಯ ಮನೆಗಳಲ್ಲಿ ವೇಶ್ಯಾವಾಟಿಕೆ ದಂಧೆ ನಡೆಸುತ್ತಿರುವ ಮಾಹಿತಿ ಸಿಕ್ಕಿತ್ತು. ಸಿಸಿಬಿಯ ಮಹಿಳೆಯರ ರಕ್ಷಣಾ ವಿಭಾಗದ ಎಸಿಪಿ ಧರ್ಮೇಂದ್ರ ಮತ್ತು ತಂಡವು, ಆ ಮನೆಗಳ ಮೇಲೆ ದಾಳಿ ನಡೆಸಿತ್ತು. ಪರಿಶೀಲನೆ ವೇಳೆ ವೇಶ್ಯಾವಾಟಿಕೆ ದಂಧೆ ನಡೆಸುತ್ತಿರುವುದು ಗೊತ್ತಾಗಿತ್ತು ಎಂದು ಮೂಲಗಳು ಹೇಳಿವೆ. ಆರೋಪಿಗಳು ಮತ್ತು ರಕ್ಷಣೆ ಮಾಡಿದ ಮಹಿಳೆಯರ ಬಳಿ ಬಾಂಗ್ಲಾದೇಶದ ಗುರುತಿನ ಚೀಟಿಗಳು ಹಾಗೂ ಇತರೆ ದಾಖಲೆಗಳು ಪತ್ತೆಯಾಗಿವೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಎರಡು ತಿಂಗಳ ಹಿಂದೆ ಪಶ್ಚಿಮ ಬಂಗಾಳ ಮಾರ್ಗವಾಗಿ ಭಾರತಕ್ಕೆ ಬಂದಿದ್ದೆವು. ಗಡಿಭಾಗದಲ್ಲಿ ಮಧ್ಯವರ್ತಿಗಳಿಗೆ ಹಣ ನೀಡಿ ಮಹಿಳೆಯರನ್ನು ಭಾರತಕ್ಕೆ ಕರೆಸಿಕೊಂಡಿದ್ದೆವು. ಒಂದು ತಿಂಗಳಿಂದ ನಗರದಲ್ಲಿ ವಾಸವಿದ್ದೆವು ಎಂಬುದಾಗಿ ವಿಚಾರಣೆ ವೇಳೆ ಆರೋಪಿಗಳು ತಿಳಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಅಕ್ರಮವಾಗಿ ನೆಲಸಿದ್ದ 12 ಮಂದಿಯನ್ನು ಗಡಿಪಾರು ಮಾಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಹೆಣ್ಣೂರು ಮತ್ತು ಬಾಣಸವಾಡಿ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ' ಎಂದು ಮೂಲಗಳು ಹೇಳಿವೆ.

ವಿಧಾನಸೌಧದ ಎದುರು ಹೊಡೆದಾಟ: ಯುವಕರ ಬಂಧನ

ಬೆಂಗಳೂರು: ಛಾಯಾಚಿತ್ರ ತೆಗೆಯುವ ವೇಳೆ ಅಡ್ಡ ಬಂದ ವಿಚಾರಕ್ಕೆ ನೇಪಾಳದ ಎರಡು ಗುಂಪಿನ ಯುವಕರು ವಿಧಾನಸೌಧದ ಎದುರು ಪರಸ್ಪರ ಹೊಡೆದಾಡಿಕೊಂಡಿದ್ದು, ಘಟನೆ ಸಂಬಂಧ ನಾಲ್ವರು ಯುವಕರನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿಧಾನಸೌಧ ಎದುರಿನ 'ನಮ್ಮ ಮೆಟ್ರೊ' ನಿಲ್ದಾಣದ ಬಳಿ ಜೂನ್ 28ರಂದು ಎರಡು ಗುಂಪಿನ ಯುವಕರು ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ಮುಖಕ್ಕೆ ಹೊಡೆಯುತ್ತಿರುವ, ಒದೆಯುತ್ತಿರುವ ದೃಶ್ಯವನ್ನು ಸ್ಥಳೀಯರು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದರು. ಆ ದೃಶ್ಯವನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದರು. ಇದನ್ನು ಆಧರಿಸಿ ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ. ಒಂದು ಗುಂಪಿನ ಯುವಕರು ವಿಧಾನಸೌಧದ ಎದುರು ನಿಂತು ಫೋಟೊ ತೆಗೆಸಿಕೊಳ್ಳುತ್ತಿದ್ದರು. ಆಗ ಮತ್ತೊಂದು ಗುಂಪಿನ ಯುವಕರು ಅಡ್ಡ ಬಂದಿದ್ದರು. ಅದೇ ಕಾರಣಕ್ಕೆ ಎರಡೂ ಗುಂಪಿನವರ ನಡುವೆ ಗಲಾಟೆಯಾಗಿದೆ' ಎಂದು ಮೂಲಗಳು ಹೇಳಿವೆ.

13 ಸೆಕೆಂಡಿನ ವಿಡಿಯೊ ತುಣುಕಿನಲ್ಲಿ ಪರಸ್ಪರ ತಳ್ಳಾಡುತ್ತಿರುವ, ಗುದ್ದಾಡುತ್ತಾ ಪಾದಚಾರಿ ಮಾರ್ಗದಲ್ಲಿ ಯುವಕರು ಬೀಳುತ್ತಿರುವ ದೃಶ್ಯವು ಸೆರೆಯಾಗಿದೆ. ಕೈಯಲ್ಲಿದ್ದ ವಸ್ತುಗಳಿಂದಲೂ ಹಲ್ಲೆ ಮಾಡಿಕೊಂಡಿದ್ದಾರೆ.

ಹಿಂದೆಯೂ ನಡೆದಿತ್ತು ಗಲಾಟೆ: ಕಳೆದ ವರ್ಷದ ನವೆಂಬರ್‌ನಲ್ಲೂ ನೇಪಾಳದ ಯುವಕರೇ ವಿಧಾನಸೌಧದ ಎದುರು ಗಲಾಟೆ ಮಾಡಿಕೊಂಡಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ನೇಪಾಳದ 11 ಯುವಕರನ್ನು ಕೇಂದ್ರ ವಿಭಾಗದ ಪೊಲೀಸರು ಬಂಧಿಸಿದ್ದರು. ಆಗ ರೀಲ್ಸ್ ವಿಚಾರಕ್ಕೆ ಗಲಾಟೆ ನಡೆದಿತ್ತು.

ಚಿಟಿಕೆ ಸುದ್ದಿ

ಫ್ಲ್ಯಾಟ್‌ನಲ್ಲಿ ಬೆಂಕಿ ಅವಘಡ


ಅವಘಡ ಸಂಭವಿಸಿದ್ದ ಫ್ಲ್ಯಾಟ್

ಬೆಂಗಳೂರು: ಗರುಡ ಮಾಲ್ ಬಳಿಯ ರಾಯಲ್ ಹೆರಿಟೇಜ್ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ವೊಂದರಲ್ಲಿ ಮಂಗಳವಾರ ಮಧ್ಯಾಹ್ನ ಬೆಂಕಿ ಅವಘಡ ಸಂಭವಿಸಿದ್ದು, ವಸ್ತುಗಳು ಹಾಗೂ ಪೀಠೋಪಕರಣಗಳು ಭಸ್ಮವಾಗಿವೆ.

'ಅಪಾರ್ಟ್‌ಮೆಂಟ್‌ನ ನಾಲ್ಕನೇ ಮಹಡಿಯ ಫ್ಲ್ಯಾಟ್‌ನಲ್ಲಿ ದಿಢೀರ್ ಬೆಂಕಿ ಕಾಣಿಸಿಕೊಂಡು ದಟ್ಟ ಹೊಗೆ ಆವರಿಸಿತ್ತು. ಇತರೆ ಫ್ಲ್ಯಾಟ್‌ಗಳ ನಿವಾಸಿಗಳು ಭಯಗೊಂಡು ಹೊರಕ್ಕೆ ಬಂದಿದ್ದರು. ತಕ್ಷಣ ಸ್ಥಳಕ್ಕೆ ತೆರಳಿದ್ದ ಅಗ್ನಿಶಾಮಕ ದಳದ ಸಿಬ್ಬಂದಿ, ಒಂದು ತಾಸು ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಯಾವುದೇ ಅಪಾಯ ಸಂಭವಿಸಿಲ್ಲ' ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ತಿಳಿಸಿದ್ದಾರೆ.

ಬೆಂಕಿ ಅವಘಡಕ್ಕೆ ಶಾರ್ಟ್ ಸರ್ಕಿಟ್ ಅಥವಾ ಸಿಲಿಂಡರ್‌ನಿಂದ ಅನಿಲ ಸೋರಿಕೆ ಆಗಿರುವುದು ಕಾರಣವೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಸ್ಥಳಕ್ಕೆ ಅಶೋಕನಗರ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು ಎಂದು ಮೂಲಗಳು ತಿಳಿಸಿವೆ.

ಸೆರಾಮಿಕ್ಸ್ ಗೋದಾಮಿಗೆ ಬೆಂಕಿ

ನೆಲಮಂಗಲ: ತಾಲ್ಲೂಕಿನ ಬೂದಿಹಾಳ್ ಗ್ರಾಮದಲ್ಲಿರುವ ಖಾಸಗಿ ಕಂಪನಿಯ ಸೆರಾಮಿಕ್ಸ್ ಗೋದಾಮಿನಲ್ಲಿದ್ದ ವಸ್ತುಗಳಿಗೆ ಮಂಗಳವಾರ ಬೆಳಗಿನ ಜಾವ ಬೆಂಕಿ ತಗುಲಿ ಹೊತ್ತಿ ಉರಿದಿದೆ. ಈ ಘಟನೆಗೆ ವಿದ್ಯುತ್ ಶಾರ್ಟ್ ಸರ್ಕಿಟ್ ಕಾರಣವೆಂದು ಶಂಕಿಸಲಾಗಿದೆ.

ಬೆಳಗಿನ ಜಾವ ಅವಘಡ ನಡೆದಿದ್ದರಿಂದ, ಮಾಹಿತಿ ದೊರಕಿ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬರುವಷ್ಟರಲ್ಲಿ ಗೋದಾಮು ಸಂಪೂರ್ಣ ಭಸ್ಮವಾಗಿತ್ತು. ನಾಲ್ಕಕ್ಕೂ ಹೆಚ್ಚು ವಾಹನಗಳಲ್ಲಿ ಸಿಬ್ಬಂದಿ ಎಂಟು ತಾಸಿಗೂ ಹೆಚ್ಚು ಕಾಲ ಕಾರ್ಯಾಚರಣೆ ನಡೆಸಿ ಬೆಂಕಿಯನ್ನು ನಂದಿಸಿದರು. ಗೋದಾಮಿನ ಹೊರಗೆ ಇದ್ದ ಕಾರು ಕೂಡ ಸಂಪೂರ್ಣ ಸುಟ್ಟಿದೆ.

ರಿಯಾಯಿತಿ ದಂಡ: ₹11.93 ಕೋಟಿ ಪಾವತಿ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ 50ರ ರಿಯಾಯಿತಿ ಅಡಿ ದಂಡ ಪಾವತಿಸಲು ಅವಕಾಶ ಕಲ್ಪಿಸಿದ್ದು, ಕಳೆದ ಹತ್ತು ದಿನಗಳಲ್ಲಿ ಒಟ್ಟು ₹11.93 ಕೋಟಿ ದಂಡ ಸಂಗ್ರಹವಾಗಿದೆ.

ಪೊಲೀಸ್ ಇಲಾಖೆಯಲ್ಲಿ ಸಂಚಾರಿ ಇ–ಚಲನ್‌ನಲ್ಲಿ ದಾಖಲಾದ ಪ್ರಕರಣಗಳಿಗೆ ದಂಡ ಪಾವತಿಸಲು ಬಾಕಿ ಉಳಿಸಿಕೊಂಡಿರುವ ಪ್ರಕರಣಗಳಲ್ಲಿ ದಂಡವನ್ನು ಪಾವತಿಸಲು ಶೇ 50ರಷ್ಟು ರಿಯಾಯಿತಿ ನೀಡಿ ರಾಜ್ಯ ಸರ್ಕಾರವು ಆದೇಶಿಸಿತ್ತು.

ದಂಡ ಪಾವತಿಯು ಜೂನ್ 21ರಿಂದ ಆರಂಭವಾಗಿದ್ದು, ಜೂನ್ 30ರ ವರೆಗೆ ಒಟ್ಟು 3,97,506 ಪ್ರಕರಣಗಳು ಇತ್ಯರ್ಥಗೊಂಡಿವೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಮೆಟ್ರೊ ಆಂಬುಲೆನ್ಸ್‌ಗೆ ಚಿಂತನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ನಮ್ಮ ಮೆಟ್ರೊ ಪ್ರಯಾಣಿಕರಿಗೆ ತುರ್ತು ಚಿಕಿತ್ಸೆ ಒದಗಿಸಲು ಮೆಟ್ರೊ ಆಂಬುಲೆನ್ಸ್ ಆರಂಭಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ತಿಳಿಸಿದರು.

ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಅವರನ್ನು ಮಂಗಳವಾರ ಇಲ್ಲಿ ಭೇಟಿ ಮಾಡಿ ಮನವಿ ಸಲ್ಲಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ವಿಷಯದ ಬಗ್ಗೆ ಬೆಂಗಳೂರು ಮೆಟ್ರೊ ರೈಲು ನಿಗಮದ ಅಧಿಕಾರಿಗಳೊಂದಿಗೆ ಬುಧವಾರ ಸಮಾಲೋಚನೆ ನಡೆಸುತ್ತೇನೆ' ಎಂದರು.

'ನಮ್ಮ ಮೆಟ್ರೊದಲ್ಲಿ ಪ್ರತಿನಿತ್ಯ ಲಕ್ಷಾಂತರ ಜನರು ಪ್ರಯಾಣ ಮಾಡುತ್ತಾರೆ. ಮೆಟ್ರೊದಲ್ಲಿ ಪ್ರಯಾಣ ಮಾಡುವಾಗಲೇ ಹಲವರು ಅಸ್ವಸ್ಥರಾಗುತ್ತಾರೆ. ಅಂತಹವರಿಗೆ ತುರ್ತು ಚಿಕಿತ್ಸೆ ಒದಗಿಸಲು ಮೆಟ್ರೊದಲ್ಲಿ ಅಗತ್ಯ ವ್ಯವಸ್ಥೆ ಹಾಗೂ ವೈದ್ಯ ಸಿಬ್ಬಂದಿ ಸೇವೆ ಒದಗಿಸಲು ಚಿಂತಿಸಲಾಗಿದೆ. ತುರ್ತು ಚಿಕಿತ್ಸೆ ನೀಡಿದ ಬಳಿಕ ಆಂಬುಲೆನ್ಸ್‌ನಲ್ಲಿ ಹತ್ತಿರದ ಆಸ್ಪತ್ರೆಗೆ ದಾಖಲಿಸಲಾಗುವುದು' ಎಂದು ಅವರು ವಿವರ ನೀಡಿದರು.

'ರಾಜ್ಯದಲ್ಲಿ ಬೈಕ್ ಆಂಬುಲೆನ್ಸ್‌ಗೆ ಮರು ಚಾಲನೆ ನೀಡಲಾಗುವುದು. ಮೀನುಗಾರರ ರಕ್ಷಣೆಗೆ ಬೋಟ್ ಆಂಬುಲೆನ್ಸ್ ವ್ಯವಸ್ಥೆ ಜಾರಿಗೆ ತರುತ್ತೇವೆ' ಎಂದೂ ಅವರು ಹೇಳಿದರು.

'ರಾಷ್ಟ್ರೀಯ ಆರೋಗ್ಯ ಮಿಷನ್‌ನಡಿ ರಾಜ್ಯಕ್ಕೆ ₹400 ಕೋಟಿ ಅನುದಾನ ಬರಬೇಕಿದೆ. ಈ ಅನುದಾನವನ್ನು ಕೂಡಲೇ ಬಿಡುಗಡೆ ಮಾಡುವಂತೆ ಕೇಂದ್ರ ಸಚಿವರಿಗೆ ಮನವಿ ಮಾಡಿದ್ದೇನೆ. ಆಶಾ ಕಾರ್ಯಕರ್ತರಿಗೆ ಪ್ರತಿ ತಿಂಗಳು ₹8 ಸಾವಿರ ಗೌರವ ಧನ ನೀಡಲಾಗುತ್ತಿದೆ. ಆದರೆ, ಈ ಮೊತ್ತ ಬಹಳ ಕಡಿಮೆ. ಈ ಮೊತ್ತವನ್ನು ₹10 ಸಾವಿರಕ್ಕೆ ಹೆಚ್ಚಿಸುವಂತೆ ಒತ್ತಾಯಿಸಿದ್ದೇನೆ' ಎಂದರು.

'ಮಂಗನ ಕಾಯಿಲೆಯಿಂದಾಗಿ ಮಲೆನಾಡಿನ ಜನರು ತೊಂದರೆಗೀಡಾಗಿದ್ದಾರೆ. ಇದಕ್ಕೆ ಆದಷ್ಟು ಬೇಗ ಲಸಿಕೆ ಕಂಡು ಹಿಡಿಯುವಂತೆ ಐಸಿಎಂಆರ್‌ಗೆ ನಿರ್ದೇಶನ ನೀಡಲು ಸಚಿವರಿಗೆ ಒತ್ತಡ ಹೇರಿದ್ದೇನೆ' ಎಂದು ಅವರು ತಿಳಿಸಿದರು.

'ಈಗಿನ ಬಹುತೇಕ ಸಮಸ್ಯೆಗಳಿಗೆ ಮೊಬೈಲ್ ಕಾರಣ. 18 ವರ್ಷದೊಳಗಿನ ಮಕ್ಕಳು ಮೊಬೈಲ್ ಬಳಸುವುದಕ್ಕೆ ನಿರ್ಬಂಧ ಹೇರಬೇಕಿದೆ. ರಾಜ್ಯಗಳಲ್ಲಿ ನಿಯಮ ರೂಪಿಸಿದರೆ ಹೆಚ್ಚಿನ ಪ್ರಯೋಜನ ಆಗುವುದಿಲ್ಲ. ಹೀಗಾಗಿ, ಕೇಂದ್ರ ಸರ್ಕಾರವೇ ನಿಯಮ ರೂಪಿಸಬೇಕು. ಈ ವಿಷಯುವನ್ನು ಕೇಂದ್ರ ಸಚಿವರ ಗಮನಕ್ಕೆ ತಂದಿದ್ದೇನೆ' ಎಂದರು.

ಚಪ್ಪಲಿ ಎಸೆದ ಘಟನೆ: ಡಿ.ಸಿಗೆ ಸಿದ್ದರಾಮಯ್ಯ ತರಾಟೆ

ಕಣ್ಣೀರು ಹಾಕಿದ ಪ್ರದೀಪ್ ಈಶ್ವರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಬಳ್ಳಾಪುರದಲ್ಲಿ ನಡೆದ ಕೆಂಪೇಗೌಡ ಜಯಂತಿ ಆಚರಣೆ ವೇಳೆ ಸ್ಥಳೀಯ ಶಾಸಕ ಪ್ರದೀಪ್ ಈಶ್ವರ್ ಮೇಲೆ ಚಪ್ಪಲಿ ಎಸೆದಿರುವ ಘಟನೆಯ ಬಗ್ಗೆ ಸೂಕ್ತ ತನಿಖೆ ನಡೆಸಬೇಕು ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಕರೆ ಮಾಡಿ ಸಲಹೆ ನೀಡಿದ್ದಾರೆ.

'ಪೊಲೀಸರ ಸಮ್ಮುಖದಲ್ಲೇ ಆಡಳಿತ ಪಕ್ಷದ ಶಾಸಕನಿಗೆ ಈ ರೀತಿ ಆಗಿರುವುದು ಅಕ್ಷಮ್ಯ. ಸಂಬಂಧಪಟ್ಟ ಅಧಿಕಾರಿಯ ವಿರುದ್ಧ ಅಗತ್ಯ ಕ್ರಮ ತೆಗೆದುಕೊಳ್ಳಬೇಕು' ಎಂದೂ ತಿಳಿಸಿದ್ದಾರೆ.

ಇದೇ ವೇಳೆ ಜಿಲ್ಲಾಧಿಕಾರಿಗೂ ಕರೆ ಮಾಡಿದ ಸಿದ್ದರಾಮಯ್ಯ, 'ಜನರಿಂದ ಗೆದ್ದು ಬಂದ ಶಾಸಕನ ಮೇಲೆ ದಬ್ಬಾಳಿಕೆ ನಡೆಯುತ್ತಿದ್ದಾಗ ಏನು ಮಾಡುತ್ತಿದ್ದಿರಿ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಏನು ಮಾಡುತ್ತಿದ್ದರು. ಈ ಘಟನೆಗೆ ಸಂಬಂಧಿಸಿದಂತೆ ಇಲ್ಲಿಯವರೆಗೂ ಏನು ಕ್ರಮ ತೆಗೆದುಕೊಂಡಿದ್ದೀರಿ' ಎಂದು ಜೋರು ಧ್ವನಿಯಲ್ಲಿ ಪ್ರಶ್ನಿಸಿದ್ದಾರೆ.


ಸಿದ್ದರಾಮಯ್ಯ ಅವರನ್ನು ಪ್ರದೀಪ್ ಈಶ್ವರ್ ಭೇಟಿ ಮಾಡಿದರು

ಸಿದ್ದರಾಮಯ್ಯ ಅವರನ್ನು ಮಂಗಳವಾರ ಭೇಟಿ ಮಾಡಿದ ಪ್ರದೀಪ್ ಈಶ್ವರ್, ಕೆಂಪೇಗೌಡ ಜಯಂತಿ ಆಚರಣೆಯ ಸಂದರ್ಭದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರು ತಮ್ಮ ಮೇಲೆ ಚಪ್ಪಲಿ ಎಸೆದು, ತಮ್ಮ ಕುಟುಂಬದವರನ್ನು ನಿಂದಿಸಿದ್ದು ಸೇರಿದಂತೆ ಅಂದು ನಡೆದ ಘಟನೆಯನ್ನು ವಿವರಿಸಿ, ನೋವು ಹಂಚಿಕೊಂಡು ಕಣ್ಣೀರು ಹಾಕಿದರು.

'ರಾಜಕಾರಣದಲ್ಲಿ ಇಂತಹ ಘಟನೆಗಳು ಸಾಮಾನ್ಯ. ಇಲ್ಲೇ ಇದ್ದು ಇಂಥವನ್ನು ಎದುರಿಸಬೇಕು. ಇದರಿಂದ ಧೃತಿಗೆಡಬೇಡಿ, ನಿಮ್ಮೊಂದಿಗೆ ನಾವಿದ್ದೇವೆ' ಎಂದು ಪ್ರದೀಪ್ ಈಶ್ವರ್‌ಗೆ ಸಿದ್ದರಾಮಯ್ಯ ಧೈರ್ಯ ತುಂಬಿದ್ದಾರೆ.

ಬಳಿಕ ಪ್ರಿಯಾಂಕ್ ಖರ್ಗೆ ಜೊತೆ ದೂರವಾಣಿ ಮೂಲಕ ಮಾತನಾಡಿದ ಸಿದ್ದರಾಮಯ್ಯ, ಈ ಘಟನೆ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ತಿಳಿಸಿದರು.

ಉಪ ಮುಖ್ಯಮಂತ್ರಿ ಜಿ. ಪರಮೇಶ್ವರ, ನಗರಾಭಿವೃದ್ಧಿ ಸಚಿವ ಯತೀಂದ್ರ ಸಿದ್ದರಾಮಯ್ಯ, ಶಾಸಕರಾದ ಎನ್. ಚಲುವರಾಯಸ್ವಾಮಿ, ಮಧು ಬಂಗಾರಪ್ಪ, ಸಂತೋಷ್ ಲಾಡ್, ಕೆ.ಎಂ. ಶಿವಲಿಂಗೇಗೌಡ, ಯಾಸೀರ್ ಅಹ್ಮದ್‌ಖಾನ್ ಪಠಾಣ್, ಶ್ರೀನಿವಾಸ ಮಾನೆ, ಪಾವಗಡ ವೆಂಕಟೇಶ ಅವರೂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ಮಾದಕ ವಸ್ತು ವಿರುದ್ಧ ಜಾಗೃತಿ ರ‍್ಯಾಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕ ವಸ್ತು ವ್ಯಸನ ಮತ್ತು ಮಾದಕ ವಸ್ತುಗಳ ಕಳ್ಳಸಾಗಣೆ ವಿರುದ್ಧ ಸೇಂಟ್ ಆನ್ಸ್ ಎಜುಕೇಷನಲ್ ಸೊಸೈಟಿ ವತಿಯಿಂದ ಟೀಮ್ ತೂಫಾನ್ ಸಹಯೋಗದಲ್ಲಿ ನಗರದಲ್ಲಿ ಬೃಹತ್ ಜಾಗೃತಿ ರ‍್ಯಾಲಿ ನಡೆಯಿತು.

'ಮಾದಕ ವ್ಯಸನಕ್ಕೆ ಇಲ್ಲ ಎನ್ನಿ... ಜೀವನಕ್ಕೆ ಹೌದು ಎನ್ನಿ... ಬನ್ನಿ, ಎಲ್ಲರೂ ಸೇರಿ ವ್ಯಸನಮುಕ್ತ ಭಾರತವನ್ನು ನಿರ್ಮಿಸೋಣ' ಎಂಬ ಘೋಷವಾಕ್ಯದೊಂದಿಗೆ ನಡೆದ ಈ ರ‍್ಯಾಲಿಯಲ್ಲಿ ಸೇಂಟ್ ಆನ್ಸ್ ಎಜುಕೇಷನಲ್ ಸೊಸೈಟಿಯ ಅಧೀನದಲ್ಲಿರುವ ಸೇಂಟ್ ಆನ್ಸ್ ಪಬ್ಲಿಕ್ ಸ್ಕೂಲ್ (ಸಿಬಿಎಸ್‌ಇ), ಮೇರಿಯನ್ ಪ್ರಾಥಮಿಕ ಹಾಗೂ ಪ್ರೌಢ ಶಾಲೆ, ಸೇಂಟ್ ಮೇರೀಸ್ ಬಾಲಕಿಯರ ಪ್ರೌಢಶಾಲೆ, ಸೇಂಟ್ ಆನ್ಸ್ ಪಿಯು ಕಾಲೇಜಿನ ವಿದ್ಯಾರ್ಥಿಗಳು, ಶಿಕ್ಷಕರು, ಸಿಬ್ಬಂದಿ ಭಾಗವಹಿಸಿದರು.

ವಿದ್ಯಾರ್ಥಿಗಳು ಮಾದಕ ವಸ್ತು ವ್ಯಸನದ ದುಷ್ಪರಿಣಾಮಗಳನ್ನು ಸಾರುವ ಫಲಕಗಳನ್ನು ಹಿಡಿದು, ಘೋಷಣೆಗಳನ್ನು ಕೂಗುತ್ತ, ಜಾಗೃತಿ ಮೂಡಿಸಲು ಯತ್ನಿಸಿದರು. ಆ ಮೂಲಕ, ಆರೋಗ್ಯಕರ ಹಾಗೂ ಜವಾಬ್ದಾರಿಯುತ ಜೀವನಶೈಲಿಯ ಮಹತ್ವವನ್ನು ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಟ್ಟರು.



ಮಾದಕ ವಸ್ತು ವಿರುದ್ಧ ಸೇಂಟ್ ಆನ್ಸ್ ಎಜುಕೇಷನಲ್ ಸೊಸೈಟಿ ವತಿಯಿಂದ ಟೀಮ್ ತೂಫಾನ್ ಸಹಯೋಗದಲ್ಲಿ ಜಾಗೃತಿ ರ‍್ಯಾಲಿ ನಡೆಯಿತು

ಸೇಂಟ್ ಆನ್ಸ್ ಎಜುಕೇಷನಲ್ ಸೊಸೈಟಿಯ ವ್ಯವಸ್ಥಾಪಕರಾದ ರೆ. ಸಿಸ್ಟರ್ ಸೋಫಿ ಜಾರ್ಜ್, ಸೇಂಟ್ ಆನ್ಸ್ ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಸಿಸ್ಟರ್ ಮೇರಿ ಶೀಜಾ ಫರ್ನಾಂಡಿಸ್ ಎ. ಹಾಗೂ ಮೇರಿಯನ್ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಪ್ರಾಂಶುಪಾಲರಾದ ಸಿಸ್ಟರ್ ಸುಗುಣ ಅವರ ನಾಯಕತ್ವದಲ್ಲಿ ರ‍್ಯಾಲಿ ನಡೆಯಿತು.

'ಟೀಮ್ ತೂಫಾನ್ ಸಂಸ್ಥೆಯು ಯುವಜನರಲ್ಲಿ ಮಾದಕ ವಸ್ತು ವ್ಯಸನ ಮತ್ತು ಮಾದಕ ವಸ್ತುಗಳ ಕಳ್ಳಸಾಗಣೆಯ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು ಶ್ರಮಿಸುತ್ತಿದೆ. ವಿದ್ಯಾರ್ಥಿಗಳ ಉತ್ಸಾಹಭರಿತ ಭಾಗವಹಿಸುವಿಕೆ, ಶಿಸ್ತು ಹಾಗೂ ಸಾಮಾಜಿಕ ಕಳಕಳಿಯು ಈ ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿತ್ತು. ಘೋಷಣೆಗಳು ಮತ್ತು ಸಂದೇಶಗಳ ಮೂಲಕ 'ವ್ಯಸನಕ್ಕಿಂತ ಜೀವನವೇ ಶ್ರೇಷ್ಠ' ಎಂಬ ಸಂದೇಶವನ್ನು ಸಮಾಜಕ್ಕೆ ಪರಿಣಾಮಕಾರಿಯಾಗಿ ತಲುಪಿಸಲಾಯಿತು' ಎಂದು ಸಿಸ್ಟರ್ ಸೋಫಿ ಜಾರ್ಜ್ ತಿಳಿಸಿದರು.

ಹೂಡಿಕೆ ಹೆಸರಿನಲ್ಲಿ ₹2.12 ಕೋಟಿ ವಂಚನೆ

ಬೆಂಗಳೂರು: ಹೂಡಿಕೆ ಹೆಸರಿನಲ್ಲಿ ಮಹಿಳೆಗೆ ₹2.12 ಕೋಟಿ ವಂಚಿಸಿದ್ದು, ಈ ಸಂಬಂಧ ವೈಟ್‌ಫೀಲ್ಡ್ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಮಮೂರ್ತಿ ನಗರದ ಮಾರಗೊಂಡನಹಳ್ಳಿಯಲ್ಲಿ ನೆಲಸಿರುವ 45 ವರ್ಷದ ಮಹಿಳೆ ನೀಡಿದ ದೂರಿನ ಮೇರೆಗೆ ಮಾಹಿತಿ ತಂತ್ರಜ್ಞಾನ ಕಾಯ್ದೆ ಹಾಗೂ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ಅಪರಾಧ ಠಾಣೆ ಪೊಲೀಸರು ಹೇಳಿದರು.

'ಟೆಲಿಗ್ರಾಂ' ಆ್ಯಪ್ ಮೂಲಕ ದೂರುದಾರರನ್ನು ಸಂಪರ್ಕಿಸಿದ್ದ ಸೈಬರ್ ವಂಚಕರು, ಅರೆಕಾಲಿಕ ಉದ್ಯೋಗದ ಬಗ್ಗೆ ಮಾಹಿತಿ ನೀಡಿದ್ದರು. ರೇಟಿಂಗ್ ಕೊಡುವುದರ ಮೂಲಕವೂ ಹೆಚ್ಚಿನ ಹಣ ಗಳಿಸಬಹುದು ಎಂದೂ ಹೇಳಿದ್ದರು. ಅಲ್ಲದೇ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಗಳಿಸಬಹುದು ಎಂಬುದಾಗಿಯೂ ದೂರುದಾರ ಮಹಿಳೆಯನ್ನು ಆರೋಪಿಗಳು ನಂಬಿಸಿದ್ದರು ಎಂದು ಮೂಲಗಳು ಹೇಳಿವೆ.

ದೂರುದಾರರು ತಮ್ಮ ಬ್ಯಾಂಕ್ ಖಾತೆಯಿಂದ ಸೈಬರ್ ವಂಚಕರು ಕಳುಹಿಸಿದ್ದ ವಿವಿಧ ಬ್ಯಾಂಕ್‌ಗಳ 17 ಖಾತೆಗಳಿಗೆ ಹಂತಹಂತವಾಗಿ ₹2.12 ಕೋಟಿ ವರ್ಗಾವಣೆ ಮಾಡಿದ್ದರು. ಬಳಿಕ ಹಣ ಹಿಂಪಡೆಯಲು ಯತ್ನಿಸಿದಾಗ ಸಾಧ್ಯ ಆಗಿರಲಿಲ್ಲ. ಸೈಬರ್ ಅಪರಾಧ ಠಾಣೆಗೆ ಮಹಿಳೆ ದೂರು ನೀಡಿದ್ದಾರೆ ಎಂದು ಪೊಲೀಸರು ಹೇಳಿದರು.

ವರ್ಗಾವಣೆ: 15ರವರೆಗೆ ಅವಧಿ ವಿಸ್ತರಣೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆ ಅವಧಿಯನ್ನು ಜುಲೈ 15ರವರೆಗೆ ವಿಸ್ತರಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

2026–27ನೇ ಸಾಲಿನ ವರ್ಗಾವಣೆಯನ್ನು ಮೇ 31ರವರೆಗೆ ಕೈಗೊಳ್ಳಲು ಅವಕಾಶ ನೀಡಲಾಗಿತ್ತು. ನಂತರ ಜೂನ್ 30ರವರೆಗೆ ವಿಸ್ತರಿಸಲಾಗಿತ್ತು. ಪ್ರಸ್ತುತ ಅವಧಿ ಮುಕ್ತಾಯ ಆಗಿರುವುದರಿಂದ, ಆಡಳಿತಾತ್ಮಕ ಅಗತ್ಯಗಳನ್ನು ಪರಿಗಣಿಸಿ ವರ್ಗಾವಣೆ ಅವಧಿಯನ್ನು ಮತ್ತೊಮ್ಮೆ ವಿಸ್ತರಿಸ ಲಾಗಿದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಇಲ್ಲಿದೆ ನೋಡಿ ಕಸ...

ಪ್ರಜಾವಾಣಿ ಸಿಟಿಜನ್ ಕನೆಕ್ಟ್
ಉತ್ತಮ ಬೆಂಗಳೂರಿಗಾಗಿ ಸಹಯೋಗ
96060 38256
dhpvcitizenconnect@printersmysore.co.in

ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳ ಸಂಪರ್ಕ
- ಕರೀಗೌಡ-ಸಿಇಒ- 77605 04651
- ರಾಮಮಣಿ-ಸಿಇಒ- 94481 97256
- ರಾಜೇಶ್-ಸಿಇಒ- 948068 84046
- ರಾಘವೇಂದ್ರ ಪ್ರಸಾದ್ -ಸಿಇಒ-91102 89696

ನಗರದಲ್ಲಿ ದಿನವೂ ಕಸ ವಿಲೇವಾರಿ ಆಗುತ್ತಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಹೇಳುತ್ತಿದ್ದರೂ, ಮುಖ್ಯರಸ್ತೆ, ವಾರ್ಡ್ ರಸ್ತೆಗಳಲ್ಲಿ ಕಸದ ರಾಶಿ ನಿತ್ಯವೂ ಬಿದ್ದಿರುತ್ತದೆ. ನಿಮ್ಮ ಪ್ರದೇಶಗಳಲ್ಲಿ ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ವಿವರಗಳೊಂದಿಗೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳಿಗೆ ಕಳುಹಿಸಿಕೊಡಿ ಮತ್ತು ಆ ಮಾಹಿತಿಯನ್ನು ನಿಮ್ಮ ಹೆಸರು ಹಾಗೂ ವಿಳಾಸದೊಂದಿಗೆ 'ಪ್ರಜಾವಾಣಿ'ಗೂ ಕಳುಹಿಸಿಕೊಡಿ. ಕಸ ತೆರವು ಮಾಡಿದ ಮೇಲೆ ಅದರ ಚಿತ್ರ ಮಾಹಿತಿಯನ್ನೂ ಕಳುಹಿಸಿ. ಅದನ್ನೂ ಪ್ರಕಟಿಸಲಾಗುತ್ತದೆ.


ನಗರದ ನಾಯಂಡಹಳ್ಳಿ ವೃತ್ತದ ಬಳಿ ಹಾಕಲಾಗಿರುವ ಕಸದ ರಾಶಿ


ಬನಶಂಕರಿ ಬಳಿಯ ಕದಿರೇನಹಳ್ಳಿ ಹೊರ ವರ್ತುಲ ರಸ್ತೆಯಲ್ಲಿ ಕಂಡುಬಂದ ಕಸದ ರಾಶಿ


ಕೆ.ಆರ್‌.ಪುರದ ಕನಕನಗರದ ಕೆ.ಚನ್ನಸಂದ್ರ ವಾರ್ಡ್‌ನ ನೇತ್ರಾವತಿ ಎನ್‌ಕ್ಲೇವ್ ಬಳಿಯ ಕಸದ ರಾಶಿ –ಜಿ.ಎನ್. ಶ್ರೀನಿವಾಸ ಗೌಡ


ಕುರುಬರಹಳ್ಳಿಯ 5ನೇ ಕ್ರಾಸ್‌ನ ಖಾಲಿ ನಿವೇಶನದಲ್ಲಿ ಬಿದ್ದಿರುವ ಕಸ –ರಾಜೇಂದ್ರ


ಸುಂಕದಕಟ್ಟೆ ಟೆಲಿಫೋನ್ ಲೇಔಟ್‌ನ ಒಂದನೇ ಮುಖ್ಯರಸ್ತೆಯಲ್ಲಿ ಕಸದ ರಾಶಿ –ರವಿ ಕೆ.ಎಚ್.


ಮಾಗಡಿ ರಸ್ತೆಯ ಕಾಮಾಕ್ಷಿಪಾಳ್ಯದಲ್ಲಿರುವ ಚನ್ನಪ್ಪ ಕೈಗಾರಿಕಾ ಪ್ರದೇಶದಲ್ಲಿ ಎಸೆಯಲಾದ ತ್ಯಾಜ್ಯ –ಹು.ಕಾ. ಗೌಡಯ್ಯ

ವರದಿ ಪರಿಣಾಮ



ಬೆಂಗಳೂರು ಜಿಲ್ಲಾಧಿಕಾರಿ ಕಚೇರಿ ರಸ್ತೆಯಿಂದ ಕಬ್ಬನ್ ಪೇಟೆ ರಸ್ತೆ ಸಂಪರ್ಕಿಸುವ ದಾರಿಯಲ್ಲಿನ ಕಸದ ರಾಶಿ ವಿಲೇವಾರಿಯಾಗಿದೆ (ಒಳಗಿನ ಚಿತ್ರದಲ್ಲಿ ಕಸ ತೆರವಿಗೂ ಮುನ್ನ ಇದ್ದ ಪರಿಸ್ಥಿತಿ)


ಲಗ್ಗೆರೆ ಮುಖ್ಯರಸ್ತೆಯಲ್ಲಿರುವ ಬಿ.ಬೆಸ್ಟ್ ಸ್ಕೂಲ್ ಬಳಿ ಹಾಕಿದ್ದ ಕಸದ ರಾಶಿಯನ್ನು ತೆರವುಗೊಳಿಸಲಾಗಿದೆ

ನಗರದಲ್ಲಿ ಇಂದು

ಮಹಾ ಕುಂಭಾಭಿಷೇಕ: ವಿವಿಧ ಧಾರ್ಮಿಕ ಕಾರ್ಯಕ್ರಮ, ಆಯೋಜನೆ ಹಾಗೂ ಸ್ಥಳ: ವರಸಿದ್ಧಿ ವಿನಾಯಕ ದೇವಸ್ಥಾನ, ತಂಬುಚೆಟ್ಟಿ ರಸ್ತೆ, ಕಾಕ್ಸ್ ಟೌನ್, ಬೆಳಿಗ್ಗೆ 9ರಿಂದ

ಕ್ಷೇತ್ರ ಸಿಬ್ಬಂದಿಗೆ ಮುಂಗಾರು ಹಂಗಾಮಿನಲ್ಲಿ ಪ್ರಮುಖ ಬೆಳೆಗಳ ಸುಧಾರಿತ ಬೇಸಾಯ ಕ್ರಮಗಳ ತರಬೇತಿ: ಉದ್ಘಾಟನೆ: ಎಸ್.ವಿ. ಸುರೇಶ, ಅತಿಥಿಗಳು: ಮುರಳಿ ಕೃಷ್ಣ, ರಮೇಶ್ ಕುಮಾರ್ ಎಚ್.ವಿ., ಎಸ್.ಬಿ. ಪಾಟೀಲ್, ಅಧ್ಯಕ್ಷತೆ: ವೈ.ಎನ್. ಶಿವಲಿಂಗಯ್ಯ, ಆಯೋಜನೆ ಹಾಗೂ ಸ್ಥಳ: ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ಬೆಳಿಗ್ಗೆ 10


ಜಿಎಸ್‌ಟಿ ದಿನ: ಮುಖ್ಯ ಅತಿಥಿ: ವಿಭು ಬಖ್ರು, ಆಯೋಜನೆ: ಕೇಂದ್ರ ತೆರಿಗೆ ಮುಖ್ಯ ಆಯುಕ್ತರು ಬೆಂಗಳೂರು ವಲಯ, ಸ್ಥಳ: ಕಾವೇರಿ ಹಾಲ್, ಸಿ.ಆರ್.ಬಿಲ್ಡಿಂಗ್ಸ್, ಕ್ವೀನ್ಸ್ ರಸ್ತೆ, ಸಂಜೆ 5

75ನೇ ಸಂಸ್ಥಾಪಕರ ದಿನಾಚರಣೆ: ಅತಿಥಿ: ಎಸ್. ಶ್ರೀಕಂಠಸ್ವಾಮಿ, ಜಗದೀಶ್ ರೆಡ್ಡಿ, ಅಧ್ಯಕ್ಷತೆ: ಎಚ್.ಶರತ್ ಚಂದ್ರ, ಆಯೋಜನೆ ಹಾಗೂ ಸ್ಥಳ: ವಿಲ್ಸನ್ ಗಾರ್ಡನ್ ವಿದ್ಯಾಸಂಸ್ಥೆ, ಹೊಂಬೇಗೌಡನಗರ, ಬೆಳಿಗ್ಗೆ 10.30

ಪತ್ರಿಕಾ ದಿನಾಚರಣೆ: 'ಡಿಜಿಟಲ್ ಯುಗದಲ್ಲಿ ನಿಜ ಪತ್ರಕರ್ತರು ಯಾರು?' ವಿಷಯದ ಬಗ್ಗೆ ವಿಚಾರಸಂಕಿರಣ, ಉದ್ಘಾಟನೆ: ಜಿ. ಪರಮೇಶ್ವರ, ಅತಿಥಿಗಳು: ಪಿ.ಸಿ.ಮೋಹನ್, ಕೆ. ಶ್ರೀನಿವಾಸ ರೆಡ್ಡಿ, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಪ್ರಧಾನ ಭಾಷಣ: ಅಬ್ದುಸ್ಸಲಾಂ ಪುತ್ತಿಗೆ, ಉಪಸ್ಥಿತಿ: ಆಯೇಶಾ ಖಾನಂ, ಎಂ.ಎನ್. ಅನುಚೇತ್, ವೂಡೇ ಪಿ. ಕೃಷ್ಣ, ಶಿವಾನಂದ ತಗಡೂರು, ಆರ್. ಪೂರ್ಣಿಮಾ, ಆಯೋಜನೆ: ಕರ್ನಾಟಕ ಮಾಧ್ಯಮ ಅಕಾಡೆಮಿ, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಚಿದಾನಂದಮೂರ್ತಿ ಸ್ಮರಣಾರ್ಥ ಸನ್ಮಾನ–ಬಹುಮಾನ ವಿತರಣೆ: ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಬಹುಮಾನ ವಿತರಣೆ: ಎಸ್. ಸುರೇಶ್ ಕುಮಾರ್, ಆಶಯ ನುಡಿ: ರಾ.ನಂ. ಚಂದ್ರಶೇಖರ, ಉಪಸ್ಥಿತಿ: ರಾ. ಪ್ರಭುಶಂಕರ್, ವ.ಚ. ಚನ್ನೇಗೌಡ, ಟಿ.ಎಸ್. ಫಣಿಕುಮಾರ್, ಅಮೃತ ನಾರಾಯಣ, ಸಂಜೀವರತ್ನ, ಶಾಂತಕುಮಾರಿ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ಕಾರ್ಮಿಕ ಲೋಕ, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಸಂಜೆ 5

'ಸುಮಧ್ವ ವಿಜಯ' ಧಾರ್ಮಿಕ ಪ್ರವಚನ: ಕಲ್ಯಾ ಶ್ರೀಕಾಂತಾಚಾರ್ಯ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in


ಸಂಕ್ಷಿಪ್ತ ಸುದ್ದಿ

ಜುಲೈ 15ರಿಂದ ತರಬೇತಿ

ಬೆಂಗಳೂರು: ನಗರದ ಕೋಡಿಹಳ್ಳಿಯಲ್ಲಿರುವ ಕೃಷಿಕ್ ಸರ್ವೋದಯ ಫೌಂಡೇಷನ್ ಆಸಕ್ತ ಅಭ್ಯರ್ಥಿಗಳಿಗೆ ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ನಡೆಸುವ ನಾಗರಿಕ ಸೇವಾ ಪರೀಕ್ಷೆಗಳಿಗೆ ತರಬೇತಿಯನ್ನು ಜುಲೈ 15ರಿಂದ ಆಯೋಜಿಸಿದೆ.

ನಂ.15, ಗಾಲ್ಫ್ ಅವೆನ್ಯೂ ರಸ್ತೆ, ಹಳೆಯ ವಿಮಾನ ನಿಲ್ದಾಣ ರಸ್ತೆ, ಕೋಡಿಹಳ್ಳಿ– ಇಲ್ಲಿ ಆಫ್‌ಲೈನ್ ತರಗತಿಗಳು ನಡೆಯಲಿದ್ದು, ಆನ್‌ಲೈನ್ ತರಬೇತಿಯನ್ನೂ ನೀಡಲಾಗುತ್ತಿದೆ. ಆಸಕ್ತರು ಜುಲೈ 14ರೊಳಗೆ ನೋಂದಣಿ ಮಾಡಿಕೊಳ್ಳಬೇಕು. ಮಾಹಿತಿಗೆ 080 25202299, 76250 00990, 98453 18599, ಇಮೇಲ್– ksfbangalore@gmail.com ಅಥವಾ ksfkarnataka.com ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಗೋಪಾಲಗೌಡಗೆ 'ನುಡಿಸಿರಿ ಸಾಹಿತ್ಯ ಪ್ರಶಸ್ತಿ'



ಬೆಂಗಳೂರು: ಕರ್ನಾಟಕ ವಿಕಾಸ ರಂಗವು ಕವಿ ಜರಗನಹಳ್ಳಿ ಶಿವಶಂಕರ್ ಅವರ ಹೆಸರಿನಲ್ಲಿ ನೀಡುವ 'ನುಡಿಸಿರಿ ಸಾಹಿತ್ಯ ಪ್ರಶಸ್ತಿ'ಗೆ ಸಾಹಿತಿ ಎಸ್.ಗೋಪಾಲಗೌಡ ಕಲ್ವಮಂಜಲಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 5 ಸಾವಿರ ನಗದು ಒಳಗೊಂಡಿದೆ. ಗೋಪಾಲಗೌಡ ಅವರು 31 ಕೃತಿಗಳನ್ನು ರಚಿಸಿದ್ದಾರೆ. ಜುಲೈ ತಿಂಗಳಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ.ಚನ್ನೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಕೆನರಾ ಬ್ಯಾಂಕ್' ಸಂಸ್ಥಾಪನಾ ದಿನ ಆಚರಣೆ ಇಂದು

ಬೆಂಗಳೂರು: ಕೆನರಾ ಬ್ಯಾಂಕ್ 121ನೇ ಸಂಸ್ಥಾಪನಾ ದಿನಾಚರಣೆ ಬುಧವಾರ ಎಲ್ಲ ಶಾಖೆಗಳಲ್ಲಿ ನಡೆಯಲಿದೆ.

'ದೇಶದ ಅತಿದೊಡ್ಡ ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿ ಒಂದಾಗಿದ್ದು, 1906ರ ಜುಲೈ 1ರಂದು ಸ್ಥಾಪನೆಯಾಯಿತು. 12 ಕೋಟಿಗೂ ಹೆಚ್ಚು ಗ್ರಾಹಕರಿರುವ ಬ್ಯಾಂಕ್‌ನ ವ್ಯವಹಾರ ₹ 28.6 ಲಕ್ಷ ಕೋಟಿ ಆಗಿದೆ. ದೇಶದಾದ್ಯಂತ 10,097 ಶಾಖೆಗಳು, 11,306 ಎಟಿಎಂ ಜಾಲ ಹೊಂದಿದೆ' ಎಂದು ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ.

'ಕೃಷಿ, ವಸತಿ ಮತ್ತು ಎಂಎಸ್‌ಎಂಇ ಸಾಲ ಸೇರಿ ಸೌಲಭ್ಯಗಳ ಮೂಲಕ ದೇಶದ ಸುಸ್ಥಿರ ಅಭಿವೃದ್ಧಿಗೆ ಕೊಡುಗೆ ನೀಡಿದೆ. ಡಿಜಿಟಲ್ ಬ್ಯಾಂಕಿಂಗ್ ಮೂಲಕ ಗ್ರಾಹಕ ಸೇವೆ ಸರಳಗೊಳಿಸಿದೆ' ಎಂದು ಹೇಳಿದೆ.

ಸಾಹಿತ್ಯ ಪರೀಕ್ಷೆ; ಆಹ್ವಾನ

ಬೆಂಗಳೂರು: ಕನ್ನಡ ಪ್ರವೇಶ, ಕಾವ, ಜಾಣ ಹಾಗೂ ರತ್ನ ಪರೀಕ್ಷೆ ತೆಗೆದುಕೊಳ್ಳುವ ಆಸಕ್ತರಿಗೆ ಕನ್ನಡ ಸಾಹಿತ್ಯ ಪರಿಷತ್ತು ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಸೆ.15 ಕೊನೇ ದಿನ. ₹ 50 ದಂಡ ಶುಲ್ಕದೊಂದಿಗೆ ಸೆ.30ರವರೆಗೆ ಅವಕಾಶವಿದೆ.

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಪುಸ್ತಕ ಮಾರಾಟ ಮಳಿಗೆಯಲ್ಲಿ ₹25 ಪಾವತಿಸಿ ಜುಲೈ 1ರಿಂದ ಅರ್ಜಿ ಪಡೆಯಬಹುದು. www.kasapa.in ವೆಬ್‌ಸೈಟ್ ಮೂಲಕವೂ ಅರ್ಜಿ ಸಲ್ಲಿಸಲು ಅವಕಾಶವಿದೆ ಎಂದು ಪರಿಷತ್ತಿನ ಆಡಳಿತಾಧಿಕಾರಿ ಕೆ.ಎ. ದಯಾನಂದ ತಿಳಿಸಿದ್ದಾರೆ. ಪರೀಕ್ಷೆಗಳು ಡಿಸೆಂಬರ್ ಕೊನೆಯ ಅಥವಾ 2027ರ ಜನವರಿ ಮೊದಲ ವಾರದಲ್ಲಿ ನಡೆಯಲಿವೆ.

ಸ್ಪರ್ಧಾತ್ಮಕ ಪರೀಕ್ಷಾ ತರಬೇತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದಲ್ಲಿರುವ ಜಿನೇಂದ್ರ ಸ್ಪರ್ಧಾತ್ಮಕ ಪರೀಕ್ಷಾ ಸಂಸ್ಥೆಯಲ್ಲಿ ಐಎಎಸ್, ಕೆಎಎಸ್, ಗ್ರೂಪ್ 'ಸಿ', ಎಫ್‌ಡಿಎ, ಪಿಎಸ್‌ಐ ಮತ್ತು ಎಸ್‌ಡಿಎ ತರಬೇತಿ ಆಯೋಜಿಸಿದ್ದು, ಅರ್ಜಿ ಆಹ್ವಾನಿಸಲಾಗಿದೆ.

6 ತಿಂಗಳ ಒಳಗೆ ರಾಜ್ಯ ಸರ್ಕಾರವು 72,186 ಹುದ್ದೆಗಳ ಭರ್ತಿಗೆ ಮುಂದಾಗಿದೆ. ಆಸಕ್ತ ಅಭ್ಯರ್ಥಿಗಳು ಶೈಕ್ಷಣಿಕ ಮತ್ತು ಆರ್ಥಿಕ ಹಿನ್ನೆಲೆಯ ಮಾಹಿತಿಯ ಜೊತೆಗೆ ಜುಲೈ 12ರ ಒಳಗೆ ಅರ್ಜಿ ಸಲ್ಲಿಸಬೇಕು. ಜುಲೈ 19ರಂದು ಪ್ರವೇಶ ಪರೀಕ್ಷೆ ಇದ್ದು, ಆಯ್ಕೆ ಆದವರಿಗೆ ಆಗಸ್ಟ್ 1ರಿಂದ ತರಬೇತಿ ನೀಡಲಾಗುತ್ತದೆ. www.jiceias.com ಮೂಲಕ ಆನ್‌ಲೈನ್ ನೋಂದಣಿ ಮಾಡಬಹುದು. ಮಾಹಿತಿಗೆ 76761 67901, 99864 39874 ಸಂಪರ್ಕಿಸಬಹುದು ಎಂದು ಸಂಸ್ಥೆಯ ನಿಶ್ಚಲಾನಂದನಾಥ ಸ್ವಾಮೀಜಿ ತಿಳಿಸಿದ್ದಾರೆ.

ಪಿಎಚ್.ಡಿ ಪ್ರವೇಶ ಪರೀಕ್ಷೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಪಿಎಚ್.ಡಿ ಪ್ರವೇಶ ಪರೀಕ್ಷೆಯು ಜುಲೈ 5ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆಯಲಿದೆ.

ಕಲಾ ನಿಕಾಯದ ಅಭ್ಯರ್ಥಿಗಳಿಗೆ ಕೆಂಗೇರಿ ಉಪನಗರದ ಸುರಾನ ಕಾಲೇಜಿನಲ್ಲಿ, ವಿಜ್ಞಾನ, ವಾಣಿಜ್ಯ, ನಿರ್ವಹಣೆ, ಶಿಕ್ಷಣ, ದೈಹಿಕ ಶಿಕ್ಷಣ ಹಾಗೂ ಕಾನೂನು ವಿಭಾಗದ ಅಭ್ಯರ್ಥಿಗಳಿಗೆ ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್‌ನಲ್ಲಿ ಪರೀಕ್ಷೆ ನಡೆಯಲಿದೆ. ಅಭ್ಯರ್ಥಿಗಳು buphd.inhawk.com ವೆಬ್‌ಸೈಟ್‌ನಿಂದ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳಬೇಕು ಎಂದು ವಿಶ್ವವಿದ್ಯಾಲಯದ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಈಗ ಪ್ರೋಟೀನ್‌ಗಳನ್ನು ನೋಡಬಹುದು!


ಎಲೆಕ್ಟ್ರಾನಿಕ್ ಮೈಕ್ರೊಸ್ಕೋಪಿಗೂ ದಕ್ಕದ ವಸ್ತುವನ್ನು ಕಾಣುವ ಹೊಸ ವಿಧಾನ. ಪ್ರೊಟೀನುಗಳು ಕಣ್ಣಿಗೆ ಕಾಣದಷ್ಟು ಚಿಕ್ಕದಾಗಿದ್ದರೇನಂತೆ, ಅವನ್ನೇ ಉಬ್ಬಿಸಿ, ಕಣ್ಣಿಗೆ ಕಾಣುವಂತೆ ಮಾಡಬಹುದಲ್ಲ!

• ಕೊಳ್ಳೇಗಾಲ ಶರ್ಮ

ಪ್ರೊಟೀನ್‌ಗಳು ಎಂದರೆ ನಮಗೆ ಗೊತ್ತು ಎನ್ನುವುದು ಬರಿಯ ಭ್ರಮೆ. ಅವು ಹೇಗಿವೆ – ಎನ್ನುವುದರ ಚಿತ್ರವೂ ನಮ್ಮ ಕಣ್ಣಿಗೆ ಬರುವುದಿಲ್ಲ. ಹನಿರಕ್ತದಲ್ಲಿರುವ ಸಾವಿರಾರು ಪ್ರೊಟೀನುಗಳಲ್ಲಿ ಕೆಲವು ರಕ್ತಕ್ಕೆ ಬಣ್ಣ ಕೊಟ್ಟರೂ, ಆ ಬಣ್ಣ ಕೊಟ್ಟ ಪ್ರೊಟೀನ್‌ಗಳು ಹೇಗಿವೆ ಎಂಬುದನ್ನು ಕಣ್ಣಾರೆ ಕಾಣುವುದು ಸಾಧ್ಯವೇ ಇಲ್ಲ. ಅಂತಹ ಸೂಕ್ಷ್ಮವಾದ ಕಣಗಳನ್ನೂ ಇದೀಗ ನೋಡಲು ಸಾಧ್ಯವಂತೆ. ಅದೂ ಹೇಗೆ? ಅಮೆರಿಕದ ಮಸ್ಯಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಜೀವಿವಿಜ್ಞಾನಿ- ಎಂಜಿನಿಯರ್ ಎಡ್ವರ್ಡ್ ಬಾಯ್ಡೆನ್ ಮತ್ತು ಸಂಗಡಿಗರ ಪ್ರಕಾರ ಕಾಣುವಷ್ಟು ದೊಡ್ಡದಾಗಿಸಿ ನೋಡಬಹುದಂತೆ! ಅಂದರೆ ಕಣ್ಣಿಗೆ ಕಾಣದಷ್ಟು ಸೂಕ್ಷ್ಮ ವಾಮನನಾಗಿರುವ ಕಣಗಳನ್ನು ಕಣ್ಣಿಗೆ ಅಲ್ಲದಿದ್ದರೂ ಸಾಧಾರಣ ಸೂಕ್ಷ್ಮದರ್ಶಕದಡಿಯಲ್ಲಿ ಕಾಣುವಷ್ಟು ದೊಡ್ಡದಾಗಿಸಿ ಕಾಣುವ ತಂತ್ರವನ್ನು ಇವರು ರೂಪಿಸಿದ್ದಾರೆಂದು 'ಬಯೋ-ಆರ್ಕೈವ್' ಪತ್ರಿಕೆ ವರದಿ ಮಾಡಿದೆ.

ಕಣ್ಣಿಗೆ ಕಾಣದಷ್ಟು ಸೂಕ್ಷ್ಮವಾಗಿರುವುದನ್ನು ಹಿರಿದಾಗಿಸಿದರೆ ನೋಡುವುದು ಸಾಧ್ಯ ಎನ್ನುವುದು ಸಾಮಾನ್ಯ ಜ್ಞಾನ. ಇದೇ ತಂತ್ರವನ್ನೇ ದೂರದಲ್ಲಿರುವ ಚುಕ್ಕೆಗಳನ್ನು ನೋಡಲು ಬಳಸುವ ದೂರದರ್ಶಕ ಹಾಗೂ ಅತಿ ಸೂಕ್ಷ್ಮವಾದ ರೋಗಾಣುಗಳನ್ನು ಕಾಣಲು ಬಳಸುವ ಸೂಕ್ಷ್ಮದರ್ಶಕ ಅಥವಾ ಮೈಕ್ರೊಸ್ಕೋಪ್ ಮಾಡುತ್ತವೆ. ನಮ್ಮ ಕಣ್ಣು ಸುಮಾರು ಒಂದು ಮಿಲಿಮೀಟರ್ ಅಥವಾ 0.0167 ಡಿಗ್ರಿಯಷ್ಟು ದೂರ ನಡುವೆ ಇರುವ ಎರಡು ವಸ್ತುಗಳನ್ನು ಸ್ಪಷ್ಟವಾಗಿ ಗುರುತಿಸಬಲ್ಲುದು. ಒಂದು ವೇಳೆ ಆ ವಸ್ತುಗಳು ಈ ದೂರಕ್ಕಿಂತಲೂ ಹತ್ತಿರವಾಗಿದ್ದರೆ ಆಗ ಕಣ್ಣಿಗೆ ಅವೆರಡೂ ಒಂದಾಗಿ ಕಾಣುತ್ತದೆ. ದೂರದರ್ಶಕಗಳೂ ಸೂಕ್ಷ್ಮದರ್ಶಕಗಳೂ ಮಾಡುವುದು ಇಷ್ಟೆ. ತಾವು ತೋರಿಸುತ್ತಿರುವ ವಸ್ತುಗಳನ್ನು ಹಿಗ್ಗಲಿಸಿ, ಅವುಗಳ ನಡುವಣ ದೂರ ಹೆಚ್ಚಿಸಿ, ಅವು ನಮ್ಮ ಕಣ್ಣಿಗೆ ಸ್ಪಷ್ಟವಾಗುವಂತೆ ಮಾಡುತ್ತವೆ. ಇದನ್ನೇ 'ಮ್ಯಾಗ್ನಿಫಿಕೇಶನ್' ಅಥವಾ 'ಹಿಗ್ಗಲಿಕೆ' ಎಂದು ಹೇಳುತ್ತೇವೆ. ವಾಸ್ತವದಲ್ಲಿ, ವಸ್ತುಗಳು ಹಿಗ್ಗುವುದಿಲ್ಲ. ಅವುಗಳ ನಡುವಣ ದೂರವೂ ಬದಲಾಗಿರುವುದಿಲ್ಲ. ಆದರೆ ದೂರದರ್ಶಕ-ಸೂಕ್ಷ್ಮದರ್ಶಕಗಳಲ್ಲಿ ಜೋಡಿಸಿರುವ ಮಸೂರಗಳು, ಬೆಳಕನ್ನು ಹಿಗ್ಗಲಿಸುವುದರಿಂದ ಈ ಪರಿಣಾಮ ಕಾಣಿಸುತ್ತದೆ. ಅಂದರೆ ವಸ್ತುವನ್ನಲ್ಲ, ಅದರ ಬಿಂಬವನ್ನಷ್ಟೆ ಇವು ಹಿಗ್ಗಿಸಿರುತ್ತವೆ. ಈ ರೀತಿಯಲ್ಲಿ ಕಾಣುವುದಕ್ಕೂ ಒಂದು ಮಿತಿ ಇದೆ.

ಬೆಳಕಿನ ತರಂಗದೂರಕ್ಕಿಂತಲೂ ಬಹಳ ಕಿರಿದಾಗಿರುವ ವಸ್ತುಗಳನ್ನು ಕಾಣಲಾಗದು. ಸೂಜಿಯ ಮೊನೆಗಿಂತಲೂ ಕಿರಿದಾದ ವಸ್ತುವಿಗೆ ಸೂಜಿಯಿಂದ ಚುಚ್ಚಿದರೂ ಅದು ಸುತ್ತಿಗೆಯಿಂದ ಬಡಿದಂತೆಯೇ ಆಗುತ್ತದೆಯಷ್ಟೆ. ಹಾಗೆಯೇ ಇದುವೂ. ಬೆಳಕಿನ ತರಂಗಗಳ ದೂರಕ್ಕಿಂತಲೂ ಕಿರಿದಾಗಿರುವ ವಸ್ತುಗಳನ್ನು ಬೆಳಕು ಸ್ಪಷ್ಟವಾಗಿ ಗುರುತಿಸಲಾರದು. ವೈರಸ್‌ಗಳು, ಜೀವಕೋಶದ ಹಲವಾರು ಅಂಗಗಳು ಇಂತಹ ಅತಿ ಸೂಕ್ಷ್ಮ ವಸ್ತುಗಳು. ಇವನ್ನು ಕಾಣಲು ಬೇರೆ ತಂತ್ರಗಳನ್ನು ಬಳಸಬೇಕು. ಇದಕ್ಕಾಗಿ ವಿಜ್ಞಾನಿಗಳು ಎಲೆಕ್ಟ್ರಾನಿಕ್ ದೂರದರ್ಶಕಗಳನ್ನು ಬಳಸುತ್ತಾರೆ. ಎಲೆಕ್ಟ್ರಾನಿಕ್ ದೂರದರ್ಶಕ ಕೆಲಸ ಮಾಡುವುದು ಹೀಗೆ. ಅದು ಬೆಳಕಿಗಿಂತಲೂ ಕಿರಿದಾದ ತರಂಗದೂರದ ಎಲೆಕ್ಟ್ರಾನ್‌ಗಳನ್ನು ಕಾಣಬೇಕಿರುವ ವಸ್ತುಗಳತ್ತ ಬೀಸುತ್ತದೆ. ವಸ್ತುವನ್ನು ತಾಗಿದ ಎಲೆಕ್ಟ್ರಾನ್‌ಗಳು ಅಲ್ಲಿಂದ ಅಡ್ಡಾದಿಡ್ಡಿ ಚದುರುತ್ತವಷ್ಟೆ. ಅವು ಚದುರಿ ಹುಟ್ಟುವ ವಿನ್ಯಾಶವನ್ನು ಬಳಸಿಕೊಂಡು, ಆ ವಸ್ತುವಿನ ಚಿತ್ರವನ್ನು ಎಲೆಕ್ಟ್ರಾನಿಕ್ ಮೈಕ್ರೊಸ್ಕೋಪ್ ಗುರುತಿಸುತ್ತದೆ. ವೈರಸ್‌ಗಳ ಚಿತ್ರಣ ಹೀಗೆ ಸಾಧ್ಯ.





ಪ್ರೊಟೀನ್‌ಗಳು ವೈರಸ್‌ಗಳಿಗಿಂತಲೂ ಬಲು ಸೂಕ್ಷ್ಮ. ಅವನ್ನು ಕಾಣುವುದು ಹೇಗೆ? ಇದುವರೆವಿಗೂ ಪ್ರೊಟೀನಿನ ಚಿತ್ರಗಳನ್ನು ಸ್ಪಷ್ಟವಾಗಿ ಕಾಣಲಾಗಿರಲಿಲ್ಲ. ಏನಿದ್ದರೂ ಅದಕ್ಕೆ ಬಣ್ಣ ಹಚ್ಚಿ ಆ ಬಣ್ಣವನ್ನಷ್ಟೆ ನೋಡುವುದು ಸಾಧ್ಯವಿತ್ತು. ಒಟ್ಟಾರೆ ಪ್ರೊಟೀನಿನ ಇರುವನ್ನು ಕಾಣಬಹುದಿತ್ತಾದರೂ, ಅದರ ಆಕಾರ, ವಿನ್ಯಾಸ ಗೊತ್ತಾಗುತ್ತಿರಲಿಲ್ಲ. ಅದನ್ನು ತಿಳಿಯಲು 'ಎಕ್ಸ್‌ರೇ ಕ್ರಿಸ್ಟಲೋಗ್ರಫಿ' ಎನ್ನುವ ತಂತ್ರವನ್ನು ಬಳಸುತ್ತಿದ್ದರು. ಇದು ಪ್ರೊಟೀನಿನಿಂದ ಚದುರಿದ ಎಕ್ಸ್‌ರೆಯನ್ನು ಗುರುತಿಸಿ, ತನ್ಮೂಲಕ ಪ್ರೊಟೀನಿನ ಮೈ ಮೇಲಿರುವ ಉಬ್ಬು ತಗ್ಗುಗಳನ್ನು ಗುರುತಿಸುತ್ತಿತ್ತು. ಒಂದು ರೀತಿಯಲ್ಲಿ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು, ಕಲ್ಲಿನ ಶಿಲ್ಪದ ಮೇಲೆ ಕೈಯಾಡಿಸಿ ಅದು ಹೇಗಿದೆ ಎಂದು ಊಹಿಸಿದ ರೀತಿ ಎನ್ನಿ.

ಇದೀಗ ಬಾಯ್ಡೆನ್ ತಂಡ ಇಷ್ಟು ಸೂಕ್ಷ್ಮವಾದ ಪ್ರೊಟೀನಿನ ಅಣು, ಅಣುವನ್ನೂ ಸಾಧಾರಣ ಸೂಕ್ಷ್ಮದರ್ಶಕದ ಮೂಲಕವೂ ಕಾಣಿಸುವಂತೆ ಮಾಡಿದೆ. ಇದಕ್ಕಾಗಿ ಇವರು ಹೂಡಿದ ಉಪಾಯ ವಿಶಿಷ್ಟ. ಸೂಕ್ಷ್ಮವಾದ ವಸ್ತುವಿನ ಬಿಂಬವನ್ನು ಹಿರಿದಾಗಿಸುವ ಬದಲು ವಸ್ತುವನ್ನೇ ಹಿರಿದಾಗಿಸಿಬಿಟ್ಟರೆ ಹೇಗೆ ಎನ್ನುವುದು ಇವರ ಉಪಾಯ. ಅಂದರೆ ಕಣ್ಣಿಗೆ ಕಾಣದ ಪ್ರೊಟೀನನ್ನು ಸಾವಿರ, ಹತ್ತು ಸಾವಿರ ಪಟ್ಟು ಹಿಗ್ಗಿಸಿ ಬಿಟ್ಟರೆ ಅದು ಕಾಣಬಹುದಷ್ಟೆ. ಈ ರೀತಿಯಲ್ಲಿ ಪ್ರೊಟೀನಿನ ಪ್ರತಿಯೊಂದು ಅಣುವನ್ನೂ, ಸಮ ಪ್ರಮಾಣದಲ್ಲಿ ದೊಡ್ಡದಾಗಿಸಿದರೆ, ವಾಮನನೇ ದೊಡ್ಡವನಾಗಿ ತ್ರಿವಿಕ್ರಮ ಗಾತ್ರದಲ್ಲಿ ತೋರಿದಂತೆ ಆಗುತ್ತದೆ.

ಇದು ಸಾಧ್ಯವೇ ಎನ್ನುವ ಅನುಮಾನ ವಿಜ್ಞಾನಿಗಳಿಗೂ ಇತ್ತು. ಏಕೆಂದರೆ ಯಾವುದೇ ಅಣುವನ್ನೂ ಹಿಡಿದು ಎಳೆದಾಗ ಅದು ಒಂದು ದಿಕ್ಕಿನಲ್ಲಿ ಹಿಗ್ಗಿ, ಇನ್ನೊಂದು ದಿಕ್ಕಿನಲ್ಲಿ ಕುಗ್ಗಬಹುದಷ್ಟೆ! ಹಾಗಾಗದಂತೆ ಎಲ್ಲ ದಿಕ್ಕಿನಲ್ಲಿಯೂ ಸಮಾನವಾಗಿ ಅದು ಹಿಗ್ಗುವಂತೆ ಮಾಡಬೇಕಿತ್ತು. ಇದನ್ನು ಕೆಲವು ವಿಶಿಷ್ಟ ಪಾಲಿಮರ್‌ಗಳನ್ನು ಬಳಸಿ ಸಾಧಿಸಬಹುದು ಎಂದು ಬಾಯ್ಡೆನ್ ತಂಡ ನಿರೂಪಿಸಿದೆ. ಇದೊಂದು 'ಹೈಡ್ರೋಜೆಲ್'; ಅರ್ಥಾತ್, ನೀರನ್ನು ಹೀರಿಕೊಂಡು ಉಬ್ಬುವ ಅಣು. ಅದನ್ನು ಪ್ರೊಟೀನಿಗೆ ತಳುಕಿಸಿಟ್ಟು, ನೀರು ಊಡಿಸಿದರೆ ಸಾಕು. ಪ್ರೊಟೀನಿನ ಜೊತೆಗೇ ಅದು ಉಬ್ಬುತ್ತದೆ. ಹೀಗೆ ಹದಿನೆಂಟರಿಂದ ಸಾವಿರ ಪಟ್ಟು ಉಬ್ಬುವಂತೆ ಮಾಡಬಹುದಂತೆ. ಅಷ್ಟೇ ಅಲ್ಲ, ಉಬ್ಬಿದ ಪ್ರೊಟೀನ್ ದೀರ್ಘ ಕಾಲ, ದಿನಗಟ್ಟಲೆ ಹಾಗೆಯೇ ಇರುತ್ತದೆ. ಆದ್ದರಿಂದ ಬೇಕಿದ್ದಾಗ ಅದನ್ನು ಅಧ್ಯಯನ ಮಾಡಬಹುದು ಎನ್ನುತ್ತಾರೆ, ಬಾಯ್ಡೆನ್.

ಸಾವಿರ ಪಟ್ಟು ಹಿಗ್ಗಲಿಸುವುದು ಎಂದರೆ, ಒಂದು ಮಿಲಿಮೀಟರ್ ಉದ್ದಗಲ ಎತ್ತರದ ವಸ್ತುವನ್ನು ಒಂದು ಮೀಟರ್ ಉದ್ದಗಲ ಎತ್ತರ ಇರುವಂತೆ ಹಿಗ್ಗಿಸಿದಂತೆ. ಒಂದು ಹನಿನೀರನ್ನು ಮೀಟರು ಉದ್ದಗಲ ಎತ್ತರ ಇರುವ ತೊಟ್ಟಿಯಷ್ಟು ಮಾಡಿದಂತೆ ಎನ್ನಿ. ಹೀಗೆ ಮಾಡಿದರೂ ಪ್ರೊಟೀನ್ ನಮ್ಮ ಕಣ್ಣುಗಳಿಗೆ ಕಾಣಲಿಕ್ಕಿಲ್ಲ. ಆದರೆ ಸೂಕ್ಷ್ಮದರ್ಶಕದ ಅಡಿಯಲ್ಲಿ ಅದು ಗೋಚರಿಸುತ್ತದೆ. ಆಗ ಅದನ್ನು ವಿವಿಧ ತಂತ್ರಗಳಿಂದ ಸುಸ್ಪಷ್ಟವಾಗಿ ಕಾಣುವಂತೆ ಮಾಡಿ ಚಿತ್ರಿಸಬಹುದು. ಪ್ರೊಟೀನಿನ ಅಂಶಗಳಾದ ಪ್ರತಿ ಅಮೈನೊ ಆಮ್ಲವನ್ನೂ ಸುಸ್ಪಷ್ಟವಾಗಿ ಗುರುತಿಸಬಹುದಂತೆ. ❖



ಯುದ್ಧಕ್ಕೂ ಸಿದ್ಧವಾದ ಎ.ಐ.

• ಕ್ಷಮಾ ವಿ. ಭಾನುಪ್ರಕಾಶ್

ಎಲ್ಲೆಲ್ಲೂ ಯುದ್ಧದ ಛಾಯೆ; ಎರಡು ದೇಶಗಳ ನಡುವಿನ ಯುದ್ಧ ನಿಂತರೆ, ಮತ್ತೆರಡು ಬಣಗಳ ನಡುವೆ ಪ್ರಾರಂಭ! ಅಮಾಯಕರ ಪ್ರಾಣಗಳು, ಜೊತೆಗೆ ಭೂಮಿಯ ಭವಿಷ್ಯವನ್ನು ಪಣಕ್ಕಿಟ್ಟು ಹಣ, ರಾಜಕೀಯ, ಧರ್ಮ ಎಂಬ ಅಸಂಗತ ಅಸ್ಮಿತೆಯ ಹುಚ್ಚಿನ ಹಿಂದೆಬಿದ್ದು ಸಮರ ಸಾಗುತ್ತಿದೆ; ತಮ್ಮನ್ನು ರಕ್ಷಿಸಿಕೊಳ್ಳುವ ಸಲುವಾಗಿ, ಶತ್ರುವಿನ ಮೇಲೆ ಪ್ರತಿದಾಳಿ ಮಾಡಲು ಎಲ್ಲಾ ದೇಶಗಳೂ ಸನ್ನದ್ಧವಾಗಿರಲೇಬೇಕಲ್ಲ? ಅಪರಿಮಿತ ಹಣವನ್ನು ರಕ್ಷಣಾಕ್ಷೇತ್ರದ ಸಂಶೋಧನೆಯಲ್ಲಿ ಹೂಡಿಕೆ ಮಾಡಲಾಗುತ್ತಿದೆ; ಜಗತ್ತಿನೆಲ್ಲೆಡೆ ವಿಜ್ಞಾನಿಗಳು, ತಂತ್ರಜ್ಞಾನಿಗಳು ಹೊಸ ಸಾಧ್ಯತೆಗಳಿಗೆ ಎಡೆಮಾಡಿಕೊಡುತ್ತಿದ್ದಾರೆ. ಕೃತಕಬುದ್ಧಿಮತ್ತೆಯ ಬಳಕೆ ರಕ್ಷಣಾ ಕ್ಷೇತ್ರದಲ್ಲಿ ಬಳಸುವ ತಂತ್ರಜ್ಞಾನವನ್ನೂ ಹೊಸ ದಿಕ್ಕಿನೆಡೆಗೆ ಕರೆದೊಯ್ದಿದೆ.

ಆದರೆ, ಕೃತಕ ಬುದ್ಧಿಮತ್ತೆಯಂತಹ ಪ್ರಬಲ ತಂತ್ರಜ್ಞಾನವನ್ನು ಸಂಪೂರ್ಣವಾಗಿ ಸ್ವಾಯತ್ತವಾಗಿಸಿ, ತನ್ನ ನಿರ್ಧಾರ ತಾನೇ ತೆಗೆದುಕೊಳ್ಳುವಂತೆ ಅದಕ್ಕೆ ತರಬೇತಿ ನೀಡುವುದು ಎಷ್ಟು ಸರಿ ಎಂಬುದು ಈ ಕ್ಷಣಕ್ಕೆ ಜಗತ್ತನ್ನೇ ಕಾಡುತ್ತಿರುವ ಪ್ರಶ್ನೆ. ಅದರಲ್ಲೂ ಮನುಷ್ಯನನ್ನು ಕೊಲ್ಲಲು ಸ್ವಾಯತ್ತವಾಗಿ ತಾನೇ ನಿರ್ಧಾರ ಮಾಡುತ್ತದೆ ಎ. ಐ. ಎಂದರೆ, ಅದು ನಮ್ಮ ಗೋರಿಗೆ ನಾವೇ ಹಳ್ಳವನ್ನು ತೋಡಿದಂತೆಯೇ ಅಲ್ಲವೇ? ಇಂತಹದ್ದೇ ಭಯಂಕರ ಸುದ್ದಿಯೊಂದು ಇತ್ತೀಚೆಗಷ್ಟೆ ಹೊರಬಿದ್ದಿದೆ. ವಿಜ್ಞಾನ, ತಂತ್ರಜ್ಞಾನದ ಬಗ್ಗೆ ಲೇಖನಗಳನ್ನು ಪ್ರಕಟಿಸುವ 'ನ್ಯೂಸೈಂಟಿಸ್ಟ್' ನಿಯತಕಾಲಿಕೆಗೆ, ಉಕ್ರೇನಿಯನ್ ರಕ್ಷಣಾಕ್ಷೇತ್ರದ ಡ್ರೋನ್ ತಯಾರಕ ಅಲೆಕ್ಸಾಂಡರ್ ಕೊಖಾನೋವ್ಸ್ಕಿ ನೀಡಿದ ಸಂದರ್ಶನದಲ್ಲಿ, ಈಗಾಗಲೇ ಎರಡು ವರ್ಷದ ಹಿಂದೆಯೇ ಸಂಪೂರ್ಣ ಸ್ವಾಯತ್ತ ಡ್ರೋನ್‌ಗಳನ್ನು ಬಳಸಲಾಗಿದೆ ಮತ್ತು ಅದು ಮೊದಲ ಬಾರಿಗೆ ಮಾನವ-ಸೈನಿಕರನ್ನು ಕೊಂದಿವೆ ಎಂದು ದೃಢಪಡಿಸಿದ್ದಾರೆ.

ಈಗಂತೂ ಮದುವೆಮನೆಗಳಲ್ಲೇ 'ಡ್ರೋನ್'ಗಳು ಅಪರೂಪವಲ್ಲ! ಇನ್ನು ಯುದ್ಧಭೂಮಿಗಳಲ್ಲಿ ಮಿಲಿಟರಿ ಡ್ರೋನ್‌ಗಳು, ಸೈನಿಕರ ಪ್ರಾಣಗಳನ್ನು ಉಳಿಸುವಲ್ಲಿ ಈಗಾಗಲೇ ಹಲವು ವರ್ಷಗಳಿಂದ ಸಹಾಯ ಮಾಡುತ್ತಿವೆ. ಮಾನವನೇ ಸೃಷ್ಟಿಸಿದ ತಂತ್ರಜ್ಞಾನವು ಹೀಗೆ ಮಾನವಕುಲದ ಒಳಿತಿಗೆ ಕಾರ್ಯನಿರ್ವಹಿಸಬೇಕೇ ಹೊರತು, ಈಗಾಗಲೇ ಉರಿಯುತ್ತಿರುವ ವಿನಾಶದ ಜ್ವಾಲೆಗೆ ತುಪ್ಪ ಸುರಿಯುವುದಲ್ಲ. ಯುದ್ಧಭೂಮಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಡ್ರೋನ್‌ಗಳನ್ನು ಮಾನವ-ಪೈಲಟ್‌ಗಳು ನಿಯಂತ್ರಿಸುತ್ತಾರೆ. ಆದರೆ, ಮಾನವನ ಮೇಲ್ವಿಚಾರಣೆಯನ್ನು ಮೀರಿದ ಸಂಪೂರ್ಣ ಸ್ವಾಯತ್ತ ಡ್ರೋನ್‌ಗಳು ಮೊದಲ ಬಾರಿಗೆ ಯುದ್ಧಭೂಮಿಯಲ್ಲಿ ಸೈನಿಕರನ್ನು ಕೊಂದಿವೆ. ಉಕ್ರೇನ್ ನಡೆಸಿದ ಪರೀಕ್ಷೆಯಲ್ಲಿ ಹತ್ತು ಎ. ಐ. - ನಿಯಂತ್ರಿತ 'ಟರ್ಮಿನೇಟರ್' ಡ್ರೋನ್‌ಗಳನ್ನು ಬಳಸಲಾಗಿದ್ದು, ರಷ್ಯಾದ ಕೆಲವು ಸೈನಿಕರು ಕೊಲ್ಲಲ್ಪಟ್ಟರು ಎನ್ನುತ್ತಾರೆ, ಕೊಖಾನೋವ್ಸ್ಕಿ.

ಈ ಪರೀಕ್ಷೆಯಲ್ಲಿ 'ಕ್ವಾಡ್‌ಕಾಪ್ಟರ್' ಡ್ರೋನ್‌ಗಳನ್ನು ಬಳಸಲಾಗಿತ್ತು; ಸೈನ್ಯದ ಮುಂಚೂಣಿಯಲ್ಲಿರುವ ಸೈನಿಕರ ಕಡೆಗೆ ಹಾರಲು ಇದನ್ನು ಪ್ರೋಗ್ರಾಮ್ ಮಾಡಲಾಗಿತ್ತು; ಎ. ಐ. ಬಳಕೆಯಿರುವ 'ಕಾಂಬಾಟ್ ಗೇಮ್ಸ್' ಆಡಿದ್ದರೆ ನಿಮಗಿದು ಮತ್ತಷ್ಟು ಚೆನ್ನಾಗಿ ಅರ್ಥವಾಗಬಹುದು. ಆ ಆಟಗಳಲ್ಲಿರುವಂತೆಯೇ, ಇಲ್ಲೂ ಡ್ರೋನ್ ತಾನೇತಾನಾಗಿ ಶತ್ರುವನ್ನು ಗುರಿಯಾಗಿಸಿ ತನ್ನ ನೋಟವನ್ನು 'ಲಾಕ್' ಮಾಡುತ್ತದೆ. ನಂತರ ಶೇ 100ರಷ್ಟು ಖಚಿತವಾಗಿ ಗುರಿಯನ್ನು ನಾಶಪಡಿಸುತ್ತದೆ.

ಹೀಗೆ ಕಂಪ್ಯೂಟರ್ ಸಿಮ್ಯುಲೇಶನ್ ಮತ್ತು ಆಟಗಳಲ್ಲಿ ಸ್ವಾಯತ್ತ ಡ್ರೋನ್‌ಗಳ ಬಳಕೆಯ ಬಗ್ಗೆ ತಕರಾರಿಲ್ಲ; ಆದರೆ ನಿಜಜೀವನದಲ್ಲಿ? ಸಂಪೂರ್ಣ ಸ್ವಾಯತ್ತ ಡ್ರೋನ್‌ಗಳು ಶತ್ರುವನ್ನೇ ಗುರಿಯಾಗಿಸುತ್ತವೆ ಎಂದು ಏನು ಗ್ಯಾರಂಟಿ? 'ಅದೇ 'ಎ. ಐ.' ಅನ್ನು, ಮತ್ಯಾರನ್ನೋ ಗುರಿಯಾಗಿಸುವಂತೆ ಪ್ರೋಗ್ರ್ಯಾಮ್ ಮಾಡಿದರೆ, ಅದರ ಫಲಿತಾಂಶವೇನಾಗಬಹುದು ಎಂದು ಊಹಿಸಿದ್ದೀರಾ?' ಎನ್ನುತ್ತಾರೆ, ಎ. ಐ. ಬಳಕೆಯ ಬಗ್ಗೆ ಕಠಿಣ ನೀತಿಯನ್ನು ರೂಪಿಸುವಂತೆ ಒತ್ತಾಯಿಸುವ ವಿಜ್ಞಾನಿಗಳು.

ಉಕ್ರೇನಿಯನ್ ಪ್ರತಿದಾಳಿಯ ಭಾಗವಾಗಿ ಬಖ್ಮುತ್ ಮತ್ತು ಚಾಸಿವ್ ಯಾರ್ ನಗರಗಳ ಬಳಿ ಹೆಸರಿಸದ ಮಿಲಿಟರಿ ಘಟಕದಿಂದ ಈ ಸ್ವಾಯತ್ತ ಡ್ರೋನ್ ದಾಳಿ ನಡೆಸಲಾಗಿದ್ದು, ಈ 'ಟರ್ಮಿನೇಟರ್' ಡ್ರೋನ್‌ಗಳು, ಅವುಗಳನ್ನು ಚಾಲೂ ಮಾಡಿದ ನಂತರ, 10 ನಿಮಿಷಗಳಲ್ಲಿ 3–5 ಕಿಲೋಮೀಟರ್‌ಗಳವರೆಗೆ ಕ್ರಮಿಸಿ, ಗುರಿಗಳನ್ನು ಹುಡುಕಿ, ನಾಶಪಡಿಸಿದವಂತೆ; ಈ ಸ್ವಾಯತ್ತ ಡ್ರೋನ್ ಒಮ್ಮೆ ಬಿಟ್ಟಬಾಣದಂತೆ ಹೊರಟರೆ, ಗುರಿ ತಪ್ಪುವ ಮಾತೇ ಇಲ್ಲ; ನಡುವೆ ಅದರ ಗುರಿ ಬದಲಾಯಿಸಬೇಕೆಂದರೂ ಸಾಧ್ಯವಿಲ್ಲ; ಏಕೆಂದರೆ, ಹೀಗೆ ಹೊರಟ ಎ. ಐ. ಚಾಲಿತ ಡ್ರೋನಿಗೆ ಅದನ್ನು 'ಛೂ' ಬಿಟ್ಟವರ ಜೊತೆಗೆ ಯಾವುದೇ ಸಂಪರ್ಕ ಇರುವುದಿಲ್ಲ; ಅದರ ಜೊತೆಗೆ ಸಂಪರ್ಕವೇ ಇಲ್ಲದ ಮೇಲೆ, ಆ ಸ್ವಯಂಚಾಲಿತ, ಸ್ವಾಯತ್ತ ಡ್ರೋನನ್ನು ನಿಯಂತ್ರಿಸುವ ಮಾತೆಲ್ಲಿದೆ? ಮಾನವನ ಹಸ್ತಕ್ಷೇಪವಿಲ್ಲದೇ ಕೊಲ್ಲಬಲ್ಲ ಸ್ವಾಯತ್ತ ಶಸ್ತ್ರಾಸ್ತ್ರಗಳ ಮೇಲೆ ಯಾವುದೇ ಅಧಿಕೃತ ಅಂತರರಾಷ್ಟ್ರೀಯ ನಿಷೇಧವಿಲ್ಲದಿದ್ದರೂ, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ 'ನಮ್ಮ ಜಗತ್ತಿನಲ್ಲಿ ಮಾರಕ ಸ್ವಾಯತ್ತ ಶಸ್ತ್ರಾಸ್ತ್ರ ವ್ಯವಸ್ಥೆಗಳಿಗೆ ಸ್ಥಳವಿಲ್ಲ' ಎಂದು ಹೇಳುತ್ತಾ, ಪ್ರಬಲ ತಂತ್ರಜ್ಞಾನದ ಅವಿವೇಕಿ ಬಳಕೆಯ ವಿರುದ್ಧ ಎಲ್ಲರೂ ಕೈಜೋಡಿಸುವಂತೆ ಒತ್ತಾಯಿಸಿದ್ದಾರೆ.

ಜೀವನ-ಮರಣದ ಆಯ್ಕೆಗಳನ್ನು ಯಂತ್ರಗಳ ಕೈಗೆ ನೀಡುವುದು ಅತ್ಯಂತ ಅಪಾಯಕಾರಿ, ಹುಚ್ಚು ನಿರ್ಧಾರವಲ್ಲವೇ? ಅಲ್ಗಾರಿದಮ್‌ಗಳು ದೋಷಪೂರಿತವಾಗಿರಬಹುದು; ಪಕ್ಷಪಾತದಿಂದ ಕೂಡಿರಬಹುದು ಕೂಡ. ಅಸ್ತವ್ಯಸ್ತವಾಗಿರುವ, ಅನಿರೀಕ್ಷಿತ ಪರಿಸರದಲ್ಲಿ ಯಂತ್ರಗಳು ಹೇಗೆ ವರ್ತಿಸುತ್ತವೆ ಎಂಬುದನ್ನು ಅದೆಷ್ಟು ನಿರ್ದಿಷ್ಟವಾಗಿ ಲೆಕ್ಕಹಾಕಲು ಸಾಧ್ಯ ಹೇಳಿ? ಜೊತೆಗೆ ಸ್ವಾಯತ್ತ ಕೃತಕ ಬುದ್ಧಿಮತ್ತೆಯನ್ನು ಬಳಸುವಲ್ಲಿ ಹೊಣೆಗಾರಿಕೆಯ ಕೊರತೆ ಎದ್ದು ಕಾಣುತ್ತದೆ; ಸ್ವಾಯತ್ತ ಡ್ರೋನ್ ತಪ್ಪು ಮಾಡಿದರೆ, ಅಂತರರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸಿದರೆ ಅಥವಾ ನಾಗರಿಕರನ್ನು ಕೊಂದರೆ, ಯಾರ ಮೇಲೆ ನೈತಿಕ ದೂಷಣೆಯನ್ನು ಹೊರಿಸುತ್ತೀರಿ? ಯಾರಿಗೆ ಶಿಕ್ಷೆ ನೀಡುತ್ತೀರಿ? ಹ್ಯಾಕಿಂಗ್/ಸೈಬರ್ ದಾಳಿಗೆ ಸಿಲುಕಿ, ಸಾರ್ವಜನಿಕರ ವಿರುದ್ಧವೇ ಇದು ಆಯುಧವಾಗಿ ಬಳಕೆಯಾಗಬಹುದಲ್ಲವೇ? ಹಾಗಾಗಿ, ಕೃತಕ ಬುದ್ಧಿಮತ್ತೆಯ ಬಳಕೆ, ತಂತ್ರಜ್ಞಾನದ ಸುಧಾರಣೆಯ ಬಗ್ಗೆ ಅಂತರರಾಷ್ಟ್ರೀಯ ನೀತಿನಿಯಮಗಳ 'ಫೂಲ್ ಪ್ರೂಫ್' ರಚನೆ ಮತ್ತು ಕಟ್ಟುನಿಟ್ಟಾದ ಅನುಷ್ಠಾನಕ್ಕೆ ವಿಶ್ವದ ಎಲ್ಲ ನಾಗರಿಕರು ಒತ್ತಾಯಿಸಬೇಕಿದೆ. ಇಲ್ಲದಿದ್ದರೆ, ಎ. ಐ. ಬಂಧನದಿಂದ ಬಿಡಿಸಲು ಎ. ಐ.ನ ಮೊರೆಯೇ ಹೋಗಬೇಕಾದೀತು! ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಎಸ್ಎಸ್ಎಲ್‌ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

CHEMISTRY

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಆಮ್ಲಗಳು, ಪ್ರತ್ಯಾಮ್ಲಗಳು ಮತ್ತು ಲವಣಗಳು

22) ಸಾಮಾನ್ಯವಾಗಿ ಜನರು ಯಾವಾಗ ಆಮ್ಲಶಾಮಕ (antacid) ಎಂದು ಕರೆಯಲ್ಪಡುವ ಪ್ರತ್ಯಾಮ್ಲಗಳನ್ನು ಬಳಸುತ್ತಾರೆ?

ಉತ್ತರ:– ಅಜೀರ್ಣತೆಯ ಸಂದರ್ಭದಲ್ಲಿ ಜಠರ ಅಗತ್ಯಕ್ಕಿಂತ ಅಧಿಕ ಆಮ್ಲ ಉತ್ಪಾದಿಸುತ್ತದೆ ಮತ್ತು ಇದು ನೋವು ಮತ್ತು ಉರಿಗೆ ಕಾರಣವಾಗುತ್ತದೆ. ಈ ನೋವಿನಿಂದ ಮುಕ್ತಿ ಪಡೆಯಲು ಜನರು ಆಮ್ಲಶಾಮಕ (antacid) ಎಂದು ಕರೆಯಲ್ಪಡುವ ಪ್ರತ್ಯಾಮ್ಲಗಳನ್ನು ಬಳಸುತ್ತಾರೆ.

23) ಯಾವುದನ್ನು ಪ್ರಬಲ ಆಮ್ಲ ಮತ್ತು ದುರ್ಬಲ ಆಮ್ಲಗಳೆಂದು ಕರೆಯುತ್ತಾರೆ?

ಉತ್ತರ:– ಹೆಚ್ಚು H+ ಅಯಾನುಗಳನ್ನು ಉತ್ಪತ್ತಿ ಮಾಡುವ ಆಮ್ಲಗಳನ್ನು ಪ್ರಬಲ ಆಮ್ಲಗಳೆಂದೂ ಮತ್ತು ಕಡಿಮೆ H+ ಅಯಾನುಗಳನ್ನು ಉತ್ಪತ್ತಿ ಮಾಡುವ ಆಮ್ಲಗಳನ್ನು ದುರ್ಬಲ ಆಮ್ಲಗಳೆಂದೂ ಕರೆಯುತ್ತಾರೆ.

24) ಮಾನವನ ದೇಹದಲ್ಲಿ ಅತಿ ಗಟ್ಟಿಯಾದ ವಸ್ತು ಯಾವುದು?

ಉತ್ತರ:– ಹಲ್ಲಿನ ಎನಾಮಲ್

26) ಹಲ್ಲಿನ ಸವೆತವನ್ನು ಹೇಗೆ ತಡೆಯಬಹುದು?

ಉತ್ತರ:– ಆಹಾರ ಸೇವನೆಯ ನಂತರ ಬಾಯಿಯನ್ನು ಸ್ವಚ್ಛಗೊಳಿಸುವುದು. ಹಲ್ಲುಗಳನ್ನು ಸ್ವಚ್ಛಗೊಳಿಸಲು ಸಾಮಾನ್ಯವಾಗಿ ಪ್ರತ್ಯಾಮ್ಲೀಯವಾಗಿರುವ ಟೂತ್‌ಪೇಸ್ಟ್‌ಗಳನ್ನು ಬಳಸುವುದರಿಂದ ಹೆಚ್ಚುವರಿ ಆಮ್ಲವನ್ನು ತಟಸ್ಥಗೊಳಿಸಬಹುದು ಮತ್ತು ಹಲ್ಲಿನ ಸವೆತ ತಡೆಗಟ್ಟಬಹುದು.

27) ಹಲ್ಲಿನ ಸವೆತಕ್ಕೆ ಕಾರಣವಾಗುವ ಬಗ್ಗೆ ಬರೆಯಿರಿ

ಉತ್ತರ:– ಬಾಯಿಯ pH 5.5ಕ್ಕಿಂತ ಕಡಿಮೆಯಾದಾಗ ಹಲ್ಲಿನ ಸವೆತ ಪ್ರಾರಂಭವಾಗುತ್ತದೆ. ಕ್ಯಾಲ್ಸಿಯಂ ಹೈಡ್ರಾಕ್ಸಿಅಪಟೈಟ್‌ನಿಂದ (ಕ್ಯಾಲ್ಸಿಯಂ ಫಾಸ್ಫೇಟ್‌ನ ಒಂದು ಸ್ಫಟಿಕ ರೂಪ) ಮಾಡಲ್ಪಟ್ಟಿರುವ ಹಲ್ಲಿನ ಎನಾಮಲ್ ದೇಹದ ಅತ್ಯಂತ ಕಠಿಣ ವಸ್ತುವಾಗಿದೆ. ಇದು ನೀರಿನಲ್ಲಿ ವಿಲೀನವಾಗುವುದಿಲ್ಲ, ಆದರೆ ಬಾಯಿಯಲ್ಲಿನ pH 5.5 ಕ್ಕಿಂತ ಕಡಿಮೆಯಾದಾಗ ಇದು ಸವೆತಕ್ಕೊಳಗಾಗುತ್ತದೆ. ಆಹಾರ ಸೇವನೆಯ ನಂತರ ಬಾಯಿಯಲ್ಲಿ ಉಳಿದ ಸಕ್ಕರೆ ಮತ್ತು ಆಹಾರದ ಕಣಗಳ ವಿಘಟನೆಯಿಂದ ಬಾಯಿಯಲ್ಲಿರುವ ಬ್ಯಾಕ್ಟೀರಿಯಾಗಳು ಆಮ್ಲಗಳನ್ನು ಉತ್ಪತ್ತಿ ಮಾಡುತ್ತವೆ. ಇದನ್ನು ತಡೆಗಟ್ಟುವ ಅತ್ಯುತ್ತಮ ವಿಧಾನವೆಂದರೆ ಆಹಾರ ಸೇವನೆಯ ನಂತರ ಬಾಯಿಯನ್ನು ಸ್ವಚ್ಛಗೊಳಿಸುವುದು. ಹಲ್ಲುಗಳನ್ನು ಸ್ವಚ್ಛಗೊಳಿಸಲು ಸಾಮಾನ್ಯವಾಗಿ ಪ್ರತ್ಯಾಮ್ಲೀಯವಾಗಿರುವ ಟೂತ್‌ಪೇಸ್ಟ್‌ಗಳನ್ನು ಬಳಸುವುದರಿಂದ ಹೆಚ್ಚುವರಿ ಆಮ್ಲವನ್ನು ತಟಸ್ಥಗೊಳಿಸಬಹುದು ಮತ್ತು ಹಲ್ಲಿನ ಸವೆತ ತಡೆಗಟ್ಟಬಹುದು.

28) ನಿಸರ್ಗವು ತಟಸ್ಥೀಕರಣದ ಆಯ್ಕೆ ನೀಡುತ್ತದೆ. ಈ ಹೇಳಿಕೆಗೆ ಉದಾಹರಣೆ ನೀಡಿ

ಉತ್ತರ:– ನಿಜ! ನಿಸರ್ಗವು ತಟಸ್ಥೀಕರಣ ಆಯ್ಕೆ ನೀಡುತ್ತದೆ, ಉದಾ:– ತುರಿಕೆಗಿಡ ಮೂಲಿಕೆಯಂತಹ ಕಾಡುಸಸ್ಯವಾಗಿದೆ. ಇದರ ಎಲೆಗಳು ಚುಚ್ಚುವ ಕೂದಲುಗಳನ್ನು ಹೊಂದಿದ್ದು ಆಕಸ್ಮಿಕವಾಗಿ ಮುಟ್ಟಿದಾಗ ನೋವುಳ್ಳ ಕಡಿತಕ್ಕೆ ಕಾರಣವಾಗುತ್ತವೆ. ಇದಕ್ಕೆ ಕಾರಣ ಅವುಗಳಿಂದ ಸ್ರವಿಸಲ್ಪಡುವ ಮೆಥನೋಯಿಕ್ ಆಮ್ಲ. ಇದಕ್ಕೆ ಸಾಂಪ್ರದಾಯಿಕ ಪರಿಹಾರವೆಂದರೆ ಪುಲ್ಲಂಪುರುಚಿ(dock plant) ಸಸ್ಯದ ಎಲೆಗಳಿಂದ ಆ ಭಾಗವನ್ನು ಉಜ್ಜುವುದು, ಇದು ಸಾಮಾನ್ಯವಾಗಿ ತುರಿಕೆ ಗಿಡದ ಬದಿಯಲ್ಲೇ ಬೆಳೆಯುವ ಕಾಡು ಸಸ್ಯವಾಗಿದೆ. ಹೀಗಾಗಿಯೇ ನಿಸರ್ಗವು ತಟಸ್ಥೀಕರಣ ಆಯ್ಕೆ ನೀಡುತ್ತದೆ ಎನ್ನಬಹುದು.

29) ಯಾವುದಕ್ಕೆ ಸೋಡಿಯಂ ಕ್ಲೋರೈಡ್ ಎಂದು ಕರೆಯುತ್ತಾರೆ?

ಉತ್ತರ:– ಹೈಡ್ರೋಕ್ಲೋರಿಕ್ ಆಮ್ಲ ಮತ್ತು ಸೋಡಿಯಂ ಹೈಡ್ರಾಕ್ಸೈಡ್ ದ್ರಾವಣಗಳ ಸಂಯೋಗದಿಂದ ಉತ್ಪತ್ತಿಯಾಗುವ ಲವಣವನ್ನು ಸೋಡಿಯಂ ಕ್ಲೋರೈಡ್ ಎಂದು ಕರೆಯುತ್ತಾರೆ

30) ಕಲ್ಲುಪ್ಪಿನ ಬಗ್ಗೆ ಬರೆಯಿರಿ

ಉತ್ತರ:– ಘನ ಉಪ್ಪಿನ ಸಂಗ್ರಹಗಳೂ ವಿಶ್ವದ ಅನೇಕ ಭಾಗಗಳಲ್ಲಿ ಕಂಡುಬರುತ್ತವೆ. ಈ ದೊಡ್ಡ ಹರಳುಗಳು ತಮ್ಮಲ್ಲಿರುವ ಕಶ್ಮಲಗಳಿಂದ ಸಾಮಾನ್ಯವಾಗಿ ಕಂದು ಬಣ್ಣ ಹೊಂದಿರುತ್ತವೆ. ಇದನ್ನು ಕಲ್ಲುಪ್ಪು(rock salt) ಎನ್ನುತ್ತಾರೆ.

ಆದಿಜೀವಕಲ್ಪದ (bygone ages) ಸಮುದ್ರಗಳು ಒಣಗಿಹೋದಾಗ ಕಲ್ಲುಪ್ಪಿನ ಪದರಗಳು ಉಂಟಾಗಿವೆ. ಕಲ್ಲಿದ್ದಲಿನಂತೆ ಕಲ್ಲುಪ್ಪಿನ ಗಣಿಗಾರಿಕೆ ನಡೆಸಲಾಗುತ್ತದೆ.

31) ಅಡುಗೆ ಸೋಡಾ, ವಾಷಿಂಗ್ ಸೋಡಾ, ಚೆಲುವೆ ಪುಡಿಯಂತಹ ಅನೇಕ ದಿನಬಳಕೆ ವಸ್ತುಗಳಿಗೆ ಯಾವುದು ಪ್ರಮುಖ ಕಚ್ಚಾವಸ್ತುವಾಗಿದೆ?

ಉತ್ತರ:– ಸಾಮಾನ್ಯ ಉಪ್ಪು / ಸೋಡಿಯಂ ಹೈಡ್ರಾಕ್ಸೈಡ್

32) ಯಾವುದಕ್ಕೆ ಬ್ರೈನ್ ದ್ರಾವಣ ಎನ್ನುತ್ತಾರೆ?

ಉತ್ತರ:– ಸೋಡಿಯಂ ಕ್ಲೋರೈಡ್‌ನ ಜಲೀಯ ದ್ರಾವಣವನ್ನು ಬ್ರೈನ್ ದ್ರಾವಣ ಎನ್ನುತ್ತಾರೆ.

33) ಯಾವುದರಿಂದ ಚಲುವೆ ಪುಡಿ ತಯಾರಿಸಲಾಗುತ್ತದೆ?

ಉತ್ತರ:– ಶುಷ್ಕ ಅರಳಿದ ಸುಣ್ಣ[$Ca(OH)_2$] ದೊಂದಿಗಿನ ಕ್ಲೋರಿನ್‌ನ ವರ್ತನೆಯಿಂದ ಚಲುವೆ ಪುಡಿ ತಯಾರಿಸಲಾಗುತ್ತದೆ.

ನಿಮಗಿದು ಗೊತ್ತಿರಲಿ


ಪ್ರಬಲ ಆಮ್ಲ ಮತ್ತು ಪ್ರಬಲ ಪ್ರತ್ಯಾಮ್ಲಗಳ ಲವಣಗಳು ತಟಸ್ಥವಾಗಿದ್ದು ಅವುಗಳ **pH** ಮೌಲ್ಯ 7. ಪ್ರಬಲ ಆಮ್ಲ ಮತ್ತು ದುರ್ಬಲ ಪ್ರತ್ಯಾಮ್ಲದ ಲವಣಗಳು 7ಕ್ಕಿಂತ ಕಡಿಮೆ **pH** ಮೌಲ್ಯ ಹೊಂದಿದ್ದು ಆಮ್ಲೀಯವಾಗಿವೆ ಮತ್ತು ಪ್ರಬಲ ಪ್ರತ್ಯಾಮ್ಲ ಮತ್ತು ದುರ್ಬಲ ಆಮ್ಲದ ಲವಣಗಳ **pH** ಮೌಲ್ಯ 7ಕ್ಕಿಂತ ಹೆಚ್ಚಿದ್ದು ಪ್ರತ್ಯಾಮ್ಲೀಯ ಸ್ವಭಾವ ಹೊಂದಿವೆ.

ELECTROCHEMISTRY

31. Write a note on Daniell Cell.

Ans:- Daniell cell:- (.....Contd)

The electrochemical cell for the above redox reaction may be shown as follows:



Cu—AgNO$_3$ indirect redox reaction in an electrochemical cell.

The redox reaction may be represent as:

$$Cu(s) \rightarrow Cu^{2+} + (aq) + 2e^-$$

(oxidation half reaction)

$$2Ag^+(aq) + 2NO_3^-(aq) + 2e^- \rightarrow 2Ag(S) + 2NO_3^-(aq)$$

(Reduction half reaction)

$$Cu(s) + 2Ag^+(aq) \rightarrow Cu^{2+}(aq) + 2Ag(s)$$

The electrochemical cell may also be represented with the help of cell notation as follows:

$$Cu(s) \mid Cu^{2+}(aq) \mid\mid Ag^+(aq) \mid Ag(s)$$

32. Distinguish between emf and potential difference.

Ans:-

Emf	*Potential difference*
It is the difference in the electrode potentials when no current flows through the cell.	It is the difference in the electrode potentials when current is flowing through the cell.
It is the maximum voltage which can be obtained from the cell.	It is less than the maximum voltage which can be obtained from the cell.
It is responsible for the flow of steady current.	It is not responsible for the flow of steady current.
It can be measured by a potentiometer.	It can be measured by a voltmeter.

33. Write a note on the function of the Salt Bridge

Ans:- A salt bridge is an inverted U-shaped glass tube which contains in it a suitable salt in the form of a thick paste made in agar-agar.

A salt bridge has the following functions to perform:


(i) A salt bridge completes the inner cell circuit.

(ii) A salt bridge prevents the transference of electrolyte from one half cell to the other.

(iii) A salt bridge maintains the electrical neutrality of the electrolytes in the two half cells.

34. Write a note on Standard Hydrogen Electrode.

Ans:- In a standard hydrogen electrode, a platinum wire coated with finely divided platinum called platinum black is sealed in a glass tube. It carries a platinum foil plate at one end as in the fig. The wire is dipped in an aqueous solution containing 1 molar H^+ ion connection (normally 1 M HCl is used). Pure hydrogen gas under a pressure of 1 bar is constantly bubbled through the solution. The temperature of the solution is maintained at 298 K.



Standard hydrogen electrode

It can act both as cathode and anode. When it is to act as anode (oxidation is to take place), molecules of hydrogen gas change to H^+ ions as follows:

$$H_2(g) \rightarrow 2H^+(aq) + 2e^-$$

The ions formed go into the solution. In case, it is to act as cathode (reduction is to take place) then H^+ ions from the solution accept electrons and are reduced to $H_2(g)$ as follows:

$$2H^+(aq) + 2e^- \rightarrow H_2(g)$$

It is also known as reversible electrode as it can act both as cathode and anode. The coating of platinum black over platinum foil absorbs hydrogen and also helps to establish an equilibrium between the molecules of H_2 and the ions formed in solution. A standard hydrogen electrode is represented as Pt, $H_2(g)H^+$ (1M).

As pointed earlier, its standard oxidation as well reduction potentials are taken as zero.

Limitations of SHE

The standard hydrogen electrode or normal hydrogen electrode suffers from following limitations:

(i) It is not so easy to maintain a pressure of 1 atmosphere for hydrogen gas throughout.

(ii) It is quite difficult to the kept the [H^+] as 1 M.

(iii) Platinum which is a part of the electrode, gets easily poisoned even by small traces of impurities present.

Calomel and silver electrodes can also be used as reference electrodes.

Measurement of Standard Electrode Potential (E^o).

A standard hydrogen electrode acts as the reference electrode and it helps in measuring the standard electrode potential of an electrode.

(Contd.....)

'ವಿಬಿ ಜಿ ರಾಮ್ ಜಿ' ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನರೇಗಾ ಯೋಜನೆಯ ಬದಲಿಗೆ ಕೇಂದ್ರ ಸರ್ಕಾರ ಜಾರಿಗೆ ತಂದಿರುವ 'ವಿಬಿ-ಜಿ ರಾಮ್ ಜಿ' ಯೋಜನೆ ಬುಧವಾರದಿಂದ (ಜುಲೈ 1) ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ ಜಾರಿಯಾಗಲಿದ್ದು, ಗ್ರಾಮೀಣ ಭಾಗದ ಕಾರ್ಮಿಕರಿಗೆ ಉದ್ಯೋಗ ನೀಡಲು, ಕೆಲಸದ ಬೇಡಿಕೆಯನ್ನು 'ವಿಬಿ ಜಿ ರಾಮ್ ಜಿ' ತಂತ್ರಾಂಶಕ್ಕೆ ವರ್ಗಾವಣೆ ಮಾಡಿಕೊಳ್ಳಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ನಿರ್ದೇಶನ ನೀಡಿದೆ.

ಕೆಲಸ ಮಾಡಲು ಇಚ್ಛಿಸಿ ಉದ್ಯೋಗ ಗ್ಯಾರಂಟಿ ಕಾರ್ಡ್‌ಗೆ ಬೇಡಿಕೆ ಸಲ್ಲಿಸಿದರೆ 'ವಿಬಿ ಜಿ ರಾಮ್ ಜಿ' ಯೋಜನೆಯಡಿ ವಿನ್ಯಾಸಗೊಳಿಸಿರುವ ಹೊಸ ಮಾದರಿಯ ಕಾರ್ಡ್ ವಿತರಿಸಬೇಕು. ಹೊಸ ತಂತ್ರಾಂಶಕ್ಕೆ (https://vbgramg.dord.gov.in) ನರೇಗಾ ತಂತ್ರಾಂಶದ ಲಾಗಿನ್ ವಿವರಗಳನ್ನೇ ಬಳಸಬಹುದು. ಬೆಳಿಗ್ಗೆ 5 ಗಂಟೆಯಿಂದ 'ವಿಬಿ-ಜಿ ರಾಮ್ ಜಿ'ಯಲ್ಲಿ ಹಾಜರಾತಿ ಪ್ರಕ್ರಿಯೆ ಆರಂಭವಾಗಲಿದೆ ಎಂದು ಇಲಾಖೆ ಸೂಚನೆ ನೀಡಿದೆ.

ಕಾರ್ಮಿಕರ ಹಾಜರಾತಿ ದಾಖಲಿಸುವ ಪ್ರಕ್ರಿಯೆ ಆರಂಭಿಸುವ ಮೊದಲು ಹಾಜರಿ ಪಟ್ಟಿ ಡೌನ್‌ಲೋಡ್ ಮಾಡಿಕೊಂಡು ಯಾವುದೇ ತೊಂದರೆಗಳಿದ್ದರೆ ಸುಲಭವಾಗಿ ಬಳಸಲು ಎಲ್ಲ ಬಳಕೆದಾರರು ಗೂಗಲ್ ಪ್ಲೇ ಸ್ಟೋರ್‌ನಿಂದ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು. ಪ್ರಸ್ತುತ ಪ್ರಗತಿಯಲ್ಲಿರುವ ಮತ್ತು ಅನುಮೋದನೆ ಪಡೆದ ಕಾಮಗಾರಿಗಳನ್ನು (ವಿಬಿ-ಜಿ ರಾಮ್ ಜಿ ನಿಯಮಗಳ ಪ್ರಕಾರ ಅನುಮತಿ ನೀಡಿರುವ ಕಾಮಗಾರಿಗಳ ಪಟ್ಟಿ) ಹೊಸ ತಂತ್ರಾಂಶಕ್ಕೆ ವರ್ಗಾಯಿಸಲಾಗುತ್ತದೆ. ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಮಟ್ಟದ ಅನುಷ್ಠಾನ ಅಧಿಕಾರಿಗಳು ಯೋಜನೆ ಬದಲಾವಣೆ ಅವಧಿಯಲ್ಲಿ ಯಾವುದೇ ಸಮಸ್ಯೆ ಆಗದಂತೆ ಗ್ರಾಮೀಣ ಕಾರ್ಮಿಕರಿಗೆ ಉದ್ಯೋಗ ಒದಗಿಸಬೇಕು. ಈ ಬಗ್ಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನಿಗಾ ವಹಿಸಬೇಕು ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

ರೇಣುಕಸ್ವಾಮಿ ಕೊಲೆ: ಸಾಕ್ಷಿಗೆ ಒತ್ತಡ

ರಕ್ಷಣೆ ಒದಗಿಸಲು ನ್ಯಾಯಾಧೀಶೆ ಸುಜಾತಾ ಸಾಂಬ್ರಾಣಿ ಆದೇಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಅಪರಿಚಿತರಿಂದ ಒತ್ತಡದ ಕರೆ: ಸಾಕ್ಷಿದಾರ ಸಂದೀಪ್ ಆತಂಕ
- ಗಂಭೀರವಾಗಿ ಪರಿಗಣಿಸಿದ ಸೆಷನ್ಸ್ ನ್ಯಾಯಾಲಯ
- ವಿಚಾರಣೆ ಬುಧವಾರಕ್ಕೆ ಮುಂದೂಡಿಕೆ


ರೇಣುಕಸ್ವಾಮಿ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ಸಾಕ್ಷಿಯಾಗಿರುವ ತುಮಕೂರಿನ ರಂಗಾಪುರದ ನಿವಾಸಿ ಸಂದೀಪ್, 'ಈ ಪ್ರಕರಣದಲ್ಲಿ ನನಗೆ ಅಪರಿಚಿತರಿಂದ ಒತ್ತಡದ ಕರೆ ಬಂದಿದ್ದು, ನ್ಯಾಯಾಲಯದಲ್ಲಿ ಹೇಳಿಕೆಯನ್ನು ತಿರುಚಿ ನೀಡಬೇಕು ಎಂದು ತಾಕೀತು ಮಾಡಲಾಗಿದೆ' ಎಂದು ತೆರೆದ ನ್ಯಾಯಾಲಯದಲ್ಲಿ ಅಳಲು ತೋಡಿಕೊಂಡಿದ್ದಾರೆ.

ಮುಖ್ಯ ಸಾಕ್ಷಿಯಾಗಿರುವ ದುರ್ಗಾ ಬಾರ್ ಅಂಡ್ ರೆಸ್ಟೋರೆಂಟ್‌ನ ಕ್ಯಾಷಿಯರ್ ಸಂದೀಪ್ ಅವರನ್ನು ಮಂಗಳವಾರ ವಿಚಾರಣೆಗೆ ಒಳಪಡಿಸಲು ನಗರದ 58ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್ ನ್ಯಾಯಾಧೀಶೆ ಸುಜಾತಾ ಎಂ.ಸಾಂಬ್ರಾಣಿ ಅವರು ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ಅವರಿಗೆ ಅನುಮತಿ ನೀಡಿದರು.

ಕಟಕಟೆಯಲ್ಲಿ ಸಾಕ್ಷಿ ನುಡಿದ ಹೇಳಿಕೆಯನ್ನು ದಾಖಲಿಸಿಕೊಂಡು, ಹೇಳಿಕೆ ತಿರುಚುವಂತೆ ಒತ್ತಡ ಹೇರಿದ್ದಾರೆ ಎನ್ನಲಾದ ಅಪರಿಚಿತ ವ್ಯಕ್ತಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ, 'ಈ ಕುರಿತಂತೆ ಪ್ರತ್ಯೇಕ ಪ್ರಮಾಣಪತ್ರ ಸಲ್ಲಿಸಿ' ಎಂದು ಸಂದೀಪ್ ಅವರಿಗೆ ನಿರ್ದೇಶಿಸಿದರು.

'ಕೆಲವು ವ್ಯಕ್ತಿಗಳು ಆರ್ಕರ್ ಎಂಬ ಪರಿಚಿತ ವ್ಯಕ್ತಿಯ ಮೂಲಕ ದೂರವಾಣಿಯಲ್ಲಿ ಸಂದೀಪ್ ಅವರನ್ನು ಮಾತನಾಡಿಸಿದ್ದಾರೆ ಮತ್ತು ಈ ಪ್ರಕರಣದಲ್ಲಿ ಸಾಕ್ಷಿ ಹೇಳಿಕೆ ನೀಡುವುದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕೇಳಿದ್ದಾರೆ. ಅವರು ಹೇಳಿದಂತೆ ಹೇಳಿಕೆ ನೀಡುವಂತೆ ತಾಕೀತು ಮಾಡಿದ್ದಾರೆ. ಅಪರಿಚಿತ ವ್ಯಕ್ತಿಯ ಮೂಲಕ ಸಾಕ್ಷಿಯ ಹೇಳಿಕೆಯನ್ನು ತಿರುಚಲು ಪ್ರಯತ್ನಿಸಿದ್ದಾರೆ ಎಂಬುದು ಕಂಡು ಬರುತ್ತದೆ' ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

'ಪ್ರಕರಣಕ್ಕೆ ಸಂಬಂಧಿಸಿದ ಅಥವಾ ಸಂಬಂಧವಿಲ್ಲದ ಯಾವುದೇ ವ್ಯಕ್ತಿಗಳು ಸಾಕ್ಷಿ ಹೇಳಿಕೆಗಳನ್ನು ತಿರುಚಲು ಪ್ರಯತ್ನಿಸಿದರೆ, ಅದನ್ನು ಗಂಭೀರವಾಗಿ ಪರಿಗಣಿಸಲಾಗುವುದು. ಸಾಕ್ಷಿ ಸಂದೀಪ್ ಅವರಿಗೆ ವಿಚಾರಣೆಯವರೆಗೂ ಅಗತ್ಯ ರಕ್ಷಣೆ ಒದಗಿಸಲು ನಿರ್ದೇಶನ ನೀಡಲಾಗಿದೆ' ಎಂದು ಆದೇಶಿಸಿದರು.

ಸಾಕ್ಷಿಯ ಭಾಗಶಃ ಹೇಳಿಕೆಯನ್ನು ದಾಖಲಿಸಿಕೊಂಡ ನ್ಯಾಯಾಧೀಶರು, 'ನಿಮಗೆ ಭಯಪಡುವ ಅವಶ್ಯಕತೆ ಇಲ್ಲ. ನಿಮಗೆ ರಕ್ಷಣೆ ಕೊಡಲಾಗುವುದು. ನಿಮಗೆ ಗೊತ್ತಿರುವ ನಿಜ ಸಂಗತಿ ಏನು ಎಂಬುದನ್ನು ಕೋರ್ಟ್‌ಗೆ ತಿಳಿಸು' ಎಂದು ಮೌಖಿಕವಾಗಿ ನಿರ್ದೇಶಿಸಿದರು. ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಲಾಗಿದೆ.

ಎಥೆನಾಲ್ ಹಂಚಿಕೆಯಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು 'ಸುಪ್ರೀಂ' ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: 2025–26ನೇ ಸಾಲಿನಲ್ಲಿ ಎಥೆನಾಲ್ ಹಂಚಿಕೆಯಲ್ಲಿ ಕರ್ನಾಟಕವು ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸುಪ್ರೀಂ ಕೋರ್ಟ್ ಮಂಗಳವಾರ ಆದೇಶಿಸಿದೆ.

ಈ ಶಿಫಾರಸು, ಪೆಟ್ರೋಲ್ ಜೊತೆಗೆ ಶೇ 20ರಷ್ಟು ಎಥೆನಾಲ್ ಮಿಶ್ರಣ ಮಾಡುವ ಕೇಂದ್ರ ಸರ್ಕಾರದ ಯೋಜನೆ ಮೇಲೆ ಪರಿಣಾಮ ಬೀರಲಿದೆ.

ನ್ಯಾಯಮೂರ್ತಿ ಎಂ.ಎಂ. ಸುಂದರೇಶ್ ಮತ್ತು ಶೀಲ್ ನಾಗು ಅವರನ್ನು ಒಳಗೊಂಡ ನ್ಯಾಯಪೀಠವು, ಕೇಂದ್ರ ಸರ್ಕಾರ ಮತ್ತು ತೈಲ ಮಾರುಕಟ್ಟೆ ಕಂಪನಿಗಳು ಕರ್ನಾಟಕ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆ ನಡೆಸಿದ ನಂತರ, ಈ ಮಧ್ಯಂತರ ಆದೇಶ ಹೊರಡಿಸಿದೆ.

ಪ್ರಸ್ತುತ ವರ್ಷದ ಪೂರೈಕೆಯನ್ನು ನಿಗದಿತ ಪ್ರಮಾಣಕ್ಕಿಂತ ಹೆಚ್ಚಳ ಮಾಡಲು ಕ್ರಮ ಕೈಗೊಳ್ಳುವಂತೆ ಹಲವು ತೈಲ ಮಾರುಕಟ್ಟೆ ಕಂಪನಿಗಳಿಗೆ ಕರ್ನಾಟಕ ಹೈಕೋರ್ಟ್ ಕೇಳಿತ್ತು.

ಭಾರತ್ ಪೆಟ್ರೋಲಿಯಂ ಸಹಕಾರ ನಿಯಮಿತ ಪರವಾಗಿ ವಾದ ಮಂಡಿಸಿದ ವೆಂಕಟರಮಣಿ ಅವರು, ಹೈಕೋರ್ಟ್ ಆದೇಶವು ರಾಷ್ಟ್ರೀಯ ಎಥೆನಾಲ್ ನೀತಿಯನ್ನು ಅಸ್ಥಿರಗೊಳಿಸಲಿದೆ ಎಂದು ಪ್ರತಿಪಾದಿಸಿದರು.

ತುರ್ತು ವಿಚಾರಣೆಗೆ ಹೈಕೋರ್ಟ್ ನಕಾರ

ಕೋಲ್ಕತ್ತ (ಪಿಟಿಐ): ತೃಣಮೂಲ ಪಕ್ಷದ (ಟಿಎಂಸಿ) ಬ್ಯಾಂಕ್ ಖಾತೆಗಳ ಸ್ಥಗಿತಕ್ಕೆ ಸಂಬಂಧಿಸಿದಂತೆ ಸಲ್ಲಿಸಿದ್ದ ಅರ್ಜಿಯನ್ನು ತುರ್ತು ವಿಚಾರಣೆಗೆ ಕೈಗೆತ್ತಿಕೊಳ್ಳಲು ಕಲ್ಕತ್ತ ಹೈಕೋರ್ಟ್ ನಿರಾಕರಿಸಿದೆ.

ಟಿಎಂಸಿ ಹೆಸರಿನಲ್ಲಿದ್ದ ಮೂರು ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸುವಂತೆ ಕೋರಿ ಬಂಡಾಯ ಶಾಸಕರು ದೂರಿದ ಬೆನ್ನಲ್ಲೇ ಖಾತೆಯಿಂದ ವಹಿವಾಟು ನಡೆಸದಂತೆ ನಿರ್ಬಂಧ ವಿಧಿಸಲಾಗಿತ್ತು. ಇದನ್ನು ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಹೈಕೋರ್ಟ್‌ನಲ್ಲಿ ಪ್ರಶ್ನಿಸಿತ್ತು.

ತುರ್ತು ಅರ್ಜಿ ವಿಚಾರಣೆ ನಡೆಸುವಂತೆ ಮಮತಾ ಪರ ವಕೀಲ ಕಿಶೋರ್ ದತ್ತಾ ಮಾಡಿದ ಮನವಿಯನ್ನು ತಿರಸ್ಕರಿಸಿದ ನ್ಯಾಯಮೂರ್ತಿ ಶೌಗತ ಭಟ್ಟಾಚಾರ್ಯ, 'ಸರದಿಯ ಪ್ರಕಾರವೇ ಅರ್ಜಿ ವಿಚಾರಣೆ ನಡೆಸಲಾಗುವುದು' ಎಂದು ತಿಳಿಸಿದರು.

3 ಬ್ಯಾಂಕ್ ಖಾತೆಗಳಿಂದ ಸುಮಾರು ₹440 ಕೋಟಿ ಮೊತ್ತವನ್ನು ವಹಿವಾಟು ನಡೆಸದಂತೆ ನಿರ್ಬಂಧಿಸಲಾಗಿದೆ.

ವಾಂಗ್ಚುಕ್ ಜೊತೆ ವಿದ್ಯಾರ್ಥಿಗಳ ಉಪವಾಸ

ಪ್ರಜಾವಾಣಿ ವಾರ್ತೆ

ನವದೆಹಲಿ: ಪರೀಕ್ಷಾ ಅಕ್ರಮಗಳನ್ನು ಖಂಡಿಸಿ ದೆಹಲಿಯ ಜಂತರ್‌ಮಂತರ್‌ನಲ್ಲಿ ಹೋರಾಟಗಾರ ಸೋನಮ್ ವಾಂಗ್ಚುಕ್ ಅವರು ನಡೆಸುತ್ತಿರುವ ಉಪವಾಸ ಸತ್ಯಾಗ್ರಹಕ್ಕೆ 20 ವಿದ್ಯಾರ್ಥಿಗಳು ಜೊತೆಯಾಗಿದ್ದಾರೆ.

ವಾಂಗ್ಚುಕ್ ಅವರ ಉಪವಾಸ ಸತ್ಯಾಗ್ರಹವು ಮಂಗಳವಾರ ಮೂರನೇ ದಿನಕ್ಕೆ ಕಾಲಿಟ್ಟಿದೆ.

ಹಣ ಪಾವತಿಸಿದರಷ್ಟೇ ವಿದ್ಯುತ್ ಸಂಪರ್ಕ

ಸರ್ಕಾರಿ ಇಲಾಖೆಗಳು ಮುಂಗಡ ಪಾವತಿಸಬೇಕು– ಸಚಿವ ಕೆ.ಜೆ.ಜಾರ್ಜ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವಿವಿಧ ಸರ್ಕಾರಿ ಇಲಾಖೆಗಳಿಂದ ₹ 12 ಸಾವಿರ ಕೋಟಿ ಬಿಲ್ ಬಾಕಿ
- ಪರಿಸರಕ್ಕೆ ಪೂರಕವಾಗಿಯೇ 'ಪಂಪ್ಡ್ ಸ್ಟೋರೇಜ್' ಜಾರಿ

ಶಿವಮೊಗ್ಗ: ಜಲಸಂಪನ್ಮೂಲ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಸಣ್ಣ ನೀರಾವರಿ ಮತ್ತಿತರ ಇಲಾಖೆಗಳಿಂದ ₹12,000 ಕೋಟಿ ವಿದ್ಯುತ್ ಶುಲ್ಕ ಬಾಕಿ ಇದೆ. ಹಾಗಾಗಿ, ಇನ್ನುಮುಂದೆ ಮುಂಗಡ ಹಣ ಪಾವತಿ ಮಾಡಿದರೆ ಮಾತ್ರ ಸರ್ಕಾರಿ ಯೋಜನೆಗಳಿಗೆ ವಿದ್ಯುತ್ ಪೂರೈಸಲು ನಿರ್ಧರಿಸಲಾಗಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ಮಂಗಳವಾರ ಇಲ್ಲಿ ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದ ಪರಿಹಾರ ಕಾರ್ಯಗಳ ಪ್ರಗತಿ ಪರಿಶೀಲನೆ ಸಭೆ ನಡೆಯಿತು. ವಿದ್ಯುತ್ ಬಿಲ್ ಪಾವತಿಸದ ಕಾರಣಕ್ಕೆ ಜಿಲ್ಲೆಯ ಏತ ನೀರಾವರಿ ಯೋಜನೆಗಳಿಗೆ ವಿದ್ಯುತ್ ಕಡಿತ ಮಾಡಿರುವ ಸಂಗತಿಯ ಬಗ್ಗೆ ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಡಾ. ಧನಂಜಯ ಸರ್ಜಿ ಪ್ರಸ್ತಾಪಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಜಾರ್ಜ್, 'ಇಲಾಖೆ ಹೊರ ರಾಜ್ಯ ಹಾಗೂ ಕೇಂದ್ರೀಯ ಗ್ರಿಡ್‌ನಿಂದ ವಿದ್ಯುತ್ ಖರೀದಿ ಮಾಡುತ್ತಿದೆ. ನಾವು ನಿಗದಿತ ಸಮಯದಲ್ಲಿ ಬಿಲ್ ಪಾವತಿಸದಿದ್ದರೆ ನಮ್ಮನ್ನು (ಇಂಧನ ಇಲಾಖೆ) ಕಪ್ಪು ಪಟ್ಟಿಗೆ ಸೇರಿಸುತ್ತಾರೆ. ವಿವಿಧ ಇಲಾಖೆಗಳು ದೊಡ್ಡ ಮೊತ್ತ ಬಾಕಿ ಉಳಿಸಿಕೊಂಡರೆ ವಿದ್ಯುತ್ ಖರೀದಿಗೆ ನಾವು ಹಣ ಹೊಂದಿಸುವುದು ಹೇಗೆ' ಎಂದು ಪ್ರಶ್ನಿಸಿದರು.



2003ರಲ್ಲಿ ವಿದ್ಯುತ್ ಕ್ಷೇತ್ರದ ಖಾಸಗೀಕರಣಕ್ಕೆ ಕಾಯ್ದೆ ತಂದವರೇ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿಯವರು. ಈಗ ಅವರೇ ವಿರೋಧ ಮಾಡುತ್ತಿದ್ದಾರೆ. ವಿದ್ಯುತ್ ಕ್ಷೇತ್ರ ಖಾಸಗೀಕರಣಕ್ಕೆ ರಾಜ್ಯ ಸರ್ಕಾರ ಸಿದ್ಧವಿಲ್ಲ

ಕೆ.ಜೆ.ಜಾರ್ಜ್, ಇಂಧನ ಸಚಿವ

ಗೃಹ ಜ್ಯೋತಿ, ರೈತರ ಐಪಿ ಸೆಟ್‌ಗಳಿಗೆ ಪೂರೈಸುತ್ತಿರುವ ವಿದ್ಯುತ್‌ಗೆ ಸರ್ಕಾರದಿಂದ ನಿಗದಿತ ಅವಧಿಯಲ್ಲಿ ಬಿಲ್ ಪಾವತಿ ಆಗುತ್ತಿದೆ. ಬಿಲ್ ಪಾವತಿಸದೇ ವಿದ್ಯುತ್ ಪೂರೈಕೆ ಸಾಧ್ಯವಿಲ್ಲ. ಹೀಗಾಗಿ ಮುಂಗಡವಾಗಿ ಹಣ ಪಾವತಿಸಿ ವಿದ್ಯುತ್ ಪಡೆಯುವಂತೆ ಸೂಚಿಸಲು ಜುಲೈ 3ರಂದು ಸಂಬಂಧಿಸಿದ ಇಲಾಖೆಗಳ ಮುಖ್ಯಸ್ಥರ ಸಭೆ ಕರೆಯಲಾಗಿದೆ ಎಂದು ತಿಳಿಸಿದರು.

ಪಂಪ್ಡ್ ಸ್ಟೋರೇಜ್ ಯೋಜನೆ: 'ಪ್ರಸ್ತಾವಿತ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯನ್ನು ಪರಿಸರಕ್ಕೆ ಪೂರಕವಾಗಿಯೇ ಜಾರಿಗೊಳಿಸಲಿದ್ದೇವೆ. ಈ ನೆಲದ ಎಲ್ಲ ಕಾನೂನು ಪಾಲಿಸಲಾಗುತ್ತದೆ. ಅದಕ್ಕೆ ವಿರೋಧ ಮಾಡುವುದು ಬೇಡ' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಕೋರಿದರು.

ಸಭೆಗೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯೋಜನೆಯಿಂದ ಅರಣ್ಯ ಪ್ರದೇಶಕ್ಕೆ ದೊಡ್ಡ ಮಟ್ಟದ ಹಾನಿ ಆಗುವುದಿಲ್ಲ. ಪಂಪ್‌ಹೌಸ್‌ಗೆ 25 ಎಕರೆ ಪ್ರದೇಶ ಮಾತ್ರ ಬಳಕೆ ಆಗುತ್ತದೆ. ಅರಣ್ಯ ಪ್ರದೇಶದಲ್ಲಿ ಪೈಪ್‌ಲೈನ್ ಅಳವಡಿಸಿದ ಬಳಿಕ ಮತ್ತೆ ಮಣ್ಣಿನಿಂದ ಮುಚ್ಚಿ ಪುನಃ ಅಲ್ಲಿ ಮರ ಬೆಳೆಸಲಾಗುತ್ತದೆ ಎಂದರು.

ಈಚೆಗೆ ಆಂಧ್ರಪ್ರದೇಶದಲ್ಲಿ ಗ್ರೀನ್‌ಕೊ ಸಂಸ್ಥೆ ಕೈಗೊಂಡಿರುವ ಪಂಪ್ಡ್ ಸ್ಟೋರೇಜ್ ಯೋಜನಾ ಪ್ರದೇಶಕ್ಕೆ ಭೇಟಿ ನೀಡಿದ್ದೆ. ಅಲ್ಲಿ ಅತ್ಯುತ್ತಮವಾಗಿ ಯೋಜನೆ ಜಾರಿಗೊಂಡಿದೆ. ಅಲ್ಲಿನ ಪಂಪ್ಡ್ ಸ್ಟೋರೇಜ್‌ನಲ್ಲಿ ವಿದ್ಯುತ್ ಉತ್ಪಾದನೆ ವೇಳೆ ನೀರಿನ ಆವಿಯಾಗುವಿಕೆ ಶೇ 5 ರಷ್ಟು ಮಾತ್ರ ಇದೆ. ನೀರನ್ನು ನಿರಂತರವಾಗಿ ಮರುಬಳಕೆ ಮಾಡಿಕೊಳ್ಳಲಾಗುತ್ತಿದೆ. ಯೋಜನೆ ಜಾರಿಗೊಂಡರೆ ರಾಜ್ಯಕ್ಕೆ ಹೆಚ್ಚುವರಿಯಾಗಿ 2,000 ಮೆಗಾ ವಾಟ್ ವಿದ್ಯುತ್ ಉತ್ಪಾದನೆ ಸಾಧ್ಯವಾಗಲಿದೆ ಎಂದರು.

₹ 12 ಕೋಟಿ ವಂಚನೆ: 8 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ವಿಜಯಪುರ: ಬಬಲೇಶ್ವರ ತಾಲ್ಲೂಕಿನ ಕೃಷ್ಣಾ ನಗರದ ನಂದಿ ಸಹಕಾರಿ ಸಕ್ಕರೆ ಕಾರ್ಖಾನೆಗೆ ಕಬ್ಬಿನ ತೂಕದಲ್ಲಿ ವಂಚಿಸಿದ್ದ ಆರೋಪದ ಮೇಲೆ ಎಂಟು ಸಿಬ್ಬಂದಿಯನ್ನು ಬಂಧಿಸಿ, ಅವರಿಂದ ₹11.32 ಕೋಟಿಯನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

'ಕಾರ್ಖಾನೆಯ ಕಬ್ಬಿನ ತೂಕ ವಿಭಾಗದಲ್ಲಿ 2020–21ರಿಂದ 2025–26ನೇ ಸಾಲಿನ ಕಬ್ಬು ನುರಿಸುವ ಹಂಗಾಮಿನಲ್ಲಿ ಕಾರ್ಖಾನೆಯ 8 ಸಿಬ್ಬಂದಿ ಸೇರಿ 34,490 ಮೆಟ್ರಿಕ್ ಟನ್ ಕಬ್ಬಿಗೆ ಸಂಬಂಧಿಸಿದಂತೆ ಒಟ್ಟು ₹12.33 ಕೋಟಿಯನ್ನು 91 ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿ, ಕಾರ್ಖಾನೆಗೆ ವಂಚಿಸಿದ್ದರು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಕಾರ್ಖಾನೆಯ ಕಬ್ಬು ತೂಕ ಮಾಪನ ಕೇಂದ್ರದ ಸಿಬ್ಬಂದಿಯಾದ ಜಮಖಂಡಿ ತಾಲ್ಲೂಕಿನ ಬಿದರಿ ಗ್ರಾಮದ ಧರೆಪ್ಪ ನಾವಿ, ಬೆಳಗಾವಿ ಜಿಲ್ಲೆ ಯರಗಟ್ಟಿ ಗ್ರಾಮದ ಭೀರಪ್ಪ ಗಾಡದಾರ, ಯಲ್ಲಪ್ಪ ಗಾಡದರ, ರಾಯಭಾಗ ತಾಲ್ಲೂಕಿನ ಆಲಕನೂರ ಗ್ರಾಮದ ಪ್ರಕಾಶ ಗಡ್ಡಿ, ಪರಮಾನಂದ ಗಡ್ಡಿ, ಮಹಾದೇವ ಕಾಂಬಳೆ, ಬಾಳಪ್ಪ ಚೋಪಡೆ, ಉಗಾರ ಗ್ರಾಮದ ಪ್ರಭಾಕರ ಸಿಂಗೆ ಎಂಬವರು ಬಂಧಿತರು. ಇವರೆಲ್ಲರೂ ಈ ಮೊದಲು ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ವಿವಿಧ ಸಕ್ಕರೆ ಕಾರ್ಖಾನೆಗಳಲ್ಲಿ ಕೆಲಸ ಮಾಡಿದ್ದು, ತೂಕದಲ್ಲಿ ವಂಚನೆ ಮಾಡಿದ ಆರೋಪದ ಮೇಲೆ ಅವರ ವಿರುದ್ಧ ಪ್ರಕರಣಗಳು ದಾಖಲಾಗಿವೆ' ಎಂದರು.

'ಆರೋಪಿಗಳು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಚಿಟ್‌ಬಾಯ್ (ಫೀಲ್ಡ್ ಆಫೀಸರ್) ಮತ್ತು ಟೋಕನ್ ಆಪರೇಟ್‌ರಗಳನ್ನು ತಮ್ಮ ವಿಶ್ವಾಸಕ್ಕೆ ಪಡೆದು ನಕಲಿ ಟೋಕನ್‌ಗಳನ್ನು ಸಿದ್ಧಪಡಿಸಿ, ಕಾರ್ಖಾನೆಗೆ ಬರುವ ಕಬ್ಬಿನ ಟ್ರ್ಯಾಕ್ಟರ್‌ಗಳ ತೂಕಕ್ಕೆ ನಕಲಿ ಟೋಕನ್ ಹೊಂದಿಸಿ, ತಮಗೆ ಬೇಕಾದ ಬೇರೆಯವರ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡುತ್ತಿದ್ದರು' ಎಂದರು.

ಸುರತ್ಕಲ್: 6 ಮೀನುಗಾರರ ರಕ್ಷಣೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಅರಬ್ಬಿ ಸಮುದ್ರದಲ್ಲಿ ಅಪಾಯಕ್ಕೆ ಸಿಲುಕಿದ್ದ 'ಮಂಜು ಮಾತಾ' ಮೀನುಗಾರಿಕಾ ದೋಣಿಯಲ್ಲಿದ್ದ ಆರು ಮಂದಿ ಮೀನುಗಾರರನ್ನು ಭಾರತೀಯ ಕರಾವಳಿ ರಕ್ಷಣಾ ಪಡೆ ಸೋಮವಾರ ಸಂಜೆ ರಕ್ಷಣೆ ಮಾಡಿದೆ.

'ಸುರತ್ಕಲ್ ಕಿನಾರೆಯಿಂದ ಸುಮಾರು 33 ನಾಟಿಕಲ್ ಮೈಲಿ ದೂರದಲ್ಲಿ ಮೀನುಗಾರಿಕಾ ದೋಣಿಯು ಅಪಾಯಕ್ಕೆ ಸಿಲುಕಿತ್ತು. ಪ್ರಕ್ಷುಬ್ಧಗೊಂಡಿರುವ ಕಡಲಿನ ಅಲೆಗಳ ಹೊಡೆತಕ್ಕೆ ಸಿಲುಕಿದ್ದ ದೋಣಿಯ ಒಳಗೆ ನೀರು ನುಗ್ಗಿತ್ತು. ಅದರಲ್ಲಿದ್ದ ಆರು ಮೀನುಗಾರರ ಜೀವಕ್ಕೂ ಅಪಾಯ ಎದುರಾಗಿತ್ತು. ಆ ದೋಣಿಯಿಂದ ಬಂದ ತುರ್ತು ಸಂಕೇತವನ್ನು ಕರಾವಳಿ ರಕ್ಷಣಾ ಪಡೆಯ 'ಸಾಚೇತ್' ನೌಕೆಯು ಗ್ರಹಿಸಿತು. ತಕ್ಷಣ ಸ್ಪಂದಿಸಿದ ಕರಾವಳಿ ರಕ್ಷಣಾ ಪಡೆಯು, ತನ್ನ ಸಾಚೇತ್ ನೌಕೆಯನ್ನು ಅತ್ತ ತಿರುಗಿಸಿ 90 ನಿಮಿಷಗಳಲ್ಲಿ ಅಲ್ಲಿಗೆ ತಲುಪಿತು.'

'ಅಪಾಯಕ್ಕೆ ಸಿಲುಕಿಕೊಂಡಿದ್ದ ಮೀನುಗಾರರನ್ನು, ಜೀವ ರಕ್ಷಕ ಸಾಧನಗಳನ್ನು ಬಳಸಿ ಸುರಕ್ಷಿತವಾಗಿ ರಕ್ಷಿಸಿದ್ದೇವೆ. ಈ ರಕ್ಷಣಾ ತಂಡದ ಸಿಬ್ಬಂದಿ ಅಸಾಧಾರಣ ನಾವಿಕ ಕೌಶಲ ಪ್ರದರ್ಶಿಸಿದ್ದಾರೆ. ನಿಖರತೆ ಮತ್ತು ಸಮನ್ವಯತೆಯಿಂದ ಕಾರ್ಯನಿರ್ವಹಿಸಿದ್ದಾರೆ' ಎಂದು ಕರಾವಳಿ ರಕ್ಷಣಾ ಪಡೆಯ ಪ್ರಕಟಣೆ ತಿಳಿಸಿದೆ.ರಕ್ಷಿಸಿದ ಆರು ಮಂದಿ ಮೀನುಗಾರರನ್ನು ನವಮಂಗಳೂರು ಬಂದರಿಗೆ ಸುರಕ್ಷಿತವಾಗಿ ಕರೆತರಲಾಗಿದೆ.


ಮಳೆ–ಎಚ್ಚರಿಕೆ

ಬೆಂಗಳೂರು: ರಾಜ್ಯದ ಕರಾವಳಿ ಭಾಗದಲ್ಲಿ ಬುಧವಾರದಿಂದ ಮುಂದಿನ ಒಂದು ವಾರ ಭಾರಿ ಮಳೆಯಾಗುವ ಸಾಧ್ಯತೆ ಬಗ್ಗೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಜುಲೈ 4 ರವರೆಗೆ ಈ ಭಾಗದಲ್ಲಿ ಮೀನುಗಾರರು ಸಮುದ್ರ ಪ್ರದೇಶಗಳಿಗೆ ಹೋಗಬಾರದು ಎಂದು ಸೂಚಿಸಿದೆ.

ಎಚ್.ಆರ್.ಸ್ವಾಮಿಗೆ 'ಸಿದ್ದಲಿಂಗಯ್ಯ ಸಾಹಿತ್ಯ ದತ್ತಿ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ನೀಡುವ 'ಡಾ.ಸಿದ್ದಲಿಂಗಯ್ಯ ಸಾಹಿತ್ಯ ದತ್ತಿ ಪ್ರಶಸ್ತಿ'ಗೆ ಲೇಖಕ ಎಚ್.ಆರ್. ಸ್ವಾಮಿ ಆಯ್ಕೆಯಾಗಿದ್ದಾರೆ.



ಎಚ್.ಆರ್. ಸ್ವಾಮಿ

ಈ ಪ್ರಶಸ್ತಿಯು ₹10 ಸಾವಿರ ನಗದು ಒಳಗೊಂಡಿದೆ. ಶ್ರವಣಬೆಳಗೊಳದಲ್ಲಿ ನಡೆದ 81ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣಾರ್ಥ, ಸಮ್ಮೇಳನಾಧ್ಯಕ್ಷರಾಗಿದ್ದ ಕವಿ ಸಿದ್ದಲಿಂಗಯ್ಯ ಹೆಸರಿನಲ್ಲಿ ಈ ಸಾಹಿತ್ಯ ದತ್ತಿ ಪುರಸ್ಕಾರ ಸ್ಥಾಪಿಸಲಾಗಿದೆ. ಸಿದ್ದಲಿಂಗಯ್ಯ ಅವರ ತಾತ್ವಿಕತೆಯನ್ನು ಸಮರ್ಥವಾಗಿ ವಿವಿಧ ಮಾಧ್ಯಮಗಳ ಮೂಲಕ ಬಿಂಬಿಸುತ್ತಿರುವ ಸಾಧಕರಿಗೆ ಈ ಪುರಸ್ಕಾರ ನೀಡಲಾಗುತ್ತಿದೆ.

ಪರಿಷತ್ತಿನ ಆಡಳಿತಾಧಿಕಾರಿ ಕೆ.ಎ. ದಯಾನಂದ ಅವರ ಅಧ್ಯಕ್ಷತೆಯಲ್ಲಿ, ರಾಜಪ್ಪ ದಳವಾಯಿ, ಶ್ರೀದೇವಿ ಕೆರೆಮನೆ ಮತ್ತು ದತ್ತಿ ದಾನಿಗಳಾದ ರಮಾಕುಮಾರಿ ಸಿದ್ದಲಿಂಗಯ್ಯ ಮತ್ತು ಮಾನಸಾ ಸಿದ್ದಲಿಂಗಯ್ಯ ಅವರನ್ನು ಒಳಗೊಂಡ ಸಮಿತಿ ಈ ಆಯ್ಕೆ ಮಾಡಿದೆ.

ಅಬ್ಬರದ ಮಳೆ: ಹಾನಿ

ಕಾರವಾರ: ಉತ್ತರ ಕನ್ನಡ ಜಿಲ್ಲೆಯಾದ್ಯಂತ ಮಂಗಳವಾರ ಮಳೆ ಅಬ್ಬರ ಮುಂದುವರಿದಿದ್ದು, ಶಿರಸಿಯಲ್ಲಿ ಗೋಡೆ ಕುಸಿದು ಮನೆಗೆ ಹಾನಿಯಾಗಿದೆ.

ಜಿಲ್ಲೆಯ ಕರಾವಳಿ ಭಾಗದಲ್ಲಿ ಮಳೆ ಅಬ್ಬರ ಹೆಚ್ಚಿದೆ. ಗಾಳಿ ಮಳೆಯಿಂದ ಗೋಕರ್ಣದ ಬಸ್ ನಿಲ್ದಾಣದ ಸಮೀಪದಲ್ಲಿ ಭಾರಿ ಗಾತ್ರದ ಮರ ಬಿದ್ದು ಕುಡಿಯುವ ನೀರಿನ ಘಟಕಕ್ಕೆ ಹಾನಿಯಾಗಿದೆ. ಶಿರಸಿಯ ಗಣೇಶ ನಗರದಲ್ಲಿ ಎತ್ತರದ ಪ್ರದೇಶದಲ್ಲಿದ್ದ ಮನೆಯೊಂದರ ಗೋಡೆ ಕುಸಿದಿದ್ದರಿಂದ ತಗ್ಗು ಪ್ರದೇಶದಲ್ಲಿದ್ದ ಮನೆಗೆ ಹಾನಿಯಾಗಿದೆ.

ಉತ್ತರ ಕನ್ನಡ ಸೇರಿ ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಜುಲೈ 3ರ ವರೆಗೆ ಭಾರಿ ಮಳೆಯಾಗುವ ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ.

ದ.ಕದಲ್ಲಿ ಮಳೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳವಾರ ಬಿಟ್ಟು ಬಿಟ್ಟು ಧಾರಾಕಾರ ಮಳೆ ಸುರಿಯಿತು.

ಸೋಮವಾರ ಇಡೀ ರಾತ್ರಿ ಸುರಿದ ಮಳೆ ಮಂಗಳವಾರವೂ ಮುಂದುವರಿಯಿತು. ಸಂಜೆ ವೇಳೆಗೆ ಬಿರುಸಾದ ಗಾಳಿಯಿಂದ ಕೂಡಿದ ಮಳೆಯ ಅಬ್ಬರ ಜೋರಾಗಿತ್ತು.

ಉಡುಪಿ ಜಿಲ್ಲೆಯ ಬ್ರಹ್ಮಾವರ, ಕುಂದಾಪುರ, ಬೈಂದೂರು, ಕಾರ್ಕಳ, ಕಾಪು, ಹೆಬ್ರಿ ವ್ಯಾಪ್ತಿಯಲ್ಲಿ ಸಾಧಾರಣ ಮಳೆಯಾಗಿದೆ.



ಗಾಳಿ ಮಳೆಗೆ ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದಲ್ಲಿ ಭಾರಿ ಗಾತ್ರದ ಮರ ಬಿದ್ದು ಕುಡಿಯುವ ನೀರಿನ ಘಟಕಕ್ಕೆ ಹಾನಿಯಾಗಿದೆ.

ಎಸ್‌ಐಆರ್‌ಗೆ ಕಾಂಗ್ರೆಸ್ ಹಸ್ತಕ್ಷೇಪ ಸಾಧ್ಯತೆ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಚುನಾವಣಾ ಆಯೋಗ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಆರಂಭಿಸಿದ್ದು, ಬಿಜೆಪಿ ಕಾರ್ಯಕರ್ತರು, ಬೆಂಬಲಿಗರಿಗೆ ಗಣತಿ ನಮೂನೆ ವಿತರಣೆಯಾಗದಂತೆ ರಾಜ್ಯ ಸರ್ಕಾರ ನೋಡಿಕೊಳ್ಳುವ ಸಾಧ್ಯತೆಗಳಿವೆ. ಬಿಜೆಪಿಯ ಮತಗಟ್ಟೆ ಏಜೆಂಟರು (ಬಿಎಲ್‌ಎ) ಜಾಗೃತರಾಗಿ ಕೆಲಸ ಮಾಡಬೇಕು' ಎಂದು ಸಂಸದ ಬಸವರಾಜ ಬೊಮ್ಮಾಯಿ ವಿನಂತಿ ಮಾಡಿಕೊಂಡಿದ್ದಾರೆ.

ಈ ಕುರಿತು 'ಎಕ್ಸ್' ಮಾಡಿರುವ ಅವರು, 'ಬಿಜೆಪಿ ಬಿಎಲ್‌ಎಗಳು ಪ್ರತಿ ಬೂತ್‌ನ ಪ್ರತಿ ಮನೆಗೂ ಗಣತಿ ನಮೂನೆ ವಿತರಣೆಯಾಗುವಂತೆ ನೋಡಿಕೊಳ್ಳಬೇಕು. ಮನೆ-ಮನೆಗೂ ಭೇಟಿ ನೀಡಬೇಕು. ನಮೂನೆ ಭರ್ತಿ ಮಾಡಲು ಸಹಕರಿಸಬೇಕು' ಎಂದು ಸಲಹೆ ನೀಡಿದ್ದಾರೆ.

'ನಮೂನೆ ವಿತರಣೆ, ಮರು ಸಂಗ್ರಹಿಸುವ ಮೊದಲನೇ ಹಂತದ ಕಾರ್ಯವನ್ನು ರಾಜ್ಯ ಸರ್ಕಾರದ ಅಧಿಕಾರಿಗಳು ನಿರ್ವಹಿಸುತ್ತಾರೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ನಿಕಟಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿರಂತರ ಹೇಳಿಕೆಗಳನ್ನು ಗಮನಿಸಿದರೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಅಧಿಕಾರಿಗಳ ಮೇಲೆ ಒತ್ತಡ ಹಾಕುತ್ತಿರುವುದು ತಿಳಿಯುತ್ತದೆ. ಹಾಗಾಗಿ, ಅರ್ಹ ಮತದಾರರ ಹೆಸರು ಬಿಟ್ಟು ಹೋಗದಂತೆ, ಅನರ್ಹ ಮತದಾರರ ಹೆಸರು ಸೇರ್ಪಡೆಯಾಗದಂತೆ ನೋಡಿಕೊಳ್ಳಬೇಕು' ಎಂದು ವಿನಂತಿಸಿದ್ದಾರೆ.

ನಾಲ್ವರು ಐಎಎಸ್ ಅಧಿಕಾರಿಗಳ ವರ್ಗ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಇಲಾಖೆಯ ಆಯುಕ್ತರನ್ನಾಗಿ ದಿವ್ಯಾ ಪ್ರಭು ಜಿ.ಆರ್.ಜೆ. ಅವರನ್ನು ನೇಮಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ಈವರೆಗೆ ಈ ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿದ್ದ ಡಾ. ಅರುಂಧತಿ ಚಂದ್ರಶೇಖರ್ ಅವರನ್ನು ಬಿಡುಗಡೆ ಮಾಡಲಾಗಿದೆ.

ಕರ್ನಾಟಕ ಗಣಿಗಾರಿಕೆ ಪರಿಸರ ಮರುಸ್ಥಾಪನಾ ನಿಗಮದ (ಕೆಎಂಇಆರ್‌ಸಿ) ವ್ಯವಸ್ಥಾಪಕ ನಿರ್ದೇಶಕರಾಗಿ ಅಭಿರಾಮ್ ಜಿ. ಶಂಕರ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ (ಐಟಿಬಿಟಿ) ಇಲಾಖೆಯ ನಿರ್ದೇಶಕರಾಗಿ ಡಾ. ಅವಿನಾಶ್ ಮೆನನ್ ರಾಜೇಂದ್ರನ್ ಅವರಿಗೆ ಜವಾಬ್ದಾರಿ ನೀಡಲಾಗಿದೆ. ಮೆನನ್ ಅವರಿಗೆ 'ಕಿಯೋನಿಕ್ಸ್' (ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ) ವ್ಯವಸ್ಥಾಪಕ ನಿರ್ದೇಶಕ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಕೃಷಿ ಮಾರುಕಟ್ಟೆ ಇಲಾಖೆಯ ನಿರ್ದೇಶಕರಾಗಿ ಎ.ಎಂ.ಯೋಗೀಶ್ ಅವರನ್ನು ವರ್ಗಾವಣೆ ಮಾಡಲಾಗಿದೆ. ಈವರೆಗೆ ಈ ಹುದ್ದೆಯನ್ನು ಹೆಚ್ಚುವರಿಯಾಗಿ ಹೊಂದಿದ್ದ ಎಚ್. ಪ್ರಸನ್ನ ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ.

ಎಲ್ ನಿನೊ: ಜುಲೈನಲ್ಲೂ ಮಳೆ ಕೊರತೆ

125 ವರ್ಷಗಳಲ್ಲೇ ಅತ್ಯಂತ ಕಳಪೆ ಮುಂಗಾರು: ಐಎಂಡಿ ವರದಿ

ನವದೆಹಲಿ (ಪಿಟಿಐ): 'ದೇಶವು ತೀವ್ರವಾದ ಮುಂಗಾರು ಮಳೆ ಕೊರತೆ ಎದುರಿಸುತ್ತಿದ್ದು, ಜೂನ್ ಬಳಿಕ, ಇದೀಗ ಜುಲೈ ತಿಂಗಳಲ್ಲೂ ವಾಡಿಕೆಗಿಂತಲೂ ಕಡಿಮೆ ಮಳೆಯಾಗಲಿದೆ' ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಹೇಳಿದೆ.

ಮುಖ್ಯಾಂಶಗಳು

- ಜೂನ್‌ನಲ್ಲಿ ದೇಶದಲ್ಲಿ ವಾಡಿಕೆಗಿಂತಲೂ ಶೇ40ರಷ್ಟು ಕಡಿಮೆ ಮಳೆ
- ಮಧ್ಯ ಭಾರತದಲ್ಲಿ ಶೇ 50.4ರಷ್ಟು ಮಳೆ ಕೊರತೆ

ಎಲ್ ನಿನೊ ಪ್ರಭಾವ ಮತ್ತು ನೈರುತ್ಯ ಮುಂಗಾರು ದಕ್ಷಿಣ ಮಹಾರಾಷ್ಟ್ರದಲ್ಲಿ ಸ್ಥಗಿತಗೊಂಡ ಪರಿಣಾಮ ಜೂನ್ ತಿಂಗಳಲ್ಲಿ ದೇಶದಾದ್ಯಂತ ವಾಡಿಕೆಗಿಂತಲೂ ಶೇ 40ರಷ್ಟು ಕಡಿಮೆ ಮಳೆಯಾಗಿದೆ. 125 ವರ್ಷಗಳ ಬಳಿಕ (1901ರ ನಂತರ) ಜೂನ್ ತಿಂಗಳಲ್ಲಿ ದೇಶದಲ್ಲಿ ದಾಖಲಾಗಿರುವ (ಐದನೆಯ ಬಾರಿ) ಕನಿಷ್ಠ ಪ್ರಮಾಣದ (99.5) ಮಳೆ ಇದಾಗಿದೆ. ಜುಲೈ ತಿಂಗಳಲ್ಲೂ ಎಲ್ ನಿನೊ ಪ್ರಭಾವದಿಂದ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಬಹುದು ಎಂದು ಐಎಂಡಿ ಎಚ್ಚರಿಕೆ ನೀಡಿದೆ.

ಜೂನ್‌ನಲ್ಲಿ ಮಧ್ಯಪ್ರದೇಶ, ಛತ್ತೀಸಗಢ ಸೇರಿ ಮಧ್ಯ ಭಾರತದಲ್ಲಿ ತೀವ್ರ ಪ್ರಮಾಣದಲ್ಲಿ ಅಂದರೆ ಶೇ 50.4ರಷ್ಟು ಮಳೆ ಕೊರತೆಯಾಗಿದೆ.

ಜುಲೈನಲ್ಲಿ ವಾಯುವ್ಯ ಮತ್ತು ಈಶಾನ್ಯ ಭಾರತ, ಪೂರ್ವ-ಮಧ್ಯ ಭಾರತ, ಒಡಿಶಾ, ಛತ್ತೀಸಗಢ, ಜಾರ್ಖಂಡ್, ಆಂಧ್ರ ಪ್ರದೇಶ ಕೆಲವು ಪ್ರದೇಶಗಳನ್ನು ಹೊರತುಪಡಿಸಿ ಉಳಿದೆಡೆ ಸಾಮಾನ್ಯಕ್ಕಿಂತಲೂ ಕಡಿಮೆ ಮಳೆಯಾಗುವ ಸಾಧ್ಯತೆಯಿದೆ. ಪೂರ್ವ ಕರಾವಳಿ ಪ್ರದೇಶಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಬಹುದು ಎಂದು ಐಎಂಡಿ ಮಹಾನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ಹೇಳಿದ್ದಾರೆ.

ಜುಲೈ ತಿಂಗಳಲ್ಲಿ ದೇಶದಾದ್ಯಂತ ಸುರಿಯುವ ಸರಾಸರಿ ಮಳೆ ಪ್ರಮಾಣ 280.4 ಮಿ.ಮೀ. ಆದರೆ, 1971ರಿಂದ 2020ರ ಅವಧಿಯಲ್ಲಿ ಜುಲೈ ತಿಂಗಳಲ್ಲಿ ಲಭಿಸಿರುವ ಸರಾಸರಿ ಮಳೆ ಪ್ರಮಾಣಕ್ಕೆ ಹೋಲಿಸಿದರೆ, ಈ ಬಾರಿ ಅದು ಶೇ 94ರಷ್ಟು ಇರಲಿದೆ ಎಂದು ಐಎಂಡಿ ಹೇಳಿದೆ.

ಮಳೆ ಕೊರತೆಗೆ ಐದು ಅಂಶಗಳು ಕಾರಣ: ಅರಬ್ಬಿ ಸಮುದ್ರದಲ್ಲಿ ನೈರುತ್ಯ ಮುಂಗಾರಿಗೆ ತೇವಾಂಶದ ಮೂಲವಾಗಿ ಕಾರ್ಯನಿರ್ವಹಿಸುವ ಮಾರುತ ದುರ್ಬಲಗೊಂಡಿರುವುದು, ಗಾಳಿ, ಮೋಡ, ಮಳೆ ಮೇಲೆ ಪ್ರಭಾವ ಬೀರುವ ಮ್ಯಾಡೆನ್-ಜೂಲಿಯನ್ ಅನಿಶ್ಚಿತತೆ (ಎಂಜೆಒ), ಪೆಸಿಫಿಕ್ ಮಹಾಸಾಗರದಲ್ಲಿ ಎಲ್ ನಿನೊ ಪ್ರಭಾವ ಹೆಚ್ಚಿರುವುದು ಸೇರಿ ಐದು ಅಂಶಗಳು ಮಳೆ ಕೊರತೆಗೆ ಪ್ರಮುಖ ಕಾರಣಗಳಾಗಿವೆ. 'ಎಂಜೆಒ' ಸಕ್ರಿಯ ಹಂತದಲ್ಲಿದ್ದಾಗ, ಮಾರುತವು ದಕ್ಷಿಣ ಭಾರತಕ್ಕೆ ಹೆಚ್ಚಿನ ಮೋಡಗಳನ್ನು ತರುತ್ತದೆ, ನಂತರ ಅವುಗಳನ್ನು ಮುಂಗಾರು ಮಾರುತಗಳು ಉತ್ತರದ ಕಡೆಗೆ ಒಯ್ಯುತ್ತವೆ, ಇದರಿಂದ ಹೆಚ್ಚಿನ ಮಳೆ ಆಗುತ್ತದೆ ಎಂದು ಐಎಂಡಿ ವಿಶ್ಲೇಷಿಸಿದೆ.

ಉತ್ತರಾಖಂಡ, ಹಿಮಾಚಲ ಪ್ರದೇಶ, ಲಡಾಖ್, ಗುಜರಾತ್, ಮಧ್ಯಪ್ರದೇಶ, ಉತ್ತರ ಪ್ರದೇಶದ ಕೆಲವೆಡೆಗೆ ಮುಂದಿನ ಎರಡು-ಮೂರು ದಿನಗಳಲ್ಲಿ ಮುಂಗಾರು ಚುರುಕುಗೊಳ್ಳಬಹುದು. ಈ ಅವಧಿಯಲ್ಲಿ ದಿಯು-ದಮನ್, ಜಮ್ಮು ಮತ್ತು ಕಾಶ್ಮೀರ, ಹರಿಯಾಣ, ಛತ್ತೀಸಗಢ, ದೆಹಲಿ, ಪಂಜಾಬ್, ರಾಜಸ್ಥಾನದ ಕೆಲವು ಭಾಗಗಳಲ್ಲಿ ಧಾರಾಕಾರ ಮಳೆಯಾಗುವ ಸಾಧ್ಯತೆಗಳಿವೆ. ಜುಲೈ ತಿಂಗಳಲ್ಲಿ ಕನಿಷ್ಠ ಮತ್ತು ಗರಿಷ್ಠ ಉಷ್ಣಾಂಶವು ಸಾಮಾನ್ಯ ಮಟ್ಟಕ್ಕಿಂತಲೂ ಹೆಚ್ಚಿರಲಿದೆ ಎಂದು ಐಎಂಡಿ ಹೇಳಿದೆ.

ಮುಂಗಾರು ವಿಳಂಬ- ಬಿತ್ತನೆ ವಿವರ (ಲಕ್ಷ ಹೆಕ್ಟೇರ್‌ಗಳಲ್ಲಿ)

ಆಹಾರ ಧಾನ್ಯ	2025	2026
ಭತ್ತ	34.41	25.75
ದ್ವಿದಳ ಧಾನ್ಯ	21.46	14.92
ಎಣ್ಣೆಕಾಳು	36.41	16.99
ತೊಗರಿ	8.45	3.56
ಕಡಲೆ	15.29	8.97
ಸೋಯಾಬಿನ್	19.97	6.92
ಸಿರಿಧಾನ್ಯ	36.07	31.84
ಹತ್ತಿ	45.36	29.66
ಕಬ್ಬು	56.64	57.31
ಸೆಣಬು	6.13	6.25
ಒಟ್ಟು	236.46	182.72

ಮುಂಗಾರು ವಿಳಂಬ: ಖಾರಿಫ್ ಬಿತ್ತನೆ ಪ್ರಮಾಣ ಶೇ 23ರಷ್ಟು ಕುಸಿತ

ನವದೆಹಲಿ (ಪಿಟಿಐ): ನೈರುತ್ಯ ಮುಂಗಾರು ಪ್ರವೇಶದ ವಿಳಂಬದಿಂದಾಗಿ ದೇಶದಾದ್ಯಂತ ಕೃಷಿ ಚಟುವಟಿಕೆಗೆ ಹಿನ್ನಡೆಯಾಗಿದ್ದು, ಭತ್ತ ಸೇರಿದಂತೆ ಖಾರಿಫ್ ಬಿತ್ತನೆ ಪ್ರಮಾಣದಲ್ಲಿ ಶೇಕಡ 23ರಷ್ಟು ಕುಸಿತವಾಗಿದೆ. ದೇಶದಲ್ಲಿ ಕಳೆದ ವರ್ಷ ಒಟ್ಟಾರೆಯಾಗಿ 236.46 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದರೆ, ಈ ವರ್ಷ ಜೂನ್ 25ರವರೆಗೆ 182.72 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ ಎಂದು ಕೃಷಿ ಸಚಿವಾಲಯದ ಅಂಕಿಅಂಶಗಳಿಂದ ತಿಳಿದುಬಂದಿದೆ.

ಭತ್ತ ಮಾತ್ರವಲ್ಲದೇ, ದ್ವಿದಳ ಧಾನ್ಯ, ಎಣ್ಣೆ ಕಾಳು ಹಾಗೂ ಸಿರಿ ಧಾನ್ಯಗಳ ಬಿತ್ತನೆಯೂ ಕಳೆದ ವರ್ಷಕ್ಕೆ ಹೋಲಿಸಿದರೆ ಕಡಿಮೆ ಬಿತ್ತನೆಯಾಗಿದೆ.

ಜೂನ್ ತಿಂಗಳಲ್ಲಿ ನೈರುತ್ಯ ಮುಂಗಾರು ಆರಂಭಗೊಳ್ಳುತ್ತಿದ್ದಂತೆಯೇ, ಖಾರಿಫ್ ಬಿತ್ತನೆ ಕಾರ್ಯವು ಇಡೀ ದೇಶದಲ್ಲಿ ಆರಂಭಗೊಳ್ಳುತ್ತದೆ. ಈ ವರ್ಷ ಹಲವು ಪ್ರದೇಶಗಳಲ್ಲಿ ಇನ್ನೂ ಬಿತ್ತನೆ ನಡೆದಿಲ್ಲ.

ಇತ್ತೀಚಿನ ಅಂಕಿಅಂಶಗಳ ಪ್ರಕಾರ, ಖಾರಿಫ್‌ನಲ್ಲಿ ಪ್ರಮುಖವಾಗಿ ಬಿತ್ತನೆಯಾಗುವ ಭತ್ತದ ಪ್ರಮಾಣ ಶೇ 25.17ರಷ್ಟು ಕಡಿಮೆಯಾಗಿದೆ. ದ್ವಿದಳ ಧಾನ್ಯಗಳ ಪೈಕಿ ಶೇಕಡ 30.47ರಷ್ಟು ಇಳಿಕೆ ಕಂಡಿದೆ.

ಕಬ್ಬು, ಸೆಣಬು ಏರಿಕೆ: ಆಹಾರ ಧಾನ್ಯಗಳ ಬಿತ್ತನೆಯಲ್ಲಿ ಇಳಿಕೆ ದಾಖಲಿಸಿದ್ದರೂ ಕಬ್ಬು, ಸೆಣಬಿನ ನಾಟಿಯಲ್ಲಿ ಮಾತ್ರ ಅಲ್ಪ ಪ್ರಮಾಣದಲ್ಲಿ ಏರಿಕೆ ದಾಖಲಿಸಿದೆ.

ಖಾರಿಫ್ ಬಿತ್ತನೆ ಚುರುಕುಕೊಳ್ಳುವಲ್ಲಿ ನೈರುತ್ಯ ಮುಂಗಾರು ಪ್ರಮುಖ ಪಾತ್ರ ವಹಿಸುತ್ತದೆ. ಜೂನ್ 24ರವರೆಗೆ ಮಳೆ ಪ್ರಮಾಣದಲ್ಲಿ ಶೇಕಡ 42ರಷ್ಟು ಕುಸಿತವಾಗಿದ್ದು, ಮಧ್ಯ ಭಾರತದ ರಾಜ್ಯಗಳಲ್ಲಿ ಶೇಕಡ 59ರಷ್ಟು ಕೊರತೆಯಾಗಿದೆ. ಪೂರ್ವ, ಈಶಾನ್ಯ ರಾಜ್ಯಗಳಲ್ಲಿ ಶೇಕಡ 41ರಷ್ಟು ಕಡಿಮೆಯಾಗಿದೆ. ದಕ್ಷಿಣ ಭಾರತದ ರಾಜ್ಯಗಳಲ್ಲಿ ಶೇಕಡ 28ರಷ್ಟು ಕೊರತೆಯಾದರೆ, ವಾಯವ್ಯ ಭಾರತದಲ್ಲಿ ಶೇಕಡ 22ರಷ್ಟು ಕೊರತೆ ಉಂಟಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆಯ ಅಂಕಿಅಂಶಗಳಲ್ಲಿ ಕಂಡುಬಂದಿದೆ.

'ಮಣ್ಣಿನ ಫಲವತ್ತತೆ ಪತ್ತೆಗೆ ಆ್ಯಪ್'

ಚಂಡೀಗಢ/ರೇವಾಡಿ (ಪಿಟಿಐ): ರೈತರಿಗೆ ಮಣ್ಣಿನ ಫಲವತ್ತತೆ ತಿಳಿಯಲು ಸಹಾಯವಾಗುವಂತೆ ಸರ್ಕಾರ ಶೀಘ್ರದಲ್ಲೇ ಮೊಬೈಲ್ ಅಪ್ಲಿಕೇಶನ್ ಅನ್ನು ಬಿಡುಗಡೆಗೊಳಿಸಲಿದೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಮಂಗಳವಾರ ತಿಳಿಸಿದರು.

ಮಹಾಯುತಿ ಪರವಾಗಿ ಯುಬಿಟಿ ಸದಸ್ಯನಿಂದ ನಾಮಪತ್ರ ಸಲ್ಲಿಕೆ



ಮಹಾರಾಷ್ಟ್ರ ವಿಧಾನ ಪರಿಷತ್‌ನ ಉಪ ಸಭಾಪತಿ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ ಬಳಿಕ ಉಪಮುಖ್ಯಮಂತ್ರಿ ಏಕನಾಥ ಶಿಂದೆ ಹಾಗೂ ಶಿವಸೇನಾ ನಾಯಕ ಸಚಿನ್ ಅಹಿರ್ ಅವರು ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದರು —ಪಿಟಿಐ ಚಿತ್ರ

ಮುಂಬೈ (ಪಿಟಿಐ): ಮಹಾರಾಷ್ಟ್ರದ ವಿರೋಧ ಪಕ್ಷವಾದ ಶಿವಸೇನಾ (ಉದ್ಧವ್ ಠಾಕ್ರೆ) ಬಣದಲ್ಲಿ ಮತ್ತೆ ಬಿರುಕು ಕಾಣಿಸಿಕೊಂಡಿದೆ. ವಿಧಾನ ಪರಿಷತ್‌ನ ಉಪಸಭಾಪತಿ ಸ್ಥಾನಕ್ಕೆ ಮಹಾಯುತಿ ಒಕ್ಕೂಟದ ಪರವಾಗಿ ಶಿವಸೇನಾ ಉದ್ಧವ್ ಬಣದ ಮುಖಂಡ ಸಚಿನ್ ಅಹಿರ್ ಅವರು ಮಂಗಳವಾರ ನಾಮಪತ್ರ ಸಲ್ಲಿಸಿದ್ದಾರೆ.

ಸಚಿನ್ ಅಹಿರ್ ಅವರು ಆದಿತ್ಯ ಠಾಕ್ರೆ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿದ್ದರು. ಇತ್ತೀಚೆಗಷ್ಟೇ ಪಕ್ಷದ ಆರು ಮಂದಿ ಸಂಸದರು ಶಿಂದೆ ಬಣಕ್ಕೆ ಸೇರ್ಪಡೆಯಾದ ಬಳಿಕ, ಮತ್ತೊಬ್ಬ ನಾಯಕರು ಪಕ್ಷಾಂತರ ಮಾಡಿದ್ದಾರೆ.

ಮಹಾಯುತಿ ಮೈತ್ರಿ ಕೂಟದ ಪರವಾಗಿ ಅಹಿರ್ ಅವರು ಮಂಗಳವಾರ ನಾಮಪತ್ರ ಸಲ್ಲಿಸಿದರು. ಈ ವೇಳೆ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಉಪ ಮುಖ್ಯಮಂತ್ರಿಗಳಾದ ಏಕನಾಥ ಶಿಂದೆ, ಸುನೇತ್ರಾ ಪವಾರ್ ಕೂಡ ಹಾಜರಿದ್ದರು.

ವಿರೋಧ ಪಕ್ಷಗಳ 'ಮಹಾ ವಿಕಾಸ್ ಅಘಾಡಿ' ಮೈತ್ರಿ ಅಭ್ಯರ್ಥಿಯಾಗಿ ವಿಧಾನ ಪರಿಷತ್ ಸದಸ್ಯ ಜಗನ್ನಾಥ್ ಅಭ್ಯಂಕರ್ ಅವರನ್ನು ಕಣಕ್ಕಿಳಿಸಲಾಗುವುದು ಎಂದು ಶಿವಸೇನಾ ಮುಖಂಡ ಅಂಬಾದಾಸ್ ದಾನ್ವೆ ತಿಳಿಸಿದ್ದಾರೆ.

'ಸಚಿನ್ ಅಹಿರ್ ಅವರು ವಿಧಾನ ಪರಿಷತ್‌ನ ಹಿರಿಯ ಸದಸ್ಯರಾಗಿದ್ದು, ಮುಂಬೈ ಜನರ ಪರವಾಗಿ ನಿರಂತರ ಧ್ವನಿಯೆತ್ತಿದ್ದಾರೆ. ಅನುಭವಿ ನಾಯಕರೊಬ್ಬರು ಪಕ್ಷಕ್ಕೆ ಸೇರ್ಪಡೆಯಾಗುತ್ತಿರುವುದು ಸಂತಸ ತಂದಿದೆ. ನಾವು ಕಾನೂನಾತ್ಮಕವಾಗಿ ಎಲ್ಲ ವಿಚಾರಗಳನ್ನು ಪರಿಗಣಿಸಿ, ಈ ನಿರ್ಧಾರ ತೆಗೆದುಕೊಂಡಿದ್ದೇವೆ' ಎಂದು ಸಚಿವ ಉದಯ್ ಸಾಮಂತ್ ತಿಳಿಸಿದ್ದಾರೆ.

'ನಾವು ಈ ಹಿಂದೆಯೂ ಹಲವು ಆಘಾತಗಳನ್ನು ಎದುರಿಸಿದ್ದೇವೆ. ಆದರೆ, ಪಕ್ಷವನ್ನು ಮುಗಿಸಲು ಸಾಧ್ಯವಾಗಿಲ್ಲ. ಇದೇನೂ ದೊಡ್ಡ ಮಟ್ಟದ ಆಘಾತವಲ್ಲ' ಎಂದು ಶಿವಸೇನಾ (ಯುಬಿಟಿ) ಶಾಸಕ ಸುನಿಲ್ ರಾವುತ್ ತಿಳಿಸಿದ್ದಾರೆ.

'ಇದು ಆಪರೇಷನ್ ಟೈಗರ್ ಅಲ್ಲ, ಆಪರೇಷನ್ ದೇವೇಂದ್ರ'



ಆದಿತ್ಯ ಠಾಕ್ರೆ

ಮುಂಬೈ (ಪಿಟಿಐ): ವಿಧಾನ ಪರಿಷತ್ ಸದಸ್ಯ ಸಚಿನ್ ಅಹಿರ್ ಅವರು ಮಹಾಯುತಿಯ ಜೊತೆಗೆ ಮೈತ್ರಿ ಮಾಡಿಕೊಂಡಿರುವ ಕಾರಣ ಯಾವುದೇ ಬದಲಾವಣೆಯಾಗುವುದಿಲ್ಲ. ವಿರೋಧ ಪಕ್ಷದ ಬೇಟೆಯಾಡುತ್ತಿರುವುದು 'ಆಪರೇಷನ್ ಟೈಗರ್ ಅಲ್ಲ, ಆಪರೇಷನ್ ದೇವೇಂದ್ರ ಫಡಣವೀಸ್' ಎಂದು ಶಿವಸೇನಾ (ಯುಬಿಟಿ) ಬಣದ ಮುಖಂಡ ಆದಿತ್ಯ ಠಾಕ್ರೆ ಟೀಕಿಸಿದ್ದಾರೆ.

ಈ ಕಾರ್ಯಾಚರಣೆಯಿಂದ ಪಕ್ಷಕ್ಕೆ ಹಾನಿಯಾಗಿದೆ ಎಂದಷ್ಟೇ ಹೇಳಿದ ಅವರು, 'ಅಹಿರ್ ಅವರಿಗೆ ಪಕ್ಷ ಎಲ್ಲವನ್ನೂ ನೀಡಿತ್ತು, ಹೀಗಿದ್ದೂ ವೈಯಕ್ತಿಕ ಲಾಭಕ್ಕಾಗಿ ಪಕ್ಷ ತೊರೆದಿದ್ದಾರೆ. ಅವರ ನಡೆಯಿಂದ ವರ್ಲಿ ಹಾಗೂ ಶಿವ್ಡಿಯಲ್ಲಿ ಪಕ್ಷದ ಭದ್ರಕೋಟೆ ಮೇಲೆ ಯಾವುದೇ ಪರಿಣಾಮ ಉಂಟಾಗುವುದಿಲ್ಲ' ಎಂದರು.

2009ರಲ್ಲಿ ವರ್ಲಿ ಕ್ಷೇತ್ರದಿಂದ ಸಚಿನ್ ಅಹಿರ್ ಅವರು ಎನ್‌ಸಿಪಿ ಪಕ್ಷದಿಂದ ಶಾಸಕರಾಗಿದ್ದರು. ಕಳೆದೆರಡು ಅವಧಿಯಿಂದ ಆದಿತ್ಯ ಠಾಕ್ರೆ ಈ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ.

ಉದ್ಯೋಗ ವಾಣಿ



ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಸಾಹಿತ್ಯ ಸೃಷ್ಟಿ ಕಾರ್ಯ ಬರಿಯ ಚಕ್ಕಂದವಲ್ಲ. ಬೇಕಾದಂತೆ ಮೋಜು ಮಾಡುವ ಪ್ರವಾಸಿ ಮಂದಿರವಲ್ಲ. ಅದೊಂದು ಗರ್ಭಗುಡಿ.

ಕೆ.ಎಸ್. ನಿಸಾರ್ ಅಹಮದ್

ಸಂಪಾದಕೀಯ

ಸಂಕಷ್ಟ ಹೆಚ್ಚಿರುವ ಗ್ರಾಮ ಭಾರತಕ್ಕೆ ಬೇಕು ಹಿಂದಿದ್ದ ‘ಉದ್ಯೋಗ ಖಾತರಿ’

‘ವಿಕಸಿತ ಭಾರತ್ ಗ್ಯಾರಂಟಿ ಫಾರ್ ರೋಜ್‌ಗಾರ್ ಆ್ಯಂಡ್ ಆಜೀವಿಕ ಮಿಷನ್’ (ಗ್ರಾಮೀಣ; ವಿಬಿ-ಜಿ ರಾಮ್ ಜಿ) ಯೋಜನೆ ಜುಲೈ ಒಂದರಿಂದ ಜಾರಿಗೆ ಬರಲಿದೆ. ಗಮನಾರ್ಹ ಸಂಗತಿ ಏನೆಂದರೆ ಬಿಜೆಪಿ ನೇತೃತ್ವದ ಸರ್ಕಾರಗಳಿರುವ ರಾಜ್ಯಗಳಿಂದಲೂ ಈ ಯೋಜನೆಗೆ ಟೀಕೆ ವ್ಯಕ್ತವಾಗಿದೆ. ಯುಪಿಎ ನೇತೃತ್ವದ ಸರ್ಕಾರ ಈ ಹಿಂದೆ ಜಾರಿಗೆ ತಂದಿದ್ದ, ‘ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ’ (ಮನರೇಗಾ) ಯೋಜನೆಯು ಅನುಷ್ಠಾನದ ಹಂತದಲ್ಲಿ ಹಲವು ಸವಾಲುಗಳನ್ನು ಹೊಂದಿದ್ದರೂ ದೇಶದ ಗ್ರಾಮೀಣ ಭಾಗಗಳಲ್ಲಿ ನಿರುದ್ಯೋಗ ಸಮಸ್ಯೆಗೆ ಪರಿಹಾರವನ್ನು ಒದಗಿಸುವಲ್ಲಿ ಸಫಲವಾಗಿತ್ತು. ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಈ ಯೋಜನೆಗಿರುವ ಅಪಾರ ಮೌಲ್ಯ ಮತ್ತು ಸಾರ್ವಜನಿಕ ಬೆಂಬಲವನ್ನು ಗಮನಿಸಿ ಅದನ್ನು ಮುಂದುವರಿಸಿಕೊಂಡು ಹೋಗಲು ನಿರ್ಧರಿಸಿತ್ತು. ಆದರೆ, ಆರ್ಥಿಕ ನೆರವನ್ನು ಮಾತ್ರ ಕಡಿಮೆ ಮಾಡುತ್ತಾ ಬಂದಿತ್ತು. ಕಳೆದ ವರ್ಷ, ಉದ್ಯೋಗ ಖಾತರಿ ಯೋಜನೆಯನ್ನು ಕೂಲಂಕಷವಾಗಿ ಪರಿಷ್ಕರಿಸಿ ಅದನ್ನು ವಿಬಿ-ಜಿ ರಾಮ್ ಜಿ ಹೆಸರಿನಲ್ಲಿ ಮರುಬ್ರ್ಯಾಂಡ್ ಮಾಡಲಾಯಿತು. ಆದರೆ, ಯೋಜನೆಯ ಹೊಸ ಸ್ವರೂಪವು ಅದರ ವ್ಯಾಪ್ತಿ ಮತ್ತು ಉಪಯುಕ್ತತೆಯನ್ನು ಕುಗ್ಗಿಸಿಬಿಟ್ಟಿತು.



ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗದ ಅಭದ್ರತೆ ಹೆಚ್ಚಿದೆ. ಇದರ ನಡುವೆಯೇ ವಿಬಿ- ಜಿ ರಾಮ್ ಜಿ ಯೋಜನೆಯು ಸ್ಥಳೀಯ ಉದ್ಯೋಗದ ಅಗತ್ಯಗಳಿಗೆ ಸ್ಪಂದಿಸದಿರುವ ಅನುಮಾನ ದಟ್ಟವಾಗಿದೆ.

ಮನರೇಗಾ ಯೋಜನೆಯು ಬಹುಪಾಲು ಕೇಂದ್ರೀಯ ಅನುದಾನದಿಂದ ಅನುಷ್ಠಾನಗೊಳ್ಳುತ್ತಿತ್ತು. ಆದರೆ, ವಿಬಿ-ಜಿ ರಾಮ್ ಜಿ ಯೋಜನೆಯ ಶೇ 60ರಷ್ಟು ವೆಚ್ಚವನ್ನು ಕೇಂದ್ರ ಭರಿಸಿದರೆ, ಉಳಿದ ಶೇ 40ರಷ್ಟು ವೆಚ್ಚವನ್ನು ಆಯಾ ರಾಜ್ಯ ಸರ್ಕಾರ ಭರಿಸಬೇಕಿದೆ. ಮೊದಲೇ ಸಂಪನ್ಮೂಲ ಕೊರತೆಯಿಂದ ಬಳಲುತ್ತಿರುವ ರಾಜ್ಯಗಳ ಬಜೆಟ್‌ಗಳಿಗೆ ಇದರಿಂದ ಇನ್ನಷ್ಟು ಆರ್ಥಿಕ ಒತ್ತಡ ಬೀಳುವಂತಾಗಿದೆ. ಇದುವರೆಗೆ ಉದ್ಯೋಗಾಕಾಂಕ್ಷಿಗಳ ಹಕ್ಕು ಆಧಾರಿತವಾಗಿದ್ದ ಈ ಯೋಜನೆ, ಇನ್ನು ಮುಂದೆ ಕಾಮಗಾರಿಯ ಬೇಡಿಕೆ ಆಧಾರಿತವಾಗಿ ಅನುಷ್ಠಾನಗೊಳ್ಳಲಿದೆ. ಹೆಚ್ಚಿನ ಕೇಂದ್ರೀಕರಣ ಮತ್ತು ಷರತ್ತುಬದ್ಧವಾಗಿ ನಿಧಿ ಬಿಡುಗಡೆ, ವಿಬಿ-ಜಿ ರಾಮ್ ಜಿ ಯೋಜನೆಯ ಹೆಗ್ಗುರುತಾಗಿದೆ. ಉದ್ಯೋಗವನ್ನು ಖಾತರಿಪಡಿಸುವ ತನ್ನ ಮೂಲ ಉದ್ದೇಶದಿಂದ ಯೋಜನೆಯು ನಿರ್ಗಮಿಸಿರುವುದರ ದ್ಯೋತಕವಾಗಿಯೂ ಅದು ಗೋಚರಿಸುತ್ತದೆ. ಯೋಜನೆಯ ಹೊಸ ಸ್ವರೂಪದಲ್ಲಿ ಹೆಚ್ಚಿನ ಉದ್ಯೋಗ ದಿನಗಳನ್ನು ಸೃಜಿಸಲು ಅವಕಾಶವಿದೆ ಎಂದು ಕೇಂದ್ರ ಸರ್ಕಾರ ಹೇಳಿದರೂ, ಈ ಭರವಸೆ ಎಷ್ಟರಮಟ್ಟಿಗೆ ಈಡೇರಲಿದೆ ಎನ್ನುವುದು ಸಂದೇಹಾಸ್ಪದ. ಕೃಷಿ ಋತುವಿನಲ್ಲಿ 60 ದಿನಗಳ ವಿರಾಮದ ಷರತ್ತನ್ನು ವಿಧಿಸಿರುವುದು ಮತ್ತು ಅನುಷ್ಠಾನದ ಇತರ ಕೆಲವು ನಿರ್ಬಂಧಗಳನ್ನು ಹಾಕಿರುವುದು, ಸ್ಥಳೀಯ ಉದ್ಯೋಗದ ಅಗತ್ಯಗಳಿಗೆ ಸ್ಪಂದಿಸುವ ಯೋಜನೆಯ ಶಕ್ತಿಯನ್ನು ಕುಂದಿಸಬಹುದು. ಮಳೆ ಕೊರತೆ ಹಾಗೂ ಬರ ಪರಿಸ್ಥಿತಿಯಂತಹ ಸನ್ನಿವೇಶಗಳಲ್ಲಿ ಇಂತಹ ನಿಯಮಗಳು ಪ್ರತಿಕೂಲ ಪರಿಣಾಮ ಬೀರಲಿವೆ. ದೇಶದ ಬಹುಪಾಲು ಗ್ರಾಮೀಣ ಪ್ರದೇಶಗಳು ಆರ್ಥಿಕ ಒತ್ತಡಕ್ಕೆ ಸಿಲುಕಿದ್ದು ಉದ್ಯೋಗದ ಬೇಡಿಕೆ ಗಣನೀಯವಾಗಿ ಹೆಚ್ಚಾಗುತ್ತಿದೆ. ವಿಪರ್ಯಾಸವೆಂದರೆ, ಸಾಮಾಜಿಕ ಖಾತರಿಯಾಗಿ ಉದ್ಯೋಗ ಖಾತರಿ ಯೋಜನೆಯ ಪ್ರಸ್ತುತತೆ ಅತ್ಯಂತ ನಿರ್ಣಾಯಕವಾಗಿರುವ ಸಮಯದಲ್ಲಿ, ಯೋಜನೆಗೆ ನೀಡಲಾಗಿರುವ ಹೊಸ ಸ್ವರೂಪವು ಅದರ ಉದ್ದೇಶವನ್ನೇ ಬುಡಮೇಲು ಮಾಡುವಂತಿದೆ.

ಹಲವು ರಾಜ್ಯಗಳು, ಅದರಲ್ಲೂ ಬಿಜೆಪಿ ನೇತೃತ್ವದ ಸರ್ಕಾರಗಳಿರುವ ರಾಜ್ಯಗಳು, ಯೋಜನೆಯಲ್ಲಿರುವ ಇಂತಹ ಅಡೆತಡೆಗಳಿಗೆ ಸಂಬಂಧಿಸಿದಂತೆ ಕಳವಳ ವ್ಯಕ್ತಪಡಿಸಿವೆ. ಆರ್ಥಿಕ ನೆರವಿನ ವಿಧಾನದ ಕುರಿತು ಮರುಪರಿಶೀಲಿಸುವಂತೆ ಬಿಹಾರ, ಮಧ್ಯಪ್ರದೇಶ ಮತ್ತು ಜಾರ್ಖಂಡ್ ರಾಜ್ಯಗಳು ಕೇಂದ್ರಕ್ಕೆ ಮನವಿ ಮಾಡಿವೆ. ಸಿಕ್ಕಿಂ ಮತ್ತು ಉತ್ತರಾಖಂಡದಂತಹ ಗುಡ್ಡಗಾಡು ರಾಜ್ಯಗಳು ವೆಚ್ಚದಲ್ಲಿ ಶೇ 10ರಷ್ಟನ್ನು ಮಾತ್ರ ಭರಿಸಬೇಕಿದ್ದರೂ ಅವುಗಳು ಕೂಡ ನೆರವಿನ ವಿಧಾನದ ಕುರಿತು ಆಕ್ಷೇಪ ಎತ್ತಿವೆ. ಕೆಲವು ರಾಜ್ಯಗಳು, ವೇತನದ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಬೇಕೆಂದು ಮತ್ತು 60 ದಿನಗಳ ವಿರಾಮದ ಅವಧಿಯನ್ನು ಕೈಬಿಡಬೇಕೆಂದು ಒತ್ತಾಯಿಸಿವೆ. ವಿಬಿ-ಜಿ ರಾಮ್ ಜಿ ಯೋಜನೆಯನ್ನು ಅನುಷ್ಠಾನಗೊಳಿಸಲು ನಿರ್ಧರಿಸಿರುವ ಕರ್ನಾಟಕ ಸರ್ಕಾರ, ಮೂಲ ಯೋಜನೆಗೆ ಮಾಡಲಾಗಿರುವ ಮಾರ್ಪಾಡುಗಳ ವಿರುದ್ಧ ತೆಲಂಗಾಣ ಸರ್ಕಾರದೊಂದಿಗೆ ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಲು ನಿರ್ಧರಿಸಿದೆ. ರಾಜ್ಯಗಳ ಕಳವಳಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಕಿವಿಗೊಡಬೇಕು. ಹೊಸ ನಿಯಮಾವಳಿಯನ್ನು ಪುನರ್‌ಪರಿಶೀಲಿಸಬೇಕು. ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹಿಂದಿದ್ದ ಸ್ಥಿತಿಯನ್ನು ಮರುಸ್ಥಾಪಿಸಬೇಕು. ಗ್ರಾಮೀಣ ಸಂಕಷ್ಟ ಮತ್ತು ಉದ್ಯೋಗ ಅಭದ್ರತೆ ಆಳವಾಗುತ್ತಿರುವ ಸಮಯದಲ್ಲಿ, ನಿರ್ಣಾಯಕ ಸಾಮಾಜಿಕ ಸುರಕ್ಷತಾ ಜಾಲವನ್ನು ದುರ್ಬಲಗೊಳಿಸುವುದರಿಂದ ಲಕ್ಷಾಂತರ ಬಡ ಕಾರ್ಮಿಕರು ಸಂಕಷ್ಟ ಎದುರಿಸುವ ಅಪಾಯವಿದೆ ಎಂಬುದನ್ನೂ ಅರಿಯಬೇಕು.

ಜಾಲತಾಣ

ಪ್ರಧಾನಿ ಮೌನ ಸರಿಯೆ?



ಶಬರಿಮಲೆ ಅಯ್ಯಪ್ಪಸ್ವಾಮಿ ದೇಗುಲದಲ್ಲಿ ಚಿನ್ನ ಕದ್ದವರನ್ನು ಸುಮ್ಮನೆ ಬಿಡುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದರು. ಈಗ ಅಯೋಧ್ಯೆ ರಾಮ ಮಂದಿರದಲ್ಲಿ ಕೋಟ್ಯಂತರ ರೂಪಾಯಿ ಕಾಣಿಕೆ ಕದ್ದವರ ಬಗ್ಗೆ ಮಾತಾಡಲು ಅವರಿಗೆ ಧೈರ್ಯವಿಲ್ಲ ಏಕೆ?

ರಂಗಸ್ವಾಮಿ ಎನ್., ‘ಎಕ್ಸ್’ನಿಂದ

ಕಿಡಿನುಡಿ



ದೇಶದಾದ್ಯಂತ ನಿರೀಕ್ಷಿತ ಪ್ರಮಾಣದಲ್ಲಿ ಮುಂಗಾರು ಬಿತ್ತನೆಯಾಗಿಲ್ಲ. 300ಕ್ಕೂ ಹೆಚ್ಚು ಜಿಲ್ಲೆಗಳು ಬರದ ದವಡೆಗೆ ಸಿಲುಕುವ ಹಂತದಲ್ಲಿವೆ. ಈ ನಡುವೆಯೇ ವಿಬಿ–ಜಿ ರಾಮ್ ಜಿ ಯೋಜನೆ ಜಾರಿಯ ಮೂಲಕ ಕೇಂದ್ರ ಸರ್ಕಾರವು ಬಡವರು, ಹಿಂದುಳಿದವರು, ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರ ಉದ್ಯೋಗಕ್ಕೆ ಬರೆ ಎಳೆಯುತ್ತಿದೆ.

ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷ, ಎಐಸಿಸಿ

25 ವರ್ಷಗಳ ಹಿಂದೆ

ಭಾನುವಾರ, 1-7-2001

● **ಕರುಣಾನಿಧಿ, ಸ್ಟಾಲಿನ್, ಬಾಲು ಜೈಲಿಗೆ**

ಚೆನ್ನೈ, ಜೂನ್ 30 (ಪಿಟಿಐ, ಯುಎನ್‌ಐ)– ಮುಖ್ಯಮಂತ್ರಿ ಜಯಲಲಿತಾ ಅವರ ಪ್ರತೀಕಾರದ ರಾಜಕೀಯದಿಂದ ಇಂದು ಇಲ್ಲಿ ನಡೆದ ಬೆಳವಣಿಗೆಯಲ್ಲಿ 12 ಕೋಟಿ ರೂಪಾಯಿ ವೆಚ್ಚದ ಮೇಲುಸೇತುವೆ ಹಗರಣದ ಸಂಬಂಧ ಮಾಜಿ ಮುಖ್ಯಮಂತ್ರಿ ಎಂ. ಕರುಣಾನಿಧಿ ಬಂಧನ, ಅವರ ಪುತ್ರ ಮೇಯರ್ ಸ್ಟಾಲಿನ್ ಶರಣಾಗತಿ ಮತ್ತು ಬಂಧನ ವಿರೋಧಿಸಿದ ಕೇಂದ್ರದ ಸಚಿವರಾದ ಮುರಸೋಳಿ ಮಾರನ್ ಮತ್ತು ಟಿ.ಆರ್ ಬಾಲು ಅವರನ್ನೂ ಬಂಧಿಸಿದ ಅಪರೂಪದ ಘಟನೆಯು ಇಡೀ ರಾಷ್ಟ್ರವನ್ನೇ ತಲ್ಲಣಗೊಳಿಸಿದೆ.

● **ಹುಮನಾಬಾದ್ ಬಳಿ ಕೋಮುಗಲಭೆಗೆ ಒಬ್ಬ ಬಲಿ**

ಬೀದರ್, ಜೂನ್ 30– ವಿವಾದಿತ ನಿವೇಶನವೊಂದಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ದುಬಲಗುಂಡಿ ಗ್ರಾಮದಲ್ಲಿ ಎರಡು ಕೋಮುಗಳ ನಡುವೆ ಇಂದು ಘರ್ಷಣೆ, ಕಲ್ಲು ತೂರಾಟ ನಡೆದಾಗ ಓರ್ವ ವ್ಯಕ್ತಿ ಮೃತಪಟ್ಟಿದ್ದು, ಪಿಎಸ್‌ಐ ಸೇರಿದಂತೆ ಒಟ್ಟು 16 ಜನ ಗಾಯಗೊಂಡಿದ್ದಾರೆ. ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಹತ್ತು ಸುತ್ತು ಗಾಳಿಯಲ್ಲಿ ಗುಂಡು, ಅಶ್ರುವಾಯು ಸಿಡಿಸಿದ್ದು, ಗ್ರಾಮದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.


75 ವರ್ಷಗಳ ಹಿಂದೆ

ಭಾನುವಾರ, 1-7-1951

● **ಕೊಲಂಬೋ ಯೋಜನೆ ಇಂದಿನಿಂದ ಜಾರಿಗೆ**

ನವದೆಹಲಿ, ಜೂನ್ 30– ದಕ್ಷಿಣ ಮತ್ತು ಆಗ್ನೇಯ ಏಷ್ಯಾ ರಾಷ್ಟ್ರಗಳಲ್ಲಿ ಆರ್ಥಿಕಾಭಿವೃದ್ಧಿಯ ಬಗ್ಗೆ ರಚಿಸಲಾಗಿರುವ ಕೊಲಂಬೋ ಯೋಜನೆಯು ಜುಲೈ ಒಂದರಿಂದ ಜಾರಿಗೆ ಬರುವುದು. ಕೊಲಂಬೋ ಯೋಜನೆಗನುಗುಣವಾಗಿ ಭಾರತದ ಆರು ವರ್ಷಗಳ ಅವಧಿಯ ಅಭಿವೃದ್ಧಿ ಯೋಜನೆಗಳಿಗೆ 1,840 ಕೋಟಿ ರೂಪಾಯಿಗಳು ತಗುಲುತ್ತದೆ.

ಭಕ್ತಿ: ಶೋಷಣೆಯ ರಾಜಮಾರ್ಗ



ವಿಶ್ಲೇಷಣೆ

ಕೃಷ್ಣಮೂರ್ತಿ ಹನೂರು

> ಭಕ್ತರ ಮನಸ್ಸುಗಳನ್ನು ಹಗುರಗೊಳಿಸಬೇಕಾದ ಶ್ರದ್ಧಾಕೇಂದ್ರಗಳು ಅವರ ಮೈಮನಗಳನ್ನು ದಂಡಿಸುತ್ತಿವೆ. ಅಲ್ಲಿನ ಶ್ರೀಮಂತಿಕೆ ಜನರ ಬದುಕಿನ ಅಣಕದಂತಿದೆ ಹಾಗೂ ಈ ಕೇಂದ್ರಗಳಲ್ಲಿನ ದೈವ ದರ್ಶನಕ್ಕೆ ಭಕ್ತಿಗಿಂಥ ವ್ಯಕ್ತಿಯ ಸ್ಥಾನಮಾನವೇ ಮುಖ್ಯವಾಗಿದೆ. ಕಾಸಿನ ವ್ಯಾಪಾರದ ಭಕ್ತಿಯ ಒಳಸುಳಿಗಳು, ದೈವದ ಹೆಸರಿನ ಚಕ್ರವ್ಯೂಹಗಳಿಂದ ಜನರು ಹೊರಬರುವುದು ಯಾವಾಗ?

ಅಲ್ಲಮಪ್ರಭು ಹೇಳಿದ ‘ಭಕ್ತಿ ಎಂಬುದು ತೋರಿ ಉಂಬ ಲಾಭ’ ಎಂಬ ಮತ್ತೆ ಮತ್ತೆ ಬಳಸುವ ವಚನದ ವಾಕ್ಯದಿಂದಲೇ ಈ ಲೇಖನವನ್ನು ಆರಂಭಿಸಬೇಕಿದೆ. ದೇಶದಲ್ಲಿ ಶತಮಾನಗಳ ಶೋಷಣೆಯ ಕೇಂದ್ರಗಳೆನಿಸುವ ತಿರುಪತಿ, ಶ್ರೀಶೈಲ, ಧರ್ಮಸ್ಥಳ, ಇಂಥವುಗಳ ಸಾಲಿಗೆ ಇದೀಗ ಅಯೋಧ್ಯೆಯ ಮರ್ಯಾದಾ ಪುರುಷೋತ್ತಮ ರಾಮನ ಭವ್ಯ ದೇವಾಲಯವೂ ಸೇರಿಕೊಂಡಿದೆ.

ಕೆಲವು ವರ್ಷಗಳ ಹಿಂದಷ್ಟೇ ಆರಂಭವಾದ ಅಯೋಧ್ಯೆಯ ರಾಮನ ದೇವಾಲಯದ ಪಾರುಪತ್ಯೆಗಾರರಿಗೆ ಅಥವಾ ಧರ್ಮದರ್ಶಿಗಳಿಗೆ ಹುಂಡಿ ಹಣ ಲಪಟಾಯಿಸುವ ಅನುಭವವಿಲ್ಲವಾಗಿ, ಭಕ್ತಿಯ ಹೆಸರಿನ ಕರ್ಮಕಾಂಡ ಕೋಟಿ ಕೋಟಿ ರೂಪಾಯಿಗಳ ಲೆಕ್ಕದಲ್ಲಿ ಹೊರಬಿದ್ದಿದೆ! ಈ ಬಗೆಯ ದೈವಮೂಲದ ಶೋಷಣೆಯ ಮಾರ್ಗಗಳ ವಂಚನೆಯ ಹಿನ್ನೆಲೆಯಲ್ಲಿಯೇ ವಚನಕಾರರು, ದೈವ ಇರುವುದು ಗರ್ಭಗುಡಿಯ ಕತ್ತಲೆಯಲ್ಲಲ್ಲ, ಬಯಲ ಬೆಳಕಲ್ಲಿ ಅಥವಾ ಅರಿತು ಕಾಣುವುದಾದರೆ ನಿಮ್ಮೊಳಗೇ ಅಂದರು. ಇದನ್ನೇ ಲಾಗಾಯ್ತಿನಿಂದ ಎಲ್ಲ ಸಂತರೂ ಪುನರಾವರ್ತನೆಯಾಗಿ ಹೇಳುತ್ತಲೇ ಬಂದರು. ಆದರೆ, ಇಂಥ ಯಾವ ಹೇಳಿಕೆಗಳೂ ಭಕ್ತರೆನಿಸುವವರ ಕಿವಿಗೆ, ಮನಕ್ಕೆ ನಾಟಲಿಲ್ಲವಾಗಿ, ದೇವಾಲಯಗಳಿಗೆ ನಿರಂತರವಾಗಿ ಎಡತಾಕುತ್ತಲೇ ಕಾಲ್ತುಳಿತಕ್ಕೆ ಸಿಕ್ಕಿ ಸತ್ತು, ಹಾಗೆ ದೈವದ ನೆಲೆಯಲ್ಲಿ ಸತ್ತದ್ದೂ ಪುಣ್ಯವೇ ಎಂಬ ಅತಿರೇಕದ ಮಾತಾಡಿಕೊಳ್ಳುವ ಮುಗ್ಧ ಸಂತಾನ ಇಪ್ಪತ್ತೊಂದನೆಯ ಶತಮಾನದಲ್ಲೂ ಹೆಚ್ಚುತ್ತಲೇ ಇದೆ. ಕ್ರಿಕೆಟ್ ವೀರರನ್ನು ಕಣ್ತುಂಬಿಸಿಕೊಳ್ಳಲು ಹೋಗಿ ಸಾಯುವ ವಿದ್ಯಾವಂತ ಸಮೂಹವೂ ಇದೆಯಲ್ಲ! ನೀರಲ್ಲಿ ಮುಳುಗಲಷ್ಟೇ ಹೋಗಿ ತ್ರಿವೇಣಿ ಸಂಗಮದಲ್ಲಿ ಸತ್ತ ಶ್ರೀಸಾಮಾನ್ಯರೆಷ್ಟೋ? ಅದರ ಲೆಕ್ಕ ಗೊತ್ತಿಲ್ಲ. ಏನೇ ಆಗಲಿ, ದೈವ ಸಮೂಹ, ನಂಬಿದ ರಾಜಕಾರಣಿಗಳು ಹಾಗೂ ಕ್ರಿಕೆಟ್ ವೀರರು ಈ ಹೊತ್ತಿನ ಲೋಕ ಮಾರ್ಗದರ್ಶಿಗಳು. ಇಲ್ಲೇ ಅಲ್ಲಮನ ಇನ್ನೊಂದು ಮಾತು ‘ಜನಮರುಳೋ, ಜಾತ್ರೆ ಮರುಳೋ’ ನೆನಪಿಗೆ ಬರುತ್ತದೆ; ‘ಏನೇನೂ ಕಾಣದೆ, ಲಯಕ್ಕೊಳಗಾಗಿ ಹೋದರು ನೋಡಾ ಗುಹೇಶ್ವರಾ’ ಎಂಬ ಶಿಲಾಕ್ಷರವು ತೀರಾ ಹಗುರವೆನಿಸಿ, ಅರಿತವರ, ಅರಿಯದವರ ಐಲಾಟಗಳ ನಡುವೆ ಅದು ಗಾಳಿಗೆ ತೂರಿಹೋಗಿದೆ.


ಭಾರತೀಯ ಶ್ರೀಮಂತ ದೈವಕೇಂದ್ರಗಳ ಶೋಷಣೆಯ ಕ್ರಮ ಹೇಗೆಲ್ಲ ಇರುತ್ತದೆಂದರೆ, ಅದನ್ನು ಆಯಾ ಕ್ಷೇತ್ರಗಳಿಗೆ ಹೋಗಿಯೇ ಅರಿಯಬೇಕು. ದೇವಾಲಯದ ಸುತ್ತ ಎತ್ತರೆತ್ತರದ ಕಬ್ಬಿಣದ ಕಟಕಟೆಗಳಿರುತ್ತವೆ. ಆ ಸರಳುಗಳ ಸಾಲು ಸಾಲಿನ ನಡುವೆ ಅಲ್ಲಲ್ಲಿ ಭಕ್ತಸಮೂಹವನ್ನು ಕೂಡಿ ಹಾಕುವ ದೊಡ್ಡ ದೊಡ್ಡ ಮೈದಾನ ಮಾದರಿಯ ತೊಟ್ಟಿಗಳಿರುತ್ತವೆ. ಇಂಥ ಭಕ್ತಿಯ ಬಂಧನದಲ್ಲಿ ಮೊದಲು ಜನಸಮೂಹ ಜಮಾವಣೆಯಾಗಬೇಕು. ಒಮ್ಮೆ ಒಳಗೆ ಹೋದರೆ ಭಕ್ತರು ಹೊರಗೆ ಬರುವಂತಿಲ್ಲ. ಒಳಗೆ ಏನೇ ಆಗಲಿ, ಅದು ಅವರ ಹಣೆಬರಹ. ಇಂಥ ಸೆರೆಮನೆಗೆ ಇರುಕಿಕೊಂಡ ಕಂಕುಳ ಕೂಸಿನ ಒಬ್ಬ ಹೆಂಗಸು, ಅವಳೊಂದಿಗಿದ್ದ ವಯಸ್ಕ ಹಿರಿಯ ಹೊರಗೆ ಹೋಗಬೇಕೆಂದರೆ ಬಂದ ಬಾಗಿಲಿಗೆ ಬೀಗ ಜಡಿದಿದೆ! ತೆಗೆಯುವವನೇ ಇಲ್ಲ. ಅವನು ಇಂಥದ್ದೇ ಇನ್ನೊಂದು ತೊಟ್ಟಿಗೆ ಜನ ತುಂಬಿಸಲು ಹೋಗಿದ್ದಾನೆ. ಬಡಿದರೂ, ಬಾಯ್ಬಿಟ್ಟು ಕೂಗಿದರೂ ಕೇಳುವವರಿಲ್ಲ. ಈ ಬಗೆಯ ದೈವ ದರ್ಶನ ಸಾನ್ನಿಧ್ಯದ ವೈಪರೀತ್ಯ ದಕ್ಷಿಣ ಭಾರತದ ದೇವಾಲಯಗಳಲ್ಲಿದೆ. ಸರತಿಯ ಸಾಲು ತೊಟ್ಟಿಗಳಲ್ಲಿ ಜನ ಜಮಾಯಿಸಿರುವಲ್ಲಿ ನಾಡಿಗೂ, ದೇಶಕ್ಕೂ ದೊಡ್ಡವರೆನಿಸಿದವರು ವಿಮಾನ ಮಾರ್ಗದಲ್ಲಿ ಬಂದರಾದರೆ ಅವರದೇ ಪ್ರತ್ಯೇಕ ಪ್ರವೇಶ ಕ್ರಮ. ಅವರು ಅಂಥ ಪದವಿಗೇರಿದ್ದು ಆ ಬಗೆಯ ಭಕ್ತಿಯಿಂದಲೇ ಎಂದು ಜನ ನಂಬುತ್ತಾರೆ. ಇವರಾದ ಮೇಲೆ ಸಾವಿರಗಟ್ಟಲೆ ದುಡ್ಡು ಕೊಟ್ಟು ಟಿಕೇಟು ಖರೀದಿಸಿದವರೂ ಸುಲಭ ದರ್ಶನಕ್ಕೆ ಅರ್ಹರು. ಕಾಲು ನಡಿಗೆಯ ಸಾಲಿನಲ್ಲಿ ಬಂದು ತೊಟ್ಟಿಯಲ್ಲಿ ಕೂತವರಿಗೆ ದೈವ ‘ಬಾಗಿಲನು ತೆರೆದು ಸೇವೆಯನು ಕೊಡುವುದು’ ಯಾವಾಗಲೋ ಹೇಳುವುದು ಕಷ್ಟ. ಹೀಗೆ ಸಾಲುಸಾಲಾಗಿ, ಗುಂಪುಗುಂಪಾಗಿ ಬರುವ ಭಕ್ತರ ವಸತಿಗಾಗಿ ಸನಿಹದ ಪಟ್ಟಣಗಳಲ್ಲಿ ಅಸಂಖ್ಯಾತವಾಗಿ ಎದ್ದು ನಿಂತ ಕಟ್ಟಡಗಳ ತುದಿಯಲ್ಲಿ ‘ರೂಮ್ಸ್ ಅವೈಲಬಲ್’ ಎಂಬ ಬೋರ್ಡ್ ತಗುಲಿಸಿಕೊಂಡಿದ್ದು, ಅಂಥ ಇಡುಕಿರಿದ ಜಾಗದಲ್ಲಿ ದೇವರ ರೂಮು ಎಲ್ಲಿ ಎನ್ನಿಸುವಂತಾಗುತ್ತದೆ. ಆಯಾ ಸೀಜನ್ನಿಗೆ ತಕ್ಕಂತೆ ಯಾತ್ರಾಸ್ಥಳಗಳಲ್ಲಿ ಕಾಸಿನ ವಹಿವಾಟು ಇರುತ್ತದೆ. ಕಾಲುನಡಿಗೆಯ ಭಕ್ತರು ಅಥವಾ ಅದೇನೋ ನಂಬಿಕೆಯಿಟ್ಟು ಬರುವವರನ್ನು ಹೇಗೆ ಸತಾಯಿಸಿದರೂ ಅವರು ಅಸಮಾಧಾನದ ಸೊಲ್ಲೆತ್ತುವುದಿಲ್ಲ. ಭಕ್ತಿಯ ಗುಂಗೇ ಅಂಥದ್ದು! ಅದರ ಅಧಿಕ್ಯ ಬೇರೊಂದನ್ನು ಕುರಿತು ಯೋಚಿಸಲು ಬಿಡುವುದಿಲ್ಲ.

ಮಾದಾರ ಧೂಳಯ್ಯ, ತಾನು ಕಾಯಕದಲ್ಲಿರುತ್ತ, ಮೆಟ್ಟಿನ ಅಟ್ಟೆಯ ಚುಚ್ಚುವ ಸೂಜಿಯ ಮೊನೆಯಲ್ಲಿ ಪ್ರತ್ಯಕ್ಷನಾದ ಪರಶಿವನ ಕಂಡು, ಅಯ್ಯಾ ಪರಮಾತ್ಮನೇ, ನಿನಗೆ ಇಲ್ಲೇನು ಕೆಲಸ, ನಿನಗಾಗಿ ಕಾಯುತ್ತಿರುವ ಭಕ್ತರು ಅದೆಷ್ಟು ಜನ ಇರುವರು, ಅಲ್ಲಿಗೆ ದಯಮಾಡಿಸು ಅಂದ. ತನ್ನ ಕೇರಿಗೆ ಮೆರವಣಿಗೆಯಲ್ಲಿ ಬಂದ ಚೋಳ ಅರಸನನ್ನೂ ಶಿವನನ್ನೂ ಕಂಡು ನಾಚಿ ಸಂಕೋಚ ಬಿದ್ದ ಮಾದಾರ ಚೆನ್ನಯ್ಯ, ದೊಡ್ಡವರೆನಿಸಿಕೊಂಡವರು ಈ ಕೇರಿಗೆ ದಯಮಾಡಿಸಬಹುದೇ ಎಂದು ಎದುರು ನಿಂತ ದೈವವನ್ನೇ, ಅರಸನನ್ನೇ ಆಕ್ಷೇಪಿಸಿಬಿಟ್ಟ. ಇಂಥ ಹಲವು ಹತ್ತು ಸಂಗತಿಗಳು ನಮ್ಮ ಕಿವಿಗೆ ಶತಮಾನಗಳಿಂದ ಕೇಳುತ್ತ ಬಂದಿದ್ದರೂ ಈ ಶ್ರೀಮಂತ ದೈವಗಳ ಆಕರ್ಷಣೆ ಮಾತ್ರ ತಪ್ಪಿದ್ದಲ್ಲ. ಅವುಗಳ ಪ್ರಚಾರವೂ ಅದೇ ಬಗೆಯಲ್ಲಿರುತ್ತದೆ. ಇದು ಜಾಹೀರಾತು ಕಾಲದ ಮಹಿಮೆ.

ತಿಮ್ಮಪ್ಪ, ಮಲ್ಲಪ್ಪ, ಮಂಜಪ್ಪ, ಮಾದಪ್ಪ ಇವರು ಶತಮಾನಗಳ ಹಿಂದೆ ಬುಡಕಟ್ಟು ಮತ್ತು ಜನಪದ ಸಮೂಹದ ದೈವಗಳಾಗಿದ್ದು, ಕಾಲಾನುಕಾಲದಲ್ಲಿ ಅವು ಹೇಗೋ ಬೇರೆ ಬೇರೆ ಧಾರ್ಮಿಕ ಸಮೂಹದವರ ಕೈಗೆ ಸಿಲುಕಿ, ಬರಿದೇ ಲಿಂಗ ಸ್ವರೂಪಿಯಾದವು. ಚಿನ್ನಾಭರಣ, ವಜ್ರವೈಢೂರ್ಯಗಳನ್ನು ಧರಿಸಿಕೊಂಡವು. ಹಾಗೆಯೇ ಲೇವಾದೇವಿಗೆ ಒಳಗಾಗಿಬಿಟ್ಟವು. ಈ ಹೊತ್ತಿಗೂ ತಿರುಪತಿ ತಿಮ್ಮಪ್ಪ ತನ್ನ ಮದುವೆಗೆ ಕುಬೇರನಿಂದ ಕೊಂಡ ಸಾಲದ ಅಸಲು ಇರಲಿ, ಬಡ್ಡಿಯನ್ನೇ ಕಟ್ಟಲಾಗದೆ ಬರುವ ಭಕ್ತರ ಕಾಣಿಕೆಯನ್ನೇ ನಂಬಿ ತಲೆನೋವು ಬರಿಸಿಕೊಂಡಿದ್ದಾನಂತೆ. ಆ ನೋವು ಕಾರಣ ತಮ್ಮನಾದ ಬಿಳಿಗಿರಿ ರಂಗನಿಗೆ ಔಷಧ ತರಲು ಹೇಳಿದ. ಅವನಾದರೋ ಕರ್ನಾಟಕದ ಕಡೆ ಬಂದವನು ಬಿಳಿಕಲ್ಲು ಬೆಟ್ಟದಲ್ಲಿ ಸೋಲಿಗರ ಕುಸುಮಾಲೆಯನ್ನು ಕಂಡು ಮೋಹಿಸಿ ನೆಲೆಯಾದವನು ಅತ್ತ ತಲೆ ಹಾಕಲಿಲ್ಲ. ಅಲ್ಲಿ ತಿಮ್ಮಪ್ಪನ ಮಂಡೆಬೇನೆ, ಸಾಲಬಾಧೆ ಇನ್ನೂ ತೀರಿಲ್ಲ. ಇದೊಂದು ದಂತಕಥೆಯಾದರೆ, ಕರ್ನಾಟಕದ ಮತ್ತೊಂದು ಧಾರ್ಮಿಕ ಕೇಂದ್ರ ಎಲ್ಲೆಂದರಲ್ಲಿ ಬಡವರಿಗೆ ಸಾಲಕೊಟ್ಟು ಅಸಲು-ಬಡ್ಡಿ ವಸೂಲಿ ಮಾಡುವ ಕಾಯಕದಲ್ಲಿದೆ. ಶತಮಾನಗಳ ಹಿಂದಿನ ಜನಪದರ ಆರಾಧನೆ, ನಂಬಿಕೆಗಳ ಹಿನ್ನೆಲೆಯಲ್ಲಿ ಶ್ರೀಸಾಮಾನ್ಯರಿಗೆ ಈ ಪ್ರಸಿದ್ಧ ದೈವಗಳು ಉಚಿತ ದರ್ಶನ, ಆಶೀರ್ವಾದ ಕೊಡುತ್ತ ಬಂದಿದ್ದರ ವ್ಯವಸ್ಥೆಯೇ ಇದೀಗಲೂ ಇದ್ದಿದ್ದರೆ ವ್ಯಾಪಾರ, ಶೋಷಣೆ, ಮೂಢನಂಬಿಕೆಯ ದುರುಪಯೋಗ ಇರುತ್ತಿರಲಿಲ್ಲವೇನೊ? ಆದರೆ, ಹಾಗೇನೂ ಆಗದೆ ಕಾಸಿನ ವ್ಯಾಪಾರದ ಭಕ್ತಿ ಈಗ ಜನಸಾಮಾನ್ಯರನ್ನು ತನ್ನ ಕಾಲ್ತುಳಿತಕ್ಕೆ ಸಿಕ್ಕಿಸಿದೆ.

ಭವ್ಯದೇವಾಲಯಗಳನ್ನುಕಟ್ಟಿಸುವಶ್ರೀಮಂತರು, ರಾಜಕಾರಣಿಗಳು ಆಯಾ ಧರ್ಮಗ್ರಂಥಗಳನ್ನು ಆದ್ಯಂತವಾಗಿ ಮನನ ಮಾಡಿಕೊಂಡವರೇ ಅಂದರೆ ಅದು ಅನುಮಾನ! ಪಿತೃವಾಕ್ಯ ಪರಿಪಾಲಕ ರಾಮನು ಅರಣ್ಯಮಾರ್ಗಿಯಾಗಿರುವಲ್ಲಿ ಒಮ್ಮೆ ಲಕ್ಷ್ಮಣನೊಡನೆ, ಈ ಪ್ರಕೃತಿ ಸೌಂದರ್ಯದ ಮುಂದೆ ರಾಜ್ಯಾಧಿಕಾರವು ಅದೆಷ್ಟು ಸಾಮಾನ್ಯ ಥರವಾದುದು ಎನ್ನುತ್ತಾನೆ. ಉತ್ತರ ಕರ್ನಾಟಕದ ಪುಟ್ಟ ಗುಡಿಯೊಂದರಲ್ಲಿ ಹನುಮಂತನ ವಿಗ್ರಹದ ಮುಂದೆ ನಿಂತ ಮಹಿಳೆಯೊಬ್ಬಳು, ‘ಆಂಜನೇಯನ ಮೈಯಲ್ಲಿ ಯಾವ ಅಭರಣವೂ ಇಲ್ಲ, ಕತ್ತಿನ ಮುತ್ತಿನಹಾರ ಎಲ್ಲಿಂದ ಬಂತು’ ಅಂದದ್ದಕ್ಕೆ, ‘ಅದು ಪಟ್ಟಾಭಿಷೇಕದ ವೇಳೆ ರಾಮನು ಸೀತೆಗೆ ಉಡುಗೊರೆಯಾಗಿ ನೀಡಿದ ಸರ; ಅದನ್ನು ಅವಳು ಅಲ್ಲೇ ಆಂಜನೇಯನಿಗೆ ಕೊಟ್ಟಳಲ್ಲ’ ಅಂದಳು. ರಾಮಾಯಣದ ಈ ಪ್ರಸಂಗ ಗ್ರಾಮೀಣ ಮುಗ್ಧ ಹೆಂಗಸಿನ ಅಂತರಂಗಕ್ಕೆ ಬಂದದ್ದು ಹೇಗೆ?

ಹಿಮಾಚಲ ಪ್ರದೇಶದ ನದಿ ತೀರದ ಒಂದು ಗುಹೆಯೆಡೆಗೆ ಬಂದಿದ್ದ ನವ ವಿವಾಹಿತ ಹೆಣ್ಣುಮಗಳೊಬ್ಬಳು ವಿಗ್ರಹವೇ ಇಲ್ಲದ ಆ ಜಾಗವನ್ನು ‘ಭೀಮನ ಗುಹೆ’ ಎಂದಳು. ‘ದ್ರೌಪದಿಯನ್ನು ಭೀಮ ಅವಳ ಎಲ್ಲ ಕಷ್ಟ ಕಾಲದಲ್ಲೂ ಸಲಹಿದಂತೆ ನನ್ನನ್ನು ಈ ಗಂಡಸು ನೋಡಿಕೊಳ್ಳಲಿ ಅಂತ ಕರೆದುಕೊಂಡು ಬಂದಿದ್ದೇನೆ’ ಅಂದಳು. ಈ ಬಗೆಯ ಅರ್ಥವ್ಯಾಪ್ತಿಯ ಎಡೆಗಳು ಹಾಗಿರಲಿ, ಸರಳ ಸೆರೆಮನೆಗಳಲ್ಲಿ, ಕತ್ತಲ ಗರ್ಭಗೃಹದಲ್ಲಿ, ಚಿನ್ನಾಭರಣಗಳ ಭಾರದಲ್ಲಿ ದೈವಗಳನ್ನು ಸ್ಥಾಪಿಸಿ, ಅವು ಅಷ್ಟೈಶ್ವರ್ಯ ನೀಡುವಂಥವು ಎಂದು ಬಿಂಬಿಸಿ, ಜಾತ್ರೆಯ ಸಮೂಹವನ್ನು ಹುಚ್ಚೆಬ್ಬಿಸಿ ಆಡಿಸುವ ಕ್ರಮ, ಈ ಹೊತ್ತಿನ ಭ್ರಷ್ಟ ರಾಜಕಾರಣದ ಇನ್ನೊಂದು ಮುಖವಷ್ಟೇ. ಅಯೋಧ್ಯೆಯ ರಾಮಮಂದಿರದ ಹಣ ದುರುಪಯೋಗಕ್ಕೆ ತನಿಖಾ ತಂಡ ನೇಮಿಸಲಾಗಿದೆ. ದೇಶದ ಎಲ್ಲ ಬಗೆಯ ಭ್ರಷ್ಟಾಚಾರಕ್ಕೂ ಎಸ್‌ಐಟಿ ತನಿಖೆಯೇ ಪರಿಹಾರವೆ?



ವಾಚಕರ ವಾಣಿ

ವರ್ಗಾವಣೆ: ಅಸಮರ್ಥನೀಯ ನಡೆ ಏಕೆ?

ಶಾಲಾ ಶಿಕ್ಷಕರ ವರ್ಗಾವಣೆಯು ಅಸಾಂವಿಧಾನಿಕ ನಿಯಮಗಳಿಂದ ಕೂಡಿದೆ. ಶಿಕ್ಷಣ ಇಲಾಖೆಯೇ ಹೆಚ್ಚುವರಿ ಶಿಕ್ಷಕರು ಮತ್ತು ಪದೋನ್ನತಿ ನೀಡಿ ಶಿಕ್ಷಕರನ್ನು ಗುರ್ತಿಸಿದೆ. ಆದರೆ, ಇಚ್ಛಿಸಿದ ತಾಲ್ಲೂಕು ಸಿಗದಿದ್ದಾಗ ಬೇರೆ ತಾಲ್ಲೂಕಿಗೆ ವರ್ಗಾವಣೆ ಮಾಡಲಾಗುತ್ತಿದೆ. ಆಯಾ ಶಾಲೆಯಲ್ಲಿ ಮೂರು ವರ್ಷವಾದ ಬಳಿಕ ಶಿಕ್ಷಕರು ತಮಗೆ ಬೇಕಾದ ಶಾಲೆಗೆ ವರ್ಗಾವಣೆ ಆಗಬಹುದು. ಆದರೆ ಹೆಚ್ಚುವರಿ ಶಿಕ್ಷಕರಾಗಿದ್ದು, ಪದೋನ್ನತಿ ಹೊಂದಿದ್ದೆ ತಪ್ಪು ಎನ್ನುವಂತಾಗಿದೆ. ಬೇರೆ ತಾಲ್ಲೂಕಿಗೆ ಹೋದ ಬಳಿಕ ಮತ್ತೆ ವರ್ಗಾವಣೆಗೆ ಹತ್ತು ವರ್ಷಗಳು ಸೇವೆ ಸಲ್ಲಿಸಿರಬೇಕು ಮತ್ತು ಶೇ 25ರಷ್ಟು ಖಾಲಿ ಹುದ್ದೆಗಳು ಇರಬೇಕೆಂಬ ನಿಯಮವಿದೆ. ಶಿಕ್ಷಕರು ತಾವು ಮಾಡದಿರುವ ತಪ್ಪಿಗೆ ಶಿಕ್ಷೆ ಅನುಭವಿಸುವಂತಾಗಿದೆ. ಎರಡು ದಶಕಗಳು ಕಳೆದರೂ ಇಚ್ಛಿಸಿದ ಜಿಲ್ಲೆಗಳಿಗೆ ವರ್ಗಾವಣೆಯಾಗಲು ಆಗುತ್ತಿಲ್ಲ. ಒಂದೇ ಜಿಲ್ಲೆಯಲ್ಲಿ ಕನಿಷ್ಠ 10 ವರ್ಷ ಕರ್ತವ್ಯ ನಿರ್ವಹಿಸಿದವರಿಗೆ ಬೇರೆ ಜಿಲ್ಲೆಗಳಿಗೆ ವರ್ಗಾವಣೆಗೆ ಅವಕಾಶ ಕಲ್ಪಿಸಬೇಕಿದೆ.

ರೂಪಾ ದೊಡಮನಿ, ಕುಷ್ಟಗಿ

ಶಿಕ್ಷಕರ ನೇಮಕ: ಬಿ.ಕಾಂ ಪದವಿ ನಿರ್ಲಕ್ಷ್ಯ

2015ರಲ್ಲಿ ಸರ್ಕಾರವು ಬಿ.ಕಾಂ ಪದವೀಧರರಿಗೆ ಬಿ.ಇಡಿ ಮಾಡಲು ಅವಕಾಶ ಕಲ್ಪಿಸಿತು. ಆದರೆ, ಶಿಕ್ಷಕರ ಅರ್ಹತಾ ಪರೀಕ್ಷೆಗೆ (ಟಿಇಟಿ) ಅವಕಾಶ ನೀಡಲಿಲ್ಲ. ಹೋರಾಟದ ಫಲವಾಗಿ 2020ರಲ್ಲಿ ಟಿಇಟಿ ಬರೆಯಲು ಅವಕಾಶ ನೀಡಿತು. ಬಿ.ಕಾಂ ಮತ್ತು ಬಿ.ಇಡಿ ಕೋರ್ಸ್ ಪೂರೈಸಿರುವ ಸಾವಿರಾರು ಪದವೀಧರರು ಶಿಕ್ಷಕ ವೃತ್ತಿಗೆ ಅರ್ಹರಾಗಿದ್ದಾರೆ. ಆದರೆ, ಅವರಿಗೆ ಶಿಕ್ಷಕರ ನೇಮಕಾತಿಯಲ್ಲಿ ಅವಕಾಶ ನೀಡದೆ ವಂಚಿಸಲಾಗುತ್ತಿದೆ. ಇದಕ್ಕೆ ಪದವಿಯಲ್ಲಿ ಐಚ್ಛಿಕವಾಗಿ ಇತಿಹಾಸ, ಭೂಗೋಳ, ಅರ್ಥಶಾಸ್ತ್ರ ಅಧ್ಯಯನ ಮಾಡಿಲ್ಲವೆಂಬ ಕಾರಣ ನೀಡಲಾಗುತ್ತಿದೆ. ಬಿ.ಇಡಿ ಅಧ್ಯಯನದ ವೇಳೆ ಶಾಲೆಗಳಲ್ಲಿ ಸಮಾಜ ವಿಜ್ಞಾನ ಬೋಧಿಸಿದ್ದಾರೆ; ಈ ವಿಷಯ ಓದಿಯೇ ಟಿಇಟಿ ಉತ್ತೀರ್ಣರಾಗಿದ್ದಾರೆ. ಹಾಗಾಗಿ, ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತಂದು ಶಿಕ್ಷಕರು ಮತ್ತು ಹಾಸ್ಟೆಲ್ ವಾರ್ಡನ್‌ಗಳ ನೇಮಕಾತಿಯಲ್ಲಿ ಬಿ.ಕಾಂ ಪದವೀಧರರಿಗೆ ಅವಕಾಶ ಕಲ್ಪಿಸಬೇಕಿದೆ.

ಸಿದ್ಧಾರ್ಥ್ ಬಣಕಾರ್, ದಾವಣಗೆರೆ

ಗಿನ್ನಿಸ್ ದಾಖಲೆ ಸಾರ್ಥಕವಾದೀತೆ?

ನಾಡಪ್ರಭು ಕೆಂಪೇಗೌಡರ ಜಯಂತಿ ಅಂಗವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 15 ಲಕ್ಷ ಸಸಿಗಳನ್ನು ನೆಟ್ಟು ಗಿನ್ನಿಸ್ ದಾಖಲೆ ನಿರ್ಮಿಸಿದೆ. ಆದರೆ, ನೆಟ್ಟ ಸಸಿಗಳಲ್ಲಿ ಎಷ್ಟು ಉಳಿಯುತ್ತವೆ ಎಂಬುದೇ ಪ್ರಶ್ನೆ. ಒಂದೆಡೆ ಹೊಸದಾಗಿ ಸಸಿಗಳನ್ನು ನೆಟ್ಟರೆ, ಮತ್ತೊಂದೆಡೆ ಮನೆ, ಅಪಾರ್ಟ್‌ಮೆಂಟ್ ನಿರ್ಮಾಣ, ರಸ್ತೆ ವಿಸ್ತರಣೆಯ ನೆಪದಲ್ಲಿ ನೂರಾರು ಮರಗಳು ನೆಲಕ್ಕುರುಳುತ್ತಿವೆ. ವರ್ಷಗಳ ಕಾಲ ಬೆಳೆದು ನಿಂತು ನೆರಳಾಗಿ ತಂಪೆರೆಯುತ್ತಿರುವ ಮರಗಳ ಮಾರಣಹೋಮ ಅವ್ಯಾಹತವಾಗಿದೆ. ಹುಟ್ಟು–ಸಾವು ಜಗತ್ತಿನ ಜನಸಂಖ್ಯೆ ನಿಯಂತ್ರಣಕ್ಕೆ ಜರುಗುವ ನಿಸರ್ಗ ಕ್ರಿಯೆ ಎಂಬಂತೆ ಸಸಿಗಳನ್ನು ನೆಡುವ, ಮರಗಳನ್ನು ಕಡಿಯುವ ಕ್ರಿಯೆ ನಡೆಯುತ್ತಿದೆ. ಹೊಸದಾಗಿ ಸಸಿಗಳನ್ನು ನೆಡುವುದು ಎಷ್ಟು ಮುಖ್ಯವೋ, ಅವುಗಳ ಸಂರಕ್ಷಣೆಯೂ ಅಷ್ಟೇ ಮುಖ್ಯ.

ಎಲ್. ಚಿನ್ನಪ್ಪ, ಬೆಂಗಳೂರು

ಮಹನೀಯರ ಜಯಂತಿ: ಕಲಿಕೆಗೆ ಶೂಲ

ಶಾಲೆಗಳಲ್ಲಿ ಆಚರಿಸಬೇಕಾದ ಮಹನೀಯರ ಜನ್ಮ ದಿನಾಚರಣೆಗಳ ಪಟ್ಟಿಯು ವರ್ಷದಿಂದ ವರ್ಷಕ್ಕೆ ಬೆಳೆಯುತ್ತಲೇ ಇದೆ. ಇದು ಸಹಜವಾಗಿಯೇ ಮಕ್ಕಳ ಕಲಿಕಾ ಅವಧಿಯನ್ನು ಕಡಿಮೆಗೊಳಿಸುತ್ತದೆ. ಅಲ್ಲದೆ ಆರೋಗ್ಯ ಇಲಾಖೆ, ಸಂಘ-ಸಂಸ್ಥೆಗಳು ಮತ್ತು ಗ್ರಾಮ ಪಂಚಾಯಿತಿ ಕಾರ್ಯಕ್ರಮಗಳಿಗೂ ಶಾಲಾ ಮಕ್ಕಳನ್ನು ಊರೊಳಗೆ ಪ್ರಭಾತ್‌ಪೇರಿಗೆಂದು ಕರೆದೊಯ್ಯುತ್ತಿರುವುದು ಕಲಿಕೆಗೆ ಅಡ್ಡಿಯಾಗಿದೆ. ಮಾಹಿತಿ ತಂತ್ರಜ್ಞಾನದ ಈಗಿನ ಕಾಲದಲ್ಲೂ ಜನರಲ್ಲಿ ಜಾಗೃತಿ ಮೂಡಿಸಲು ಮಕ್ಕಳ ಪ್ರಭಾತ್‌ಪೇರಿಗಳು ಬೇಕೆ? ಈ ಬಗ್ಗೆ ಸರ್ಕಾರ ಯೋಚಿಸಲಿ.

ಅಶೋಕ ಎನ್.ಎಚ್., ಕೋಲಾರ

ಕಾಣಿಕೆ ಕಳವು: ಧರ್ಮದ ನಂಬಿಕೆಗೆ ಮಸಿ

ಅಯೋಧ್ಯೆ ರಾಮಮಂದಿರದಲ್ಲಿನ ಕಾಣಿಕೆ ಕಳವು ಪ್ರಕರಣದಲ್ಲಿ ಎಂಟು ಆರೋಪಿಗಳ ಬಂಧನವಾಗಿದೆ. ಈ ಪ್ರಕರಣವು ಧರ್ಮ ಮತ್ತು ದೈವದ ಮೇಲಿನ ನಂಬಿಕೆಗೆ ದೊಡ್ಡ ಪೆಟ್ಟು ನೀಡಿದೆ. ಕಳ್ಳರು ದೈವ ಸನ್ನಿಧಿಯಲ್ಲೇ ಇದ್ದರೂ ಇಷ್ಟು ದಿನಗಳವರೆಗೂ ಈ ಪ್ರಕರಣ ಬೆಳಕಿಗೆ ಬಾರದೆ ಇರುವುದು ಸೋಜಿಗವೇ ಸರಿ. ಮನುಷ್ಯ ರಲ್ಲಿ ಹಣದ ವ್ಯಾಮೋಹ ಮೇಲುಗೈ ಸಾಧಿಸುತ್ತದೆ ಎಂಬುದಕ್ಕೆ ಈ ಪ್ರಕರಣ ನಿದರ್ಶನ. ನೈತಿಕ ಬದ್ಧತೆ ಇಲ್ಲದಿದ್ದರೆ ಯಾವುದೇ ದೈವದ ಮೇಲಿನ ನಂಬಿಕೆ ಹುಸಿಯಾಗಲಿದೆ.

ಎಚ್. ಲತಾ, ಬೆಂಗಳೂರು

ಫಿಫಾಗೆ ಅಂಟಿದ ವರ್ಣಭೇದದ ಮೈಲಿಗೆ

‘ವೋಜಿನಾ: ಪುಟ್ಟ ದೇಶದ ದಿಟ್ಟ ತಾರೆ’ ಲೇಖನ (ಲೇ: ಗಿರೀಶ ದೊಡ್ಡಮನಿ, ಪ್ರ.ವಾ., ಜೂನ್ 30) ಸಕಾಲಿಕ ಬರಹ. ಫಿಫಾ ವಿಶ್ವಕಪ್ ಫುಟ್‌ಬಾಲ್‌ಗೂ ಜನಾಂಗೀಯ ತಾರತಮ್ಯದ ಮೈಲಿಗೆ ಅಂಟಿರುವುದು ದುರದೃಷ್ಟಕರ. ಮಾರ್ಟಿನ್ ಲೂಥರ್ ಕಿಂಗ್, ನೆಲ್ಸನ್ ಮಂಡೇಲಾ ಮುಂತಾದ ಮಹಾನ್ ನಾಯಕರು ಜಗತ್ತಿನಲ್ಲಿ ವರ್ಣಭೇದ ನೀತಿಯ ವಿರುದ್ಧ ಹೋರಾಡಿ ಸಮಾನತೆ ಸಾರಿದ್ದಾರೆ. ಫುಟ್‌ಬಾಲ್ ಅಂಗಳದಲ್ಲಿ ಅಮೋಘ ಸಾಧನೆ ಮಾಡಿದ ಕಪ್ಪುವರ್ಣೀಯರ ಪಟ್ಟಿಗೆ ಪುಟ್ಟ ದೇಶ ಕೇಪ್ ವರ್ಡ್‌ನ ವೋಜಿನಾ ಅವರ ಸಾಧನೆಯು ಸೇರಿರುವುದು ಹೆಮ್ಮೆಯ ಸಂಗತಿ. ಜಗತ್ತಿನಾದ್ಯಂತ ಜನಾಂಗೀಯ ತಾರತಮ್ಯದ ವಿರುದ್ಧ ಹೋರಾಟ ನಿರಂತರವಾಗಿರುವ ಕಹಿಸತ್ಯ ಎಲ್ಲರಿಗೂ ತಿಳಿದಿದೆ. ಮಾನವೀಯತೆಯ ಅಂಶಗಳಾದ ದಯೆ, ಕರುಣೆ ಸಾಕಾರಗೊಂಡಾಗಷ್ಟೆ ಇದರ ನಿರ್ಮೂಲನೆ ಸಾಧ್ಯ.

ಎಲ್.ಪಿ. ಕುಲಕರ್ಣಿ, ಹಿರೇಮಗಳೂರು

ಚುರುಮುರಿ



ಎಸ್‌ಐಆರ್ ಸಂಭ್ರಮ

● ಮಣ್ಣೆ ರಾಜು

‘ಮತದಾರರ ಪಟ್ಟಿ ಪರಿಷ್ಕರಣೆಗೆಂದು ಬಿಎಲ್‌ಒಗಳು ಮನೆಗೆ ಬರ್ತಾರೆ, ಬಾಗಿಲು ತೆರೆದುಕೊಂಡೇ ಇರು. ಇಲ್ಲಾಂದ್ರೆ ‘ಡೋರ್ ಲಾಕ್’ ಎಂದುಕೊಂಡು ಮುಂದಿನ ಮನೆಗೆ ಹೋಗಿಬಿಡಬಹುದು’ ಹೆಂಡ್ತಿಗೆ ಹೇಳಿದ ಶಂಕ್ರಿ.

‘ಆಗಲಿರೀ, ಮತಪಟ್ಟಿಯಲ್ಲಿ ಹೆಸರು ಸೇರದಿದ್ದರೆ ಸರ್ಕಾರಿ ಸೌಕರ್ಯಗಳು ಕಟ್ ಆಗ್ತವೆ ಅಂತ ರಾಜಕೀಯದವರು ಹೆದರಿಸ್ತಿದ್ದಾರಲ್ರೀ!’ ಅಂದಳು ಸುಮಿ.

‘ನಾವು ಹೆದರಬಾರದು. ಮನೆಗೆ ಬರುವ ಅಧಿಕಾರಿಗಳನ್ನು ಅತಿಥಿಗಳಂತೆ ಆಧರಿಸಿ ತಿಂಡಿ-ಊಟ ಮಾಡಿ ಅಂತ ಹೇಳು, ಬೇಡ ಎಂದರೆ ಕಾಫಿನಾದ್ರೂ ಕೊಡು’.

‘ಚಿತ್ರಾನ್ನ ಮಾಡಿದ್ದೀನಿ ಕೊಡ್ತೀನಿ... ಮನೇಲಿ ಇರುವ ತಿಂಡಿ ಕೊಡಬಹುದು, ನಮ್ಮಲ್ಲಿ ಇಲ್ಲದ ದಾಖಲೆಗಳನ್ನು ಕೇಳಿದರೆ ಎಲ್ಲಿಂದ ತಂದುಕೊಡೋದು?!’

‘ಅವರು ಕೇಳಬಹುದಾದ ಎಲ್ಲಾ ದಾಖಲಾತಿಗಳನ್ನು ಸಿದ್ಧಮಾಡಿಟ್ಟಿದ್ದೀನಿ. ಅದರ ಜೊತೆ ನಿನ್ನ ಇತ್ತೀಚಿನ ಕಲರ್ ಫೋಟೊ ಕೊಡು’.

‘ಈಗಿನ ಫೋಟೊ ಚೆನ್ನಾಗಿಲ್ಲಾರೀ, ಮದ್ವೆ ಫೋಟೊ ಕೊಡಲಾ, ಅದರಲ್ಲಿ ಚೆನ್ನಾಗಿ ಕಾಣ್ತೀನಿ’.

‘ಅಧಿಕಾರಿಗಳು ನಿನ್ನ ಅಂದಚೆಂದ ನೋಡಲು ಬರುವುದಿಲ್ಲ, ಇತ್ತೀಚಿನ ಫೋಟೊನೇ ಕೊಡಬೇಕು, ತಗೋ ನನ್ನ ಫೋಟೊನೂ ಕೊಡು’ ಶಂಕ್ರಿ ಫೋಟೊ ಕೊಟ್ಟ.

‘ನಿಮ್ಮ ಫೋಟೊ ಚೆನ್ನಾಗಿಲ್ಲಾರೀ, ತಲೆ ತುಂಬಾ ಬಿಳಿ ಕೂದಲು. ನಿಮ್ಮ ವಯಸ್ಸಿಗೂ ಈ ಫೋಟೊ ಹೊಂದಾಣಿಕೆ ಆಗೋದಿಲ್ಲ ಅಂತ ಅಧಿಕಾರಿಗಳು ರಿಜೆಕ್ಟ್ ಮಾಡಿಬಿಟ್ರೆ? ಹೇರ್ ಡೈ ಹಚ್ಚಿಕೊಂಡು ಹೊಸದಾಗಿ ಫೋಟೊ ತೆಗೆಸಿಕೊಂಡು ಬನ್ನಿ’.

ಅಷ್ಟರಲ್ಲಿ ಕಾರ್ಯಕರ್ತರ ಗುಂಪು ಬಂದು, ‘ಸಾರ್, ಎಸ್‌ಐಆರ್ ಬಗ್ಗೆ ಜಾಗೃತಿ ಮೂಡಿಸಲು ಬಂದಿದ್ದೇವೆ’ ಎಂದು ಕರಪತ್ರ ಕೊಟ್ಟರು.

‘ನಾವು ಜಾಗೃತರಾಗಿದ್ದೇವೆ’ ಅಂದ ಶಂಕ್ರಿ.

‘ಎಸ್‌ಐಆರ್ ಬಗ್ಗೆ ಗೊಂದಲಗಳಿದ್ದರೆ ನಿವಾರಿಸುತ್ತೇವೆ... ಇನ್ನೊಂದು ವಿಚಾರ ಸಾರ್, ಮುಂದಿನ ಚುನಾವಣೆಯಲ್ಲೂ ನಮ್ಮ ಶಾಸಕರು ಸ್ಪರ್ಧಿಸುತ್ತಾರೆ, ದಯವಿಟ್ಟು ಅವರಿಗೇ ನಿಮ್ಮ ಮತ ನೀಡಬೇಕು...’ ಎಂದು ಕೈ ಮುಗಿದು ಹೊರಟರು.

ಸಂಗತ

ವೈದ್ಯಕೀಯ ಕ್ಷೇತ್ರಕ್ಕೆ ಬೇಕು ‘ಜ್ಞಾನ’ದ ಬಲ

ಚಿಕಿತ್ಸೆಯ ಜೊತೆಗೆ ಜ್ಞಾನಸೃಷ್ಟಿ ವೈದ್ಯಕೀಯ ಕ್ಷೇತ್ರದ ಆದ್ಯತೆಯಾಗಬೇಕು. ವೈದ್ಯರ ಅನುಭವಗಳು ಪ್ರಕಟಗೊಳ್ಳುವುದು, ಸಂಶೋಧನೆಗಳು ವ್ಯಾಪಕವಾಗಬೇಕು.


● ಡಾ. ಸುಶ್ರುತ ಗೌಡ

‘ಬ್ರಿಟಿಷ್ ಮೆಡಿಕಲ್ ಜರ್ನಲ್’ನಲ್ಲಿ ‘ಜರ್ನಲ್ ಆಫ್ ಮೆಡಿಕಲ್ ಎವಿಡೆನ್ಸ್’ ಪ್ರಕಟಿಸಿದ ಇತ್ತೀಚಿನ ಅಧ್ಯಯನವೊಂದು ಭಾರತದ ಆರೋಗ್ಯ ವ್ಯವಸ್ಥೆಯ ಬಗ್ಗೆ ಗಂಭೀರ ಸಂಗತಿಯೊಂದನ್ನು ಬೆಳಕಿಗೆ ತಂದಿದೆ. 2021ರಿಂದ 2025ರವರೆಗಿನ ದತ್ತಾಂಶದ ವಿಶ್ಲೇಷಣೆಯ ಪ್ರಕಾರ, ದೇಶದಲ್ಲಿ ಸುಮಾರು ಶೇ 60ರಷ್ಟು ರೋಗಿಗಳು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆದರೆ, ಆ ಆಸ್ಪತ್ರೆಗಳ ವೈದ್ಯರಿಂದ ಪ್ರಕಟವಾಗುವ ಸಂಶೋಧನಾ ಪ್ರಬಂಧಗಳ ಸಂಖ್ಯೆ ವರ್ಷಕ್ಕೆ ಸರಾಸರಿ ಹತ್ತಕ್ಕೂ ಕಡಿಮೆ. ಅಂದರೆ, ಪ್ರತಿದಿನ ಲಕ್ಷಾಂತರ ರೋಗಿಗಳಿಗೆ ಚಿಕಿತ್ಸೆ ನೀಡುವ ವೈದ್ಯರ ಅಮೂಲ್ಯ ಅನುಭವವು ವೈಜ್ಞಾನಿಕ ಜ್ಞಾನವಾಗಿ ರೂಪುಗೊಳ್ಳುತ್ತಿಲ್ಲ; ಅನುಭವದ ಲಾಭ ಇತರ ವೈದ್ಯರಿಗೆ–ರೋಗಿಗಳಿಗೆ ದೊರಕುತ್ತಿಲ್ಲ. ಇದು ಬರೀ ಅಂಕಿ–ಅಂಶವಲ್ಲ; ಭಾರತೀಯ ಆರೋಗ್ಯ ವ್ಯವಸ್ಥೆಯ ಒಂದು ಮೂಲಭೂತ ದೌರ್ಬಲ್ಯದ ಸಂಕೇತ. ಇದಕ್ಕಾಗಿ ನಾವು ತೆರುತ್ತಿರುವ ‘ಬೆಲೆ’ ದೊಡ್ಡದು.

ನಮ್ಮ ದೇಶದ ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ವ್ಯವಸ್ಥೆಯು ಅತ್ಯಂತ ಸಂಕೀರ್ಣವಾದುದು. ನಮ್ಮಲ್ಲಿ ವಿಶ್ವ ಮಟ್ಟದ ವೈದ್ಯರು ಮತ್ತು ನಾನಾ ಬಗೆಯ ರೋಗಿಗಳು ಸಿಗುತ್ತಾರೆ. ಈ ವ್ಯವಸ್ಥೆ ಬಳಸಿಕೊಂಡು, ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿದರೆ, ವಿಶ್ವದಲ್ಲಿಯೇ ಬಲಿಷ್ಠ ವೈದ್ಯಕೀಯ ಸಂಶೋಧನಾ ವ್ಯವಸ್ಥೆಯನ್ನು ನಿರ್ಮಿಸುವ ಸಾಮರ್ಥ್ಯ ನಮ್ಮಲ್ಲಿದೆ. ಆದರೆ, ನಾವು ಇನ್ನೂ ಹೊಸ ವೈದ್ಯಕೀಯ ಜ್ಞಾನವನ್ನು ಸೃಷ್ಟಿಸುವ ರಾಷ್ಟ್ರವಾಗದೆ, ಇತರ ದೇಶಗಳಲ್ಲಿ ನಡೆದ ಸಂಶೋಧನೆಗಳನ್ನು ಅನುಸರಿಸುವ ದೇಶವಾಗಿಯೇ ಉಳಿದಿದ್ದೇವೆ.

ವಿಶ್ವಕ್ಕೆ ಆಯುರ್ವೇದ, ಯೋಗದಂತಹ ಆರೋಗ್ಯಸೂತ್ರಗಳನ್ನು ನೀಡಿದ ನಮ್ಮ ದೇಶ ವೈದ್ಯಕೀಯ ಸಂಶೋಧನೆಯಲ್ಲಿ ಏಕೆ ಹಿಂದಿದೆ ಎನ್ನುವುದಕ್ಕೆ ಕಾರಣ ಹುಡುಕಲು ಯಾವುದೇ ಸ್ಕ್ಯಾನಿಂಗ್ ಅಥವಾ ಬಯಾಪ್ಸಿಯ ಅಗತ್ಯವಿಲ್ಲ! ಆ ಕಾರಣ, ಅಂಗೈ ಮೇಲಿನ ಹುಣ್ಣಿನಂತಿದೆ.

ನಮ್ಮ ಆಸ್ಪತ್ರೆಗಳಲ್ಲಿ ಸಂಶೋಧನೆಗಳು ಕಡಿಮೆ ಪ್ರಮಾಣದಲ್ಲಿ ಏಕೆ ನಡೆಯುತ್ತಿವೆ? ನಮ್ಮ ವೈದ್ಯರ ಜ್ಞಾನ ಉಳಿದವರಿಗೆ ಏಕೆ ತಲಪುತ್ತಿಲ್ಲ? ಇದಕ್ಕೆ ಬಹುಮುಖ್ಯ ಕಾರಣ, ನಮ್ಮ ವೈದ್ಯಕೀಯ ಶಿಕ್ಷಣದ ಸ್ವರೂಪ. ಅಮೆರಿಕ ಮತ್ತು ಯುರೋಪಿನ ಅನೇಕ ವೈದ್ಯಕೀಯ ಕಾಲೇಜುಗಳಲ್ಲಿ ಕೋರ್ಸ್‌ನ ಮೊದಲ ದಿನದಿಂದಲೇ ಸಂಶೋಧನೆ, ಸಾಕ್ಷ್ಯಾಧಾರಿತ ವೈದ್ಯಕೀಯ, ದತ್ತಾಂಶ ವಿಶ್ಲೇಷಣೆ ಹಾಗೂ ವೈಜ್ಞಾನಿಕ ಚಿಂತನೆಗೆ ಆದ್ಯತೆ ನೀಡಲಾಗುತ್ತದೆ. ಭಾರತದಲ್ಲಿ ಮಾತ್ರ ಇನ್ನೂ ಪಠ್ಯವನ್ನು ನೆನಪಿಟ್ಟುಕೊಳ್ಳುವ ಶಿಕ್ಷಣ ಪದ್ಧತಿಗೆ ಒತ್ತು ನೀಡಲಾಗುತ್ತಿದೆ. ಪರಿಣಾಮವಾಗಿ, ನಾವು ಉತ್ತಮ ವೈದ್ಯರನ್ನು ರೂಪಿಸುತ್ತೇವೆ; ಆದರೆ, ವೈದ್ಯ–ಸಂಶೋಧಕರನ್ನು ರೂಪಿಸುವಲ್ಲಿ ವಿಫಲರಾಗಿದ್ದೇವೆ.



ಇಂದು ಗುಣಮಟ್ಟದ ಸಂಶೋಧನೆಗಳು ಹೆಚ್ಚಾಗಿ ‘ಏಐಐಎಂಎಸ್’, ‘ಜೆಐಪಿಎಂಇಆರ್’, ‘ಸಿಎಂಸಿ ವೆಲ್ಲೂರು’ ಮತ್ತಿತರ ಕೆಲವೇ ಪ್ರತಿಷ್ಠಿತ ಸಂಸ್ಥೆಗಳಿಗೆ ಸೀಮಿತವಾಗಿವೆ. ಖಾಸಗಿ ಆಸ್ಪತ್ರೆಗಳು ಮತ್ತು ಬಹುತೇಕ ವೈದ್ಯಕೀಯ ಕಾಲೇಜುಗಳಲ್ಲಿ ಸಂಶೋಧನೆಗೆ ಅಗತ್ಯವಾದ ಧನ ಸಹಾಯ, ಮೂಲಸೌಕರ್ಯ, ಜೈವಿಕ ಸಂಖ್ಯಾಶಾಸ್ತ್ರಜ್ಞರು, ಸಂಶೋಧನಾ ಸಂಯೋಜಕರ ಕೊರತೆಯಿದೆ; ಸಮಯದ ಕೊರತೆಯೂ ದೊಡ್ಡ ಅಡ್ಡಿಯಾಗಿದೆ.

ವೈದ್ಯರು ಎದುರಿಸುತ್ತಿರುವ ಇನ್ನೊಂದು ಪ್ರಮುಖ ಸಮಸ್ಯೆ, ಪ್ರೋತ್ಸಾಹದ ಕೊರತೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ವೈದ್ಯರ ಬಡ್ತಿ, ನಾಯಕತ್ವದ ಹುದ್ದೆಗಳು ಮತ್ತು ಶೈಕ್ಷಣಿಕ ಬೆಳವಣಿಗೆಗೆ ಸಂಶೋಧನಾ ಕೊಡುಗೆಗಳು ಪ್ರಮುಖ ಮಾನದಂಡವಾಗಿರುತ್ತವೆ. ಭಾರತದಲ್ಲಿ ಮಾತ್ರ ವೈದ್ಯರು ನೋಡಿದ ರೋಗಿಗಳ ಸಂಖ್ಯೆಗೆ ಹೆಚ್ಚು ಮೌಲ್ಯ ಸಿಗುತ್ತದೆ; ಹೊಸ ಜ್ಞಾನ ಸೃಷ್ಟಿಸಿದ ವೈದ್ಯರಿಗೆ ಅಲ್ಲ. ಹೀಗಾಗಿ ಸಂಶೋಧನೆಯು ವೈದ್ಯರ ದಿನನಿತ್ಯದ ಕಾರ್ಯಸಂಸ್ಕೃತಿಯ ಭಾಗವಾಗುವುದೇ ಇಲ್ಲ.

ಪ್ರಕಟಣೆಗಳ ಸಂಖ್ಯೆಯನ್ನು ಹೆಚ್ಚಿಸುವುದರಿಂದಷ್ಟೇ ಪ್ರಯೋಜನ ಇಲ್ಲ. ನಮ್ಮ ದೇಶದ ಜನರನ್ನು ಹೆಚ್ಚು ಬಾಧಿಸುವ ಪಾರ್ಶ್ವವಾಯು, ಹೃದಯರೋಗ, ಕ್ಯಾನ್ಸರ್, ಮಧುಮೇಹ, ಸಾಂಕ್ರಾಮಿಕ ರೋಗಗಳು ಮತ್ತು ಗ್ರಾಮೀಣ ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ನೀಡುವ ಗುಣಮಟ್ಟದ ಸಂಶೋಧನೆಗಳ ಅಗತ್ಯವಿದೆ. ವೈದ್ಯಕೀಯ ಜ್ಞಾನವು ನಿರಂತರವಾಗಿ ಬದಲಾಗುತ್ತಿರುವ ಹಿನ್ನೆಲೆಯಲ್ಲಿ, ವೈದ್ಯರಿಗೆ ನಿರ್ದಿಷ್ಟ ಅವಧಿಗೊಮ್ಮೆ ಕಡ್ಡಾಯ ಮರುಪ್ರಮಾಣೀಕರಣ ಮತ್ತು ನಿರಂತರ ವೈದ್ಯಕೀಯ ಶಿಕ್ಷಣವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಅಗತ್ಯ ಇದೆ.

ಸಂಶೋಧನಾ ಚಟುವಟಿಕೆಗಳಿಗೆ ಸರ್ಕಾರ ಭಾರೀ ಬಂಡವಾಳ ಹೂಡಿಕೆ ಮಾಡಬೇಕೆಂದಿಲ್ಲ. ವೈದ್ಯಕೀಯ ಶಿಕ್ಷಣದಲ್ಲಿ ಸಂಶೋಧನೆಗೆ ಹೆಚ್ಚಿನ ಒತ್ತು, ಖಾಸಗಿ ಆಸ್ಪತ್ರೆಗಳಲ್ಲಿ ಸಂಶೋಧನಾ ಘಟಕಗಳಿಗೆ ಪ್ರೋತ್ಸಾಹ, ಸಂಶೋಧನೆಗೆ ತೆರಿಗೆ ಕಡಿತದ ಸೌಲಭ್ಯ, ವೈದ್ಯರಿಗೆ ಸಂರಕ್ಷಿತ ಸಂಶೋಧನಾ ಸಮಯ, ರಾಷ್ಟ್ರೀಯಮಟ್ಟದ ಬಹುಕೇಂದ್ರ (ಮಲ್ಟಿ ಸೆಂಟರ್) ಅಧ್ಯಯನಗಳಿಗೆ ಉತ್ತೇಜನ ಮತ್ತು ಗುಣಮಟ್ಟದ ಸಂಶೋಧನೆಗೆ ವೃತ್ತಿಜೀವನದಲ್ಲಿ ಮೌಲ್ಯ ನೀಡುವ ನೀತಿಗಳು ಸಾಕು.

ಭಾರತವು ವೈದ್ಯಕೀಯ ಜ್ಞಾನವನ್ನು ಬಳಸುವ ರಾಷ್ಟ್ರ ಮಾತ್ರವಾಗದೆ, ಹೊಸ ಜ್ಞಾನವನ್ನು ಸೃಷ್ಟಿಸುವ ಜಾಗತಿಕ ನಾಯಕನಾಗಬೇಕಿದೆ. ಇದಕ್ಕಾಗಿ ಸಂಶೋಧನೆಯನ್ನು ನಿಯಮ ಮಾತ್ರವಾಗಿಸದೆ, ವೈದ್ಯಕೀಯ ಸಂಸ್ಕೃತಿಯನ್ನಾಗಿ ರೂಪಿಸಬೇಕಾಗಿದೆ. ಅದಕ್ಕೆ ಬೇಕಾಗಿರುವುದು ಅಪಾರ ಸಂಪನ್ಮೂಲಗಳಲ್ಲ; ದೂರದೃಷ್ಟಿಯ ನೀತಿ, ದೃಢ ಇಚ್ಛಾಶಕ್ತಿ ಮತ್ತು ಸಂಶೋಧನೆಗೆ ಗೌರವ ನೀಡುವ ಆರೋಗ್ಯ ವ್ಯವಸ್ಥೆ.

ಲೇಖಕ: ನರರೋಗ ತಜ್ಞ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಅಡಿಕೆಗೆ ಬಣ್ಣದ ಕಳಂಕ

ಪ್ರಜಾವಾಣಿ ವಾರ್ತೆ

ಉತ್ತರ ಕನ್ನಡ, ಶಿವಮೊಗ್ಗ, ದಕ್ಷಿಣ ಕನ್ನಡ ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಮಹಾರಾಷ್ಟ್ರದ ಮೂಲಕ ಉತ್ತರ ಭಾರತದ ವಿವಿಧ ರಾಜ್ಯಗಳಿಗೆ ಹೊರಟಿದ್ದ ಅಡಿಕೆ ತುಂಬಿದ 50ಕ್ಕೂ ಹೆಚ್ಚು ಲಾರಿಗಳನ್ನು ಮಹಾರಾಷ್ಟ್ರದ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ 'ತಪಾಸಣೆ'ಯ ನೆಪದಲ್ಲಿ ಮೂರು ವಾರಗಳಿಂದ ತಡೆ ಹಿಡಿದಿರುವುದು ರಾಜ್ಯದ ವಿವಿಧ ಅಡಿಕೆ ಮಾರುಕಟ್ಟೆಗಳಲ್ಲಿ ತಲ್ಲಣ ಸೃಷ್ಟಿಸಿದೆ.

ಉತ್ತರ ಪ್ರದೇಶದ ಕಾನ್ಪುರ, ರಾಜಸ್ಥಾನದ ಜೈಪುರ, ಗುಜರಾತ್, ದೆಹಲಿಗೆ ಸಾಗಿಸುತ್ತಿದ್ದ ಅಡಿಕೆಯನ್ನು ಮಹಾರಾಷ್ಟ್ರದ ಸೊಲ್ಲಾಪುರ, ಔರಂಗಾಬಾದ್, ಬೀಡ್ ಹಾಗೂ ನಾಂದೇಡ್‌ನ ಹೆದ್ದಾರಿಗಳಲ್ಲಿ ಜೂನ್ 11ರಿಂದಲೇ ತಡೆಯಲಾಗುತ್ತಿದ್ದು, ಈವರೆಗೆ ಒಂದು ಲಾರಿಗೂ ಸಂಚಾರಕ್ಕೆ ಅನುಮತಿ ನೀಡಿಲ್ಲ. ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಲಾರಿಗಳ ಸಂಚಾರಕ್ಕೆ ಅವಕಾಶ ನೀಡುವಂತೆ ಮೌಖಿಕವಾಗಿ ಹೇಳಿದ್ದಾರೆ ಎನ್ನಲಾಗುತ್ತಿದ್ದು, ಅಧಿಕಾರಿಗಳು ಲಿಖಿತ ಆದೇಶವಿದ್ದರಷ್ಟೇ ಲಾರಿ ಬಿಡುವುದಾಗಿ ಹೇಳುತ್ತಿದ್ದಾರೆ ಎನ್ನಲಾಗಿದೆ.

ಇದರಿಂದಾಗಿ ಅಡಿಕೆಯು ನಿಗದಿತ ಜಾಗವನ್ನು ಇನ್ನೂ ತಲುಪದೆ ಇರುವುದರಿಂದ ವರ್ತಕರು ಖರೀದಿಗೆ ಮುಂದಾಗುತ್ತಿಲ್ಲ. ಬೇಡಿಕೆ ಕಡಿಮೆಯಾಗುತ್ತಿರುವುದರಿಂದ ಧಾರಣೆ ಇಳಿಕೆಯಾಗುತ್ತಿದೆ. ಇದು ಬೆಳೆಗಾರರಲ್ಲಿ ಆತಂಕ ಸೃಷ್ಟಿಸಿದೆ. ಈಗಾಗಲೇ ಖರೀದಿಸಿರುವ ಅಡಿಕೆ ವಿಲೇವಾರಿ ಆಗದಿರುವುದರಿಂದ ಅಡಿಕೆ ಬೆಳೆಗಾರರ ಸಹಕಾರ ಸಂಘಗಳು, ವ್ಯಾಪಾರಿಗಳು ನಷ್ಟದ ಭೀತಿಯನ್ನೂ ಎದುರಿಸುತ್ತಿದ್ದಾರೆ.

ತಪಾಸಣೆ, ಮಾದರಿ ಸಂಗ್ರಹ: ಲಾರಿಗಳನ್ನು ತಡೆಯುತ್ತಿರುವ ಅಧಿಕಾರಿಗಳು ಗುಣಮಟ್ಟದ ತಪಾಸಣೆ ನಡೆಸಬೇಕಾಗಿದೆ ಎಂದು ಹೇಳುತ್ತಾರೆ. ಅಡಿಕೆಯ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸುತ್ತಿದ್ದಾರೆ. ಪರೀಕ್ಷೆಯ ವರದಿ ಬರಲು 14 ದಿನಗಳು ಬೇಕಾಗುತ್ತವೆ ಎಂದು ಹೇಳುತ್ತಿರುವ ಅಧಿಕಾರಿಗಳು, ವರದಿ ಬರುವವರೆಗೂ ಲಾರಿ ಸಂಚರಿಸುವುದಕ್ಕೆ ತಡೆ ಒಡ್ಡುತ್ತಿದ್ದಾರೆ ಎಂದು ಲಾರಿ ಚಾಲಕರು ಮಾಹಿತಿ ನೀಡಿದ್ದಾರೆ.



ಶಿರಸಿಯ ಅಡಿಕೆ ಮಾರುಕಟ್ಟೆ

ಉತ್ತರ ಕನ್ನಡ, ಮಲೆನಾಡಿನ ಕೆಲವು ಕಡೆಗಳಲ್ಲಿ ಹಸಿ ಅಡಿಕೆಯನ್ನು ಬೇಯಿಸುವಾಗ ಕೃತಕ ಬಣ್ಣ ಬಳಸಲಾಗಿದೆಯೇ? ಲಾರಿಗಳಲ್ಲಿರುವ ಅಡಿಕೆ ಸೇವನೆಗೆ ಸುರಕ್ಷಿತವೇ ಎಂಬುದನ್ನು ಪರಿಶೀಲಿಸುತ್ತಿದ್ದಾರೆ ಎನ್ನಲಾಗುತ್ತಿದೆ. ಅಡಿಕೆಯು ಸೇವನೆಗೆ ಅಸುರಕ್ಷಿತ ಎಂಬ ಫಲಿತಾಂಶ ಬಂದಲ್ಲಿ ಅದನ್ನು ವಾಪಸ್ ಕೊಡುವುದಿಲ್ಲ. ಬದಲಿಗೆ, ಅಲ್ಲಿಯೇ ನಾಶಪಡಿಸಿ ಕ್ರಿಮಿನಲ್ ಪ್ರಕರಣ ದಾಖಲಿಸಲಿದ್ದಾರೆ. ಸೇವನೆಗೆ ಸುರಕ್ಷಿತವಾಗಿದ್ದು, ಅಡಿಕೆಯ ಗುಣಮಟ್ಟ ನಿಗದಿತ ಮಾನದಂಡಕ್ಕಿಂತ ಕಡಿಮೆ ಇದ್ದರೆ ಸಂಬಂಧಿಸಿದವರಿಗೆ ದಂಡ ಹಾಕಿ, ಸಿವಿಲ್ ದಾವೆ ಹೂಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಚೊಗರು ಬಳಕೆ: ಕರ್ನಾಟಕದ ಸಾಂಪ್ರದಾಯಿಕ ಸಂಸ್ಕರಣಾ ಪದ್ಧತಿಯಲ್ಲಿ ಅಡಿಕೆಯನ್ನು ಬೇಯಿಸುವಾಗ 'ಚೊಗರು' ಎಂಬ ನೈಸರ್ಗಿಕ ದ್ರಾವಣವನ್ನು ಬಳಸಲಾಗುತ್ತದೆ. ಈ ಚೊಗರಿನಲ್ಲಿ ಟ್ಯಾನಿನ್ ಮತ್ತು ಪಾಲಿಫೆನಾಲ್ಸ್‌ನಂತಹ ನೈಸರ್ಗಿಕ ಉತ್ಕರ್ಷಣ ನಿರೋಧಕಗಳು ಸಮೃದ್ಧವಾಗಿರುತ್ತವೆ. ಒಣಗಿದ ಅಡಿಕೆಗೆ ಮರಳಿ ಈ ಚೊಗರನ್ನು ಲೇಪಿಸುವುದರಿಂದ ಅಡಿಕೆಗೆ ನೈಸರ್ಗಿಕವಾದ ಗಾಢ ಕೆಂಪು ಬಣ್ಣ ಮತ್ತು ಹೊಳಪು ಬರುತ್ತದೆ.

'ಇದು ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ಸಂಪೂರ್ಣ ಸುರಕ್ಷಿತ ವೈಜ್ಞಾನಿಕ ಪದ್ಧತಿ. ಮಹಾರಾಷ್ಟ್ರದ ಅಧಿಕಾರಿಗಳು ಸಾಂಪ್ರದಾಯಿಕ 'ಚೊಗರು' ಲೇಪಿತ ಅಡಿಕೆಯನ್ನು ನೋಡಿ, ಅದು ರೆಡ್ ಆಕ್ಸೈಡ್ ಮಿಶ್ರಿತ ಅಡಿಕೆ ಇರಬಹುದು ಎಂದು ತಪ್ಪು ಗ್ರಹಿಕೆಗೆ ಒಳಗಾಗುತ್ತಿದ್ದಾರೆ' ಎಂಬುದು ವರ್ತಕರು ಮತ್ತು ತಜ್ಞರ ವಾದ.

'ದೀರ್ಘಕಾಲ ಅಡಿಕೆ ದಾಸ್ತಾನು ಮಾಡುವಾಗ ಕೀಟಬಾಧೆ ತಡೆಯಲು ಕೆಲ ಕಡೆ ಧೂಪನ ಅಥವಾ ಕೆಮಿಕಲ್ ಸ್ಪ್ರೇ ಮಾಡಲಾಗುತ್ತದೆ. ಆದರೆ ಮಲೆನಾಡು, ಕರಾವಳಿ ಭಾಗದ ಅಡಿಕೆ ಬೇಗ ಮಾರಾಟ ಆಗುವ ಕಾರಣ ಇಂಥ ರಾಸಾಯನಿಕಗಳ ಅಗತ್ಯ ಇರುವುದಿಲ್ಲ. ಬಹುತೇಕ ಸಹಕಾರ ಸಂಘಗಳು ಈ ವ್ಯವಸ್ಥೆಯನ್ನು ನಿಲ್ಲಿಸಿ ಹಲವು ವರ್ಷಗಳೇ ಕಳೆದಿವೆ' ಎಂದು ಹೇಳುತ್ತಾರೆ ಶಿರಸಿಯ ತೋಟಗಾರ್ಸ್ ಕೊ–ಆಪರೇಟಿವ್ ಸೇಲ್ ಸೊಸೈಟಿ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ.

'ಅಡಿಕೆಯನ್ನು ಈ ಹಿಂದೆ ಕೈಯಲ್ಲಿ ಸುಲಿಯಲಾಗುತ್ತಿತ್ತು. ಈಗ ಯಂತ್ರಗಳ ನೆರವಿನಿಂದ ಅಡಿಕೆ ಸುಲಿಯಲಾಗುತ್ತಿದ್ದು, ಅಡಿಕೆಗೆ ಅಲ್ಲಲ್ಲಿ ಪೆಟ್ಟು ಬೀಳುತ್ತಿದೆ. ಚಿಕ್ಕ ರಂಧ್ರ, ಕುಳಿ ಇರುವ ಈ ಅಡಿಕೆಯನ್ನು ಕಳಪೆ ಗುಣಮಟ್ಟ ಎಂದು ಪರಿಗಣಿಸಲಾಗುತ್ತಿದೆ' ಎನ್ನುವುದು ಚನ್ನಗಿರಿಯ 'ತುಮ್ಕೋಸ್' ಅಧ್ಯಕ್ಷ ಎಚ್.ಎಸ್. ಶಿವಕುಮಾರ್ ಅವರ ಮಾತು.

ಮಾರುಕಟ್ಟೆ ನಿಯಂತ್ರಣ ಯತ್ನವೇ?: 'ಉತ್ತರ ಭಾರತದ ಪಾನ್ ಮಸಾಲಾ ಮತ್ತು ಗುಟ್ಕಾ ತಯಾರಿಕಾ ಕಂಪನಿಗಳು ಮಾರುಕಟ್ಟೆಯನ್ನು ನಿಯಂತ್ರಿಸಲು ಇಂತಹ ಬಿಕ್ಕಟ್ಟುಗಳನ್ನು ಸೃಷ್ಟಿಸಿರುವ ಸಾಧ್ಯತೆಯೂ ಇದೆ. ಕರ್ನಾಟಕದಲ್ಲಿ ಅಡಿಕೆ ಬೆಲೆ ಕ್ವಿಂಟಲ್‌ಗೆ ₹50 ಸಾವಿರ ದಾಟಿದಾಗ, ದೊಡ್ಡ ಕಂಪನಿಗಳಿಗೆ ಉತ್ಪಾದನಾ ವೆಚ್ಚ ಹೆಚ್ಚಾಗುತ್ತದೆ. ಮಾರುಕಟ್ಟೆಯಲ್ಲಿ ಲಾರಿಗಳನ್ನು ದಿಢೀರ್ ತಡೆಯಲಾಗುತ್ತಿದೆ. ಅಡಿಕೆಯಲ್ಲಿ ರಾಸಾಯನಿಕ ಇದೆ ಎಂಬ ಭೀತಿ ಸೃಷ್ಟಿಸಿದರೆ, ಸ್ಥಳೀಯವಾಗಿ ಅಡಿಕೆ ಬೆಲೆ ಕುಸಿಯುತ್ತದೆ. ಬೆಲೆ ಕುಸಿದಾಗ ಇದೇ ಕಾರ್ಪೊರೇಟ್ ಕಂಪನಿಗಳು ತಾವಂದುಕೊಂಡ ದರಕ್ಕೆ ಕೋಟ್ಯಂತರ ರೂಪಾಯಿ ಮೌಲ್ಯದ ಅಡಿಕೆಯನ್ನು ರೈತರಿಂದ ಖರೀದಿಸಿ ದಾಸ್ತಾನು ಮಾಡಿಕೊಳ್ಳುತ್ತವೆ. ಇದು ಮಾರುಕಟ್ಟೆಯ ಕೃತಕ ದರ ಕುಸಿತದ ಆಟವೂ ಇರಬಹುದು' ಎಂಬುದು ಹಲವು ಸಹಕಾರ ಸಂಘಗಳ ಪ್ರಮುಖರ ಸಂಶಯ.

ವರದಿ: ರಾಜೇಂದ್ರ ಹೆಗಡೆ, ಸಂಧ್ಯಾ ಹೆಗಡೆ, ವೆಂಕಟೇಶ್ ಜಿ.ಎಚ್.

ಇದೇ ಮೊದಲೇನಲ್ಲ

ಇಂಥ ತಪಾಸಣೆ ಮೊದಲ ಬಾರಿಯೇನಲ್ಲ. ಈ ಹಿಂದೆ 2021 ಮತ್ತು 2023ರಲ್ಲೂ ಗುಜರಾತ್ ಹಾಗೂ ಮಹಾರಾಷ್ಟ್ರದ ಗಡಿಗಳಲ್ಲಿ ಕರ್ನಾಟಕದ ಅಡಿಕೆ ಲಾರಿಗಳನ್ನು ತಡೆಯಲಾಗಿತ್ತು. ಆಗ ಇ-ವೇ ಬಿಲ್ ವ್ಯತ್ಯಾಸ ಮತ್ತು ಕಳ್ಳಸಾಗಣೆ (ಮ್ಯಾನ್ಮಾರ್/ಇಂಡೋನೇಷ್ಯಾದಿಂದ ಕಳ್ಳಮಾರ್ಗದಲ್ಲಿ ಬರುವ ಅಡಿಕೆ) ತಡೆಗಟ್ಟುವ ನೆಪದಲ್ಲಿ ತಪಾಸಣೆ ನಡೆಸಲಾಗಿತ್ತು. ಆದರೆ ಈ ಬಾರಿ ಆಹಾರ ಸುರಕ್ಷತಾ ಇಲಾಖೆಯು ನೇರವಾಗಿ ಗುಣಮಟ್ಟ ವಿಚಾರವನ್ನು ಮುಂದಿಟ್ಟುಕೊಂಡು ದೊಡ್ಡ ಮಟ್ಟದಲ್ಲಿ ತಪಾಸಣೆ ನಡೆಸುತ್ತಿದೆ.

ಫಡಣವೀಸ್ ಜೊತೆ ಚರ್ಚೆ

ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರನ್ನು ಭೇಟಿ ಮಾಡಿ ಈ ಬಗ್ಗೆ ಚರ್ಚಿಸಲಾಗಿದ್ದು, ಅವರು ಸರಿಪಡಿಸುವ ಭರವಸೆ ನೀಡಿದ್ದಾರೆ. ಸದ್ಯದಲ್ಲಿ ಸಮಸ್ಯೆ ಬಗೆಹರಿಯಬಹುದು. ಅಡಿಕೆ ಗುಣಮಟ್ಟದ ಬಗ್ಗೆ ನಾವು ವಿಶೇಷ ಕಾಳಜಿ ವಹಿಸಬೇಕು. ಕೆಂಪಡಿಕೆಗೆ ನೈಸರ್ಗಿಕ ಬಣ್ಣ ಹೊರತುಪಡಿಸಿ, ಕೃತಕ ಬಣ್ಣ ಬಳಸಬಾರದು. ಹೊರರಾಜ್ಯಗಳಲ್ಲಿ ಅಡಿಕೆ ವಹಿವಾಟಿಗೆ ಅಡ್ಡಿಯಾದರೆ, ಸ್ಥಳೀಯ ಮಾರುಕಟ್ಟೆ ಧಾರಣೆಯ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ

ಎಸ್.ಆರ್.ಸತೀಶ್ಚಂದ್ರ, ಕ್ಯಾಂಪ್ಕೊ ಅಧ್ಯಕ್ಷ

ಸಂಸದರು ಧ್ವನಿ ಎತ್ತಲಿ

ಮಹಾರಾಷ್ಟ್ರ ಮಾರ್ಗವಾಗಿ ಉತ್ತರ ಪ್ರದೇಶ, ಗುಜರಾತ್ ಇನ್ನಿತರ ರಾಜ್ಯಗಳಿಗೆ ಅಡಿಕೆ ಕೊಂಡೊಯ್ಯುವ ಲಾರಿಗಳನ್ನು ತಡೆ ಹಿಡಿಯಲಾಗಿದೆ. ಮಹಾರಾಷ್ಟ್ರದಲ್ಲಿ ಅನುಷ್ಠಾನಗೊಂಡಿರುವ ಹೊಸ ಕಾನೂನಿನಿಂದ ಈ ಸಮಸ್ಯೆ ಉದ್ಭವವಾಗಿದೆ. ಇದು ಬೆಳೆಗಾರರ ಅಸ್ತಿತ್ವದ ಪ್ರಶ್ನೆ. ಅಡಿಕೆ ಬೆಳೆಯುವ ಪ್ರದೇಶಗಳನ್ನು ಪ್ರತಿನಿಧಿಸುವ 10ಕ್ಕೂ ಹೆಚ್ಚು ಸಂಸದರು ಇದ್ದು, ಅವರು ಈ ಬಗ್ಗೆ ಧ್ವನಿ ಎತ್ತಬೇಕು

ಮಹೇಶ್ ಪುಚ್ಚಪ್ಪಾಡಿ, ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘದ ಅಧ್ಯಕ್ಷ

ಅನಗತ್ಯ ತೊಂದರೆ

ಮಹಾರಾಷ್ಟ್ರದಲ್ಲಿ ಗುಟ್ಕಾ, ಖೈನಿ, ತಂಬಾಕು ಹಾಗೂ ಅದಕ್ಕೆ ಸಂಬಂಧಿಸಿದ ಉತ್ಪನ್ನಗಳ ಬಳಕೆಗೆ ನಿಷೇಧವಿದೆ. ಆದರೆ ಅಡಿಕೆಗೆ ನಿಷೇಧವಿಲ್ಲ. ಜೊತೆಗೆ ಕರ್ನಾಟಕದಿಂದ ಸಾಗಣೆ ಆಗುತ್ತಿರುವ ಅಡಿಕೆ ಮಹಾರಾಷ್ಟ್ರದಲ್ಲಿ ಎಲ್ಲಿಯೂ ಪೂರೈಕೆ ಆಗುವುದಿಲ್ಲ. ಅಲ್ಲಿನ ಹೆದ್ದಾರಿ ಮೂಲಕ ಸಾಗಣೆ ಆಗುತ್ತದೆ. ಹಾಗಿದ್ದರೂ ತಡೆಯಲಾಗಿದೆ. ಇದು ಅನಗತ್ಯವಾಗಿ ತೊಂದರೆ ಕೊಡುವ ಕೆಲಸ

ಶ್ರೀಕಾಂತ್ ಬರುವಾ, ಮ್ಯಾಮ್ಕೋಸ್ (ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ) ವ್ಯವಸ್ಥಾಪಕ ನಿರ್ದೇಶಕ

ನಷ್ಟದ ಆತಂಕ

ಅಧಿಕಾರಿಗಳು ಮಾದರಿ ಪಡೆದು ಲ್ಯಾಬ್ ವರದಿ ಬರಲು 14 ದಿನಗಳು ಬೇಕು ಎನ್ನುತ್ತಿದ್ದಾರೆ. ವರದಿ ಬರದಿದ್ದರೆ ಇನ್ನೂ 14 ದಿನ ತಡವಾಗುತ್ತದೆ ಎಂದು ಲಾರಿ ಚಾಲಕರನ್ನು ಹೆದರಿಸಲಾಗುತ್ತಿದೆ. ಹೆದ್ದಾರಿಗಳಲ್ಲಿ ದಿನಗಟ್ಟಲೆ ಲಾರಿಗಳು ನಿಲ್ಲುವುದರಿಂದ ಬಾಡಿಗೆ ದುಪ್ಪಟ್ಟಾಗುತ್ತಿದೆ. ಮಳೆಗಾಲದ ವಾತಾವರಣ ಇರುವುದರಿಂದ ಹೆದ್ದಾರಿಯಲ್ಲೇ ದಿನಗಟ್ಟಲೆ ಲಾರಿಗಳು ನಿಂತರೆ ತೇವಾಂಶ ಹೆಚ್ಚಾಗಿ ಅಡಿಕೆಗೆ ಶಿಲೀಂಧ್ರ ಸೋಂಕು ತಗಲುವ ಅಪಾಯವಿದೆ. ಇದರಿಂದ ವರ್ತಕರಿಗೆ ಕೋಟ್ಯಂತರ ರೂಪಾಯಿ ನಷ್ಟವಾಗಲಿದೆ

ಲೋಕೇಶ ಹೆಗಡೆ, ಶಿರಸಿ ವರ್ತಕರ ಸಂಘದ ಪದಾಧಿಕಾರಿ

ಕೃತಕ ಬಣ್ಣದ ಸಮಸ್ಯೆ

ರಾಜ್ಯದ ಅಡಿಕೆಗಳಿಗೆ ಕೃತಕ ಬಣ್ಣವನ್ನು ಹಾಕುವುದು, ಹೆಚ್ಚು ದಿನ ಸಂರಕ್ಷಿಸಲು ರಾಸಾಯನಿಕವನ್ನು ಬಳಸುತ್ತಿರುವ ಬಗ್ಗೆ ಮೊದಲಿನಿಂದಲೂ ದೂರುಗಳಿವೆ. ಕೆಲವು ವ್ಯಾಪಾರಿಗಳು, ಬೆಳೆಗಾರರು, ಸಹಕಾರ ಸಂಘಗಳ ಪ್ರತಿನಿಧಿಗಳು ಕೂಡ ಈ ಮಾತನ್ನು ಹೇಳುತ್ತಾರೆ.

'ಅಡಿಕೆ ಬೇಯಿಸುವ ಸಂದರ್ಭದಲ್ಲಿ ಕೆಲ ಖೇಣಿದಾರರು ಕೃತಕ ಬಣ್ಣ ಮಿಶ್ರಣ ಮಾಡುತ್ತಿದ್ದು, ಇದು ಖಂಡಿತವಾಗಿಯೂ ಮುಂದೊಂದು ದಿನ ರಾಜ್ಯದ ಅಡಿಕೆ ಬೆಳೆಗಾರರಿಗೆ ಅಪಾಯ ತಂದೊಡ್ಡಲಿದೆ. ಇದರಿಂದ ಹೊರ ರಾಜ್ಯಗಳಲ್ಲಿ ಕರ್ನಾಟಕದ ಅಡಿಕೆ ಕಳಂಕ ಅಂಟಿಸಿಕೊಳ್ಳುತ್ತಿದೆ' ಎಂದು ಹೇಳುತ್ತಾರೆ 'ತುಮ್ಕೋಸ್' ಅಧ್ಯಕ್ಷ ಎಚ್.ಎಸ್. ಶಿವಕುಮಾರ್.

'ಅಡಿಕೆ ಪಾರಂಪರಿಕ ಬೆಳೆ. ನೂರಾರು ವರ್ಷಗಳಿಂದ ಇದು ಬದುಕಿನ ಅಂಗವಾಗಿದೆ. ಅಡಿಕೆಯಲ್ಲಿ ಯಾವುದೇ ವಿಷಕಾರಿ ಅಂಶಗಳಿಲ್ಲ. ಆದರೆ, ಲಾಭದ ಆಸೆಗೆ ಕೆಲ ಖೇಣಿದಾರರು ಅಡ್ಡದಾರಿ ತುಳಿಯುತ್ತಿದ್ದಾರೆ. ಇದು ದೊಡ್ಡ ಸಮಸ್ಯೆಯನ್ನು ತೊಂದೊಡ್ಡುತ್ತಿದೆ' ಎನ್ನುತ್ತಾರೆ ಅವರು.

'ಈಗ ಮಹಾರಾಷ್ಟ್ರದ ಅಧಿಕಾರಿಗಳು ನಡೆಸುತ್ತಿರುವ ತಪಾಸಣೆಯಲ್ಲಿ ಗುಣಮಟ್ಟದ ಕೊರತೆ ಇರುವ ಅಥವಾ ಕಳಪೆ ದರ್ಜೆಯ ಅಡಿಕೆಯನ್ನು ಉತ್ತಮ ಗುಣಮಟ್ಟದ ಅಡಿಕೆಯಂತೆ ಬಿಂಬಿಸಲು ಕೆಲವು ಕಿಡಿಗೇಡಿಗಳು ಐರನ್ ಆಕ್ಸೈಡ್ ಅಥವಾ ಸಂಶ್ಲೇಷಿತ ಬಣ್ಣಗಳನ್ನು ಬಳಸುವ ಸಾಧ್ಯತೆಯೂ ಇಲ್ಲದಿಲ್ಲ' ಎಂಬ ಮಾತನ್ನು ಉತ್ತರ ಕನ್ನಡದ ಬೆಳೆಗಾರರು ಹೇಳುತ್ತಾರೆ.

ಇಳಿದ ಧಾರಣೆ

ಲಾರಿಗಳ ಸಂಚಾರಕ್ಕೆ ತಡೆ ಒಡ್ಡಿರುವುದರಿಂದ ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಗಳಲ್ಲಿ ಅಡಿಕೆ ಧಾರಣೆ ಕುಸಿದಿದೆ.

'ಮಹಾರಾಷ್ಟ್ರವು ಉತ್ತರ ಭಾರತದ ಮಾರುಕಟ್ಟೆಗಳಾದ ಉತ್ತರ ಪ್ರದೇಶ, ದೆಹಲಿ, ರಾಜಸ್ಥಾನ, ಮಧ್ಯಪ್ರದೇಶಗಳಿಗೆ ಕೊಂಡಿಯಾಗಿದ್ದು, ಇಲ್ಲಿ ಲಾರಿಗಳನ್ನು ತಡೆಯುತ್ತಿರುವುದರಿಂದ ಕರ್ನಾಟಕದ ಮಾರುಕಟ್ಟೆಯಲ್ಲಿ ಅಡಿಕೆ ಖರೀದಿ ಪ್ರಕ್ರಿಯೆ ಈಗಾಗಲೇ ಮಂದಗತಿಯಾಗಿದೆ. ಲಾರಿಗಳು ಸಕಾಲಕ್ಕೆ ತಲುಪದಿದ್ದರೆ ವರ್ತಕರು ರೈತರಿಂದ ಅಡಿಕೆ ಖರೀದಿಸಲು ಹಿಂಜರಿಯುತ್ತಾರೆ. ಇದು ನೇರವಾಗಿ ಅಡಿಕೆ ಬೆಲೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಈಗಾಗಲೇ ಕ್ವಿಂಟಲ್‌ಗೆ ₹2,000 ದರ ಇಳಿದಿದೆ. ವರ್ತಕರೂ ಖರೀದಿಗೆ ಹಿಂಜರಿಯುತ್ತಿದ್ದಾರೆ' ಎಂದು ಶಿರಸಿಯ ತೋಟಗಾರ್ಸ್ ಸೇಲ್ ಸೊಸೈಟಿ ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ ಹೇಳಿದರು.



ಮಹಾರಾಷ್ಟ್ರದಲ್ಲಿ ಕರ್ನಾಟಕ ಮೂಲದ ಅಡಿಕೆ ಲಾರಿಗಳನ್ನು ಜಪ್ತಿ ಮಾಡಿರುವುದು

'ಪ್ರತಿ ಲಾರಿ ಲೋಡ್ ಅಡಿಕೆ ₹1.5 ಕೋಟಿ ಬೆಲೆ ಬಾಳುತ್ತದೆ. ಇಂತಹ ಲಾರಿಗಳನ್ನು ವಾರಗಟ್ಟಲೆ ಒಂದೆಡೆ ನಿಲುಗಡೆ ಮಾಡಿಕೊಂಡರೆ ವ್ಯಾಪಾರಸ್ಥರಿಗೆ ತೊಂದರೆ ಆಗುತ್ತದೆ. ಇದರಿಂದ ಅಡಿಕೆ ಖರೀದಿಗೆ ವ್ಯಾಪಾರಸ್ಥರು ಹಿಂದೇಟು ಹಾಕುತ್ತಿದ್ದಾರೆ. ಕಳೆದ 10 ದಿನಗಳಲ್ಲಿ ಚನ್ನಗಿರಿ 'ತುಮ್ಕೋಸ್' ಮಾರುಕಟ್ಟೆಯಲ್ಲಿ ₹4,000 ಬೆಲೆ ಕಡಿಮೆಯಾಗಿದೆ' ಎಂದು 'ತುಮ್ಕೋಸ್' ಅಧ್ಯಕ್ಷ ಶಿವಕುಮಾರ್ ಮಾಹಿತಿ ನೀಡಿದರು.

ಗುಣಮಟ್ಟ ಖಾತರಿ ವ್ಯವಸ್ಥೆ ಇಲ್ಲ

ರಾಜ್ಯದಲ್ಲಿ ಅಂದಾಜು 7.50 ಲಕ್ಷ ಹೆಕ್ಟೇರ್‌ನಷ್ಟು ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗುತ್ತಿದೆ. ಗುಣಮಟ್ಟದ ಅಡಿಕೆಗೆ ರಾಜ್ಯ ಹೆಸರುವಾಸಿಯಾಗಿರುವುದು ನಿಜ. ಆದರೆ, ಕಳಪೆ ಗುಣಮಟ್ಟದ ಅಡಿಕೆ ಮಾರುಕಟ್ಟೆಗೆ ಪೂರೈಕೆಯಾಗುತ್ತಿರುವುದೂ ಸುಳ್ಳಲ್ಲ. ಇಷ್ಟು ದೊಡ್ಡ ಪ್ರಮಾಣದಲ್ಲಿ ಅಡಿಕೆ ಬೆಳೆಯುತ್ತಿದ್ದರೂ ಅದರ ಗುಣಮಟ್ಟವನ್ನು ಖಾತರಿ ಪಡಿಸುವ, ಪ್ರಮಾಣೀಕರಿಸುವ ಸುಧಾರಿತ ವ್ಯವಸ್ಥೆ ರಾಜ್ಯದಲ್ಲಿ ಇಲ್ಲ. ವರ್ತಕರು ಕೂಡ ತಮ್ಮ ಅಡಿಕೆಯನ್ನು ಪ್ರಮಾಣೀಕರಿಸಲು ಮುಂದಾಗುತ್ತಿಲ್ಲ ಎನ್ನುವುದು ಬೆಳೆಗಾರರ, ಸಹಕಾರ ಸಂಘಗಳ ಪ್ರತಿನಿಧಿಗಳ ಮಾತು.

'ಶಿರಸಿ ಸುಪಾರಿಗೆ ಜಿಐ ಟ್ಯಾಗ್ ಸಿಕ್ಕಿದೆ. ಮಂಗಳೂರು, ಶಿವಮೊಗ್ಗ ಅಡಿಕೆಗೂ ವಿಶಿಷ್ಟ ಸ್ಥಾನಮಾನವಿದೆ. ನಮಗೆ ಜಿಐ ಟ್ಯಾಗ್ ಇದ್ದರೂ, ನಮ್ಮ ಉತ್ಪನ್ನಗಳ ಸಾಗಣೆಯ ಸಂದರ್ಭದಲ್ಲಿ ಇದು ಅತ್ಯಂತ ಗುಣಮಟ್ಟದ್ದು ಎಂದು ಪ್ರಮಾಣೀಕರಿಸುವ ಡಿಜಿಟಲ್ ವ್ಯವಸ್ಥೆಯನ್ನು ನಮ್ಮ ಎಪಿಎಂಸಿಗಳು ಅಳವಡಿಸಿಕೊಂಡಿಲ್ಲ. ಲಾರಿಗಳಲ್ಲಿ ಬಿಲ್ ಇರುತ್ತದೆಯೇ ವಿನಾ, ಆ ಅಡಿಕೆಯ 'ಪ್ರಯೋಗಾಲಯದ ಪ್ರಮಾಣಪತ್ರ' ಇರುವುದಿಲ್ಲ' ಎಂಬುದು ಶಿರಸಿಯ ಪ್ರಗತಿಪರ ಕೃಷಿಕ ಗಜಾನನ ಹೆಗಡೆ ಮಾತು.

'ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದಿಂದ ಪರವಾನಗಿ ಪಡೆಯದೆ, ಕೆಲವರು ನಡೆಸುವ ಉದ್ಯಮದಿಂದ ಇಂತಹ ಸಮಸ್ಯೆಗಳು ಎದುರಾಗುತ್ತವೆ. ಗುಣಮಟ್ಟ ಕಾಪಾಡಿಕೊಂಡು, ಯಾವುದೇ ರೀತಿಯ ತೆರಿಗೆ ವಂಚನೆ ಮಾಡದೆ, ಕಾನೂನುಬದ್ಧ ಮಾರ್ಗದಲ್ಲಿ ಅಡಿಕೆ ವಹಿವಾಟು ನಡೆಸಿದರೆ, ಯಾವುದೇ ತೊಂದರೆ ಬರಲಾರದು' ಎಂದು ಕ್ಯಾಂಪ್ಕೊದ ಪದಾಧಿಕಾರಿಯೊಬ್ಬರು ತಿಳಿಸಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಸಿಆರ್‌ಪಿಎಫ್ ಸಿಬ್ಬಂದಿ ಎನ್ನಲಾದ ವ್ಯಕ್ತಿಯೊಬ್ಬರು ಮಾತನಾಡುತ್ತಿರುವ ವಿಡಿಯೊ ತುಣುಕೊಂದನ್ನು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಅವರ ಸರ್ಕಾರ ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಆರೋಪಿಸುತ್ತಾ, ಬಿಜೆಪಿಯನ್ನು ಅಧಿಕಾರದಿಂದ ಕಿತ್ತೊಗೆಯಲು ಅದರ ವಿರುದ್ಧವಾಗಿ ಮತಹಾಕಬೇಕು ಎಂದು ಅವರು ಜನರಿಗೆ ಮನವಿ ಮಾಡುತ್ತಿರುವುದು ವಿಡಿಯೊದಲ್ಲಿದೆ. ಆದರೆ, ಇದು ಸುಳ್ಳು.



ವಿಡಿಯೊವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅದರಲ್ಲಿ ಹಲವು ವ್ಯತ್ಯಾಸಗಳಿರುವುದು ಕಂಡು ಬಂತು. ವಿಡಿಯೊದಲ್ಲಿರುವ ವ್ಯಕ್ತಿಯು ಧರಿಸಿದ್ದ ಸಮವಸ್ತ್ರದಲ್ಲಿ ಕೇವಲ ಸಿಆರ್‌ಪಿಎಫ್ ಎಂದು ಬರೆಯಲಾಗಿದೆ. ಆದರೆ, ಅಧಿಕೃತ ಸಿಆರ್‌ಪಿಎಫ್ ಸಮವಸ್ತ್ರಗಳಲ್ಲಿ ಹೆಸರು ಬರೆಯುವ ಕ್ರಮ ಹೀಗಿರುವುದಿಲ್ಲ. ವ್ಯಕ್ತಿಯ ಹಿನ್ನೆಲೆಯಲ್ಲಿ ಕಂಡು ಬರುವ ಕೆಲವರ ಮುಖಗಳು ಮಸುಕು ಆಗಿದ್ದವು. ಅದಲ್ಲದೇ, ವಿಡಿಯೊದ ಬಲ ಬದಿಯ ಕೆಳಭಾಗದಲ್ಲಿ ಗ್ರಾಕ್‌ನ ವಾಟರ್ ಮಾರ್ಕ್ ಕೂಡ ಇತ್ತು. ಹಾಗಾಗಿ, ಇದು ಎಐ ಬಳಸಿ ಸೃಷ್ಟಿಸಿರುವ ವಿಡಿಯೊ ಎಂಬ ಅನುಮಾನ ಬಂತು. ಹೈವ್ ಮಾಡರೇಷನ್ ಟೂಲ್ ಮೂಲಕ ವಿಡಿಯೊವನ್ನು ಪರಿಶೀಲನೆಗೆ ಒಳಪಡಿಸಿದಾಗ ಇದು ಡೀಪ್ ಫೇಕ್ ವಿಡಿಯೊ ಎಂಬುದು ದೃಢಪಟ್ಟಿತು ಎಂದು ಫ್ಯಾಕ್ಟ್ಲೀ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಆರದಿರಲಿ ಬೆಳಕು

ನುಡಿ ಬೆಳಗು — ವಾಸುದೇವ ನಾಡಿಗ್



ಆ ಕತ್ತಲ ಕೋಣೆಯಲ್ಲಿ ನಾಲ್ಕು ಮೇಣದ ಬತ್ತಿಗಳು ಬೆಳಗುತ್ತಿದ್ದವು. ಕತ್ತಲ ವಿರುದ್ಧ ಸೆಣಸಾಟಕ್ಕೆ ಕೂತಿದ್ದವು. ಆದರೆ ಅವು ಎಷ್ಟು ಅಂತ ಉರಿಯಲು ಸಾಧ್ಯ? ಮೊದಲೇ ಮೇಣ ಮೆಲ್ಲನೆ ಕರಗುವ ಒಡಲು ಇದ್ದಷ್ಟು ಕಾಲ ಬೆಳಕನ್ನು ಹಂಚುವ ಮಡಿಲು.

ಮೊದಲನೇ ಮೇಣ ಶಾಂತಿ. ಕರಗುತ್ತಲೇ ಮರುಗಿತು. ನಾನು ಶಾಂತಿ. ಆದರೆ ಲೋಕ ನನ್ನನ್ನು ಬೆಳಗಗೊಡದೇ ಬೇಗ ಕರಗಿಸುತ್ತದೆ. ಬರೀ ಯುದ್ಧ, ಮನಸ್ತಾಪ, ಜಗಳ, ದುಮ್ಮಾನ, ದುಃಖ ಈ ಸಂಸಾರದಲ್ಲಿ ಯಾರೂ ಶಾಂತಿಯನ್ನು ಉಳಿಸಿಕೊಳ್ಳದೆ ಹೋದರು ಎಂದೆಲ್ಲ ಮರುಗುತ್ತ ಮಾಯವಾಯಿತು.

ಎರಡನೇ ಮೇಣದ್ದೂ ಇದೇ ನಿಟ್ಟುಸಿರು. ನಾನು ನಂಬಿಕೆ. ಆದರೆ ನನಗೆ ಉಳಿಗಾಲವಿಲ್ಲ. ಹತ್ತಿರವಿದ್ದೂ ಪರಸ್ಪರ ಯಾರೂ ಯಾರನ್ನೂ ನಂಬರು. ಬರೀ ಅಪನಂಬಿಕೆ, ಸ್ವಾರ್ಥ, ಲಾಭದಾಸೆಗೆ ಕಚ್ಚಾಡುತ್ತ ನನ್ನ ದೂರ ಮಾಡಿದ್ದಾರೆ ಎಂದು ಉಸುರುತ್ತ ಮೆಲ್ಲನೆ ಕರಗಿ ಕತ್ತಲೆಗೆ ಸಂದಿತು.

ಇನ್ನು ಮೂರನೆಯ ಮೇಣ ಪ್ರೀತಿ. ಈಗ ಅದರ ಕರಗುವ ಸರದಿ. ಪ್ರೀತಿ ಇಲ್ಲದ ಮೇಲೆ ಯಾವ ಬಾಂಧವ್ಯ ಮೂಡಬಲ್ಲದು, ಉಳಿಯಬಲ್ಲದು? ಅಕ್ಕ–ತಮ್ಮ, ಪತಿ–ಪತ್ನಿ, ಗುರು–ಶಿಷ್ಯ, ತಂದೆ–ಮಕ್ಕಳು ಹೀಗೆ ಅನೇಕ ಬಾಂಧವ್ಯಗಳು ನನ್ನನ್ನು ಉಳಿಸಿಕೊಳ್ಳದೇ ನಾಶವಾಗಿವೆ. ಯಾರೂ ಯಾರನ್ನೂ ನಿಸ್ವಾರ್ಥವಾಗಿ ಪ್ರೀತಿಸದ ಲೋಕದಲಿ ನಾನು ಉಳಿಯಲಾರೆ ಎಂದು ನಿಟ್ಟುಸಿರು ಇಡುತ್ತಾ ಕತ್ತಲೆಯ ಸೇರಿತು.

ಸ್ವಲ್ಪ ಹೊತ್ತಿನಲ್ಲಿಯೇ ಒಬ್ಬ ಪುಟ್ಟ ಬಾಲಕ ಕೋಣೆಯ ಒಳಗೆ ಬಂದ ಕತ್ತಲು ಅಸ್ಪಷ್ಟತೆ ಹಚ್ಚಿಟ್ಟ ಮೂರೂ ಮೇಣದ ಬತ್ತಿಗಳೂ ಕರಗಿ ಇನ್ನೊಂದು ಮಾತ್ರ ಕಣ್ಣೀರು ಸುರಿವಂತೆ ಉರಿದು ಕರಗುತ್ತಿತ್ತು. ಕರಗಿ ನೀರಾಗಿ ಹರಿಯುತ್ತಲೇ ಆ ಮುಗ್ಧ ಬಾಲಕನಿಗೆ ಹೇಳಿತು. ನಾನು ಕೊನೆಯ ಮೇಣ ನನ್ನ ಹೆಸರು ಭರವಸೆ. ನನ್ನ ಬೆಳಕನ್ನು ತೆಗೆದುಕೊಂಡು ಆರಿಹೋದ ಉಳಿದ ಮೇಣಗಳನ್ನು ಹೊತ್ತಿಸು ಎಂದಿತು. ಪುಟ್ಟ ಬಾಲಕ ಆ ಮೇಣದಿಂದ ಉಳಿದ ಮೇಣದ ಬತ್ತಿಗಳನ್ನು ಉರಿಸಿದ. ಅವೆಲ್ಲವೂ ಮತ್ತೆ ಸಣ್ಣಗೆ ಬೆಳಗಲು ಶುರುವಿಟ್ಟವು.

ಇದನ್ನೇ ಕವಿ ಜಿಎಸ್‌ಎಸ್ 'ಹಣತೆ ಹಚ್ಚುತ್ತೇನೆ' ಎಂಬ ಪದ್ಯದಲ್ಲಿ ಸುಂದರವಾಗಿ ಹೇಳಿದ್ದಾರೆ. ಹಾಗೇ ಅವರ ಸಂಕಲ್ಪ ಗೀತೆಯೂ ಇದನ್ನೇ ಸಾರುತ್ತದೆ. 'ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ ಹೊಸ ಭರವಸೆಗಳ ಕಟ್ಟೋಣ' ಎನ್ನುತ್ತಲೇ ಮತ್ತೊಂದು ಕಡೆ 'ಯಾವುದೀ ಪ್ರವಾಹವು? ಮನೆ ಮನಗಳ ಕೊಚ್ಚಿ ತುಳಿದು' ಎಂದು ಆತಂಕ ಪಡುತ್ತಾರೆ.

ಭರವಸೆಯನ್ನು ನಂಬಿದ ಜೀವ ಹೊಸತೊಂದು ಬದಲಾವಣೆಗೆ ಹಾತೊರೆಯುತ್ತದೆ. 'ದೀಪವು ನಿನ್ನದೇ ಗಾಳಿಯು ನಿನ್ನದೇ' ಎಂದು ಹಾಡುವ ಮಲ್ಲಿಗೆಯ ಕವಿ ಕೆಎಸ್‌ನ, ಭರವಸೆಯ ಮೇಲೆ ಬಾಳನ್ನು ಹೊರಿಸಿ ಬಿಡುತ್ತಾರೆ. ಹಣತೆ ಹಚ್ಚುವ ಜಿಎಸ್‌ಎಸ್ ಇರುವಷ್ಟೂ ದಿನ ನನ್ನ ಮುಖ ನೀನು, ನಿನ್ನ ಮುಖ ನಾನು ನೋಡಬಹುದೆಂಬ ಆಸೆಯಿದೆ ಎನ್ನುತ್ತಾರೆ. ಹೀಗೆ ಭರವಸೆಯನ್ನು ದೀಪದ ಬೆಳಕಿಗೆ ಹೋಲಿಸಿ ಹಾಡುವ ಅನೇಕ ಕವಿಗಳ ವಾಂಛೆಯೂ ಇದೇನೆ. ಶಾಂತಿ, ನಂಬಿಕೆ ಪ್ರೀತಿಗಳು ಕರಗುವಾಗ ಭರವಸೆಯೊಂದು ನಮ್ಮನ್ನು ಕಾಯುತ್ತದೆ.

ಅದೊಂದು ಮೇಣದ ಬತ್ತಿಯನ್ನು ಆರಲು ಬಿಡಬಾರದು. ಎದೆಯೊಳಗೆ ಜತನವಾಗಿ ಉಳಿಸಿಕೊಂಡಾಗ ಮತ್ತೆ ಬೆಳಕು ಮೂಡಬಲ್ಲದು. ಡಾ.ರಾಜ್ ಅವರು ಎಷ್ಟು ಸೊಗಸಾಗಿ ಹಾಡಿದ್ದಾರೆ! ಆಕಸ್ಮಿಕ ಚಿತ್ರದ ಆ ಹಾಡು ಕೇಳಿಸುತ್ತಿದೆ, 'ಬಾಳುವಂತ ಹೂವೆ ಬಾಡುವಾಸೆ ಏಕೆ?'

ಪದಬಂಧ 01


ಅ.ನಾ.ಪ್ರಹ್ಲಾದರಾವ್

ಎಡದಿಂದ ಬಲಕ್ಕೆ

1 ಕರುಣಿಸಿದರೆ ನಾಕ ತೋರುವ ಪ್ರಥಮ ಪೂಜಾರ್ಹ (4)
4 ಚೌಕದಲ್ಲಿ ನಿಂತು ನೂಲು ಹಿಡಿದ ಪಹರೆಯವನು (4)
6 ಬಿಡಿಕಾಸು ಕೊಟ್ಟು ತಂದ ತಮಟೆಯಂಥ ವಾದ್ಯ (3)
7 ತಾಳಿದವ ಹೆಂಡತಿಯ ಕೊರಳಿಗೆ ಕಟ್ಟಿದ ಮಾಂಗಲ್ಯ (2)
8 ಆಕ್ಕ ನೆನಪಾದಾಗ ಕಟ್ಟಿದ ಹಾಲಿನ ಮೇಲಿನ ಪದರ (2)
10 ಪರಿಷೆಗಳಲ್ಲಿ ಕಲ್ಯಾಣಸೇವೆ ಜೊತೆ ಸಿಗುವ ಮಿಠಾಯಿ (3)
11 ನೆಲ ನೋಡುತ್ತಾ ನಿಂತ ಹೆಂಗಸು (3)
13 ಕಂದಮೂಲವಾಗಿ ಖುಷಿಗೆ ಸಿಕ್ಕ ಗೆಡ್ಡೆ (3)
15 ಕೈರೋ ದೇಶದಲ್ಲಿ ಇದೇ ಕೊನೆಯದು (3)
16 ಭರವಸೆ ಮೂಡಿಸಿದ ಶಬ್ದ (2)
18 ಈಜಾಡುವ ಸಲುವಾಗಿ ಹಿಡಿದ ದಾರಿ (2)
20 ಕರ್ಮಫಲಗಳಿಂದ ಸಂಚಿಯಲ್ಲಿ ತುಂಬಿದ ಸಂಗ್ರಹ (3)
22 ಎಣಿಸಲಾಗದಷ್ಟು ಲೆಕ್ಕಶಾಸ್ತ್ರದ ಸಂಖ್ಯೆ (4)
23 ವಾಡಿಯ ದನದ ಸಲುವಾಗಿ ಹುಲ್ಲು ಮಾರುವವನು (4)

ಮೇಲಿಂದ ಕೆಳಕ್ಕೆ

2 ನಾವು ನಾವೆ ಜಲವಿಹಾರಕ್ಕಾಗಿ ಏರಿದ ದೋಣಿ (2)
3 ಕದ ತೆರೆದು ಇಣುಕಿ ನೋಡಿದರೆ ಬರೇ ಬಾಳೆ (3)
4 ಗೊಂದಲದಲ್ಲಿ ಚೌಡಿ ಮುಂದೆ ನುಡಿಸಿದ ವಾದ್ಯ (3)
5 ಆಸ್ಪತ್ರೆಯಲ್ಲಿ ರೋಗಿ ಸೇವೆ ಮಾಡುವ ಆಯಾ (2)
7 ತಾತಾ ಸುಮ್ಮನೆ ಕಾದ ಸಮಯ ಒಂದು ಗಂಟೆ (2)
9 ಆನೆ ಬಲವನ್ನು ತಡೆದುಕೊಳ್ಳುವ ಭೂಮಿ (2)
10 ಅಂಬಲಪಾಡಿಗೆ ಅಡಿಗಡಿಗೆ ತಂದ ದೊಣ್ಣೆ (3)
12 ಅತ್ತರು ಬಳಿದರೆ ಸುರಿದು ಹೋದ ರಕ್ತ (3)
14 ಸುಬೇದಾರನ ಮುಂದೆ ಬಂದು ನಿಂತ ದೇವರು (2)
15 ಕ್ರೀಡೆಯಲ್ಲಿ ತೊಡಗಲು ಬಂದ ಮೇಕೆ (2)
17 ಸಂತನೊಂದಿಗೆ ಬಂದ ಚೈತ್ರ ವೈಶಾಖದ ತಿಂಗಳು (3)
18 ತಕ ತಕ ಕುಣಿಯುತಾ ಬರೆದ ಕುಂಡಲಿ (3)
19 ಡಾರ್ವಿನ್ ವಾದದಂತೆ ಮಾನವ ಮೂಲ (2)
21 ಗುಡಿಸಿ ಸ್ವಚ್ಛವಾಗಿರಿಸಿದ ದೇಗುಲ (2)



6449ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುಕಂಪ 3.ಅಸಂಭವ 6.ಕಸರತ್ತು 8.ಯಜ 9.ಕ್ಷೌರ 10.ಪಕ್ಷ 11.ಪ್ರಾಸ 13.ನಸುನಗು 15.ಪತ್ರಾವಳಿ 16.ಲಿಪಿಗಾರ

ಮೇಲಿಂದ ಕೆಳಕ್ಕೆ:
1.ಅಡಿಪಾಯ 2.ಪದಕ 4.ಸಂಪತ್ತು 5.ವನಚರ 7.ಸಹಗಮನ 10.ಪರಿತಾಪ 12.ಸದಾಚಾರ 13.ನದವ 14.ಗುದ್ದಲಿ

ಸುಡೊಕು 01

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3		5	1	4		6	9	
1			8			5		
	2	8			5			7
2				5		4		
			7					
	3	6			1	9		5
5			2	1				
				3				9
	6	2		7		8		1

6832 ಸುಡೊಕು

6	2	4	9	1	7	3	5	8
5	1	3	8	4	6	9	2	7
9	7	8	2	5	3	4	1	6
7	4	9	5	3	8	1	6	2
1	8	6	4	2	9	7	3	5
2	3	5	6	7	1	8	4	9
4	9	2	3	8	5	6	7	1
3	6	1	7	9	2	5	8	4
8	5	7	1	6	4	2	9	3

ಇಂದಿನಿಂದ ಪದಬಂಧ ಮತ್ತು ಸುಡೊಕು ಸರಣಿ ಒಂದರಿಂದ ಆರಂಭಗೊಂಡಿದ್ದು, ಅ.ನಾ.ಪ್ರಹ್ಲಾದರಾವ್ ನೀಡಲಿದ್ದಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

01 ಜುಲೈ 2026 ಬುಧವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ನಿಜ ಜ್ಯೇಷ್ಠ ಕೃಷ್ಣ ಪ್ರತಿಪತ್ ಗಂ. 7-39 ನಕ್ಷತ್ರ: ಪೂರ್ವಾಷಾಢ ಗಂ. 6-52 ಯೋಗ: ಐಂದ್ರ ಗಂ. ಗಂ. 16-05 ಕರಣ: ಕೌಲವ ಗಂ. 7-39, ಮಿಥುನ ಮಾಸದ 16 ನೇ ದಿನ. ಮಳೆ ನಕ್ಷತ್ರ : ಆರ್ದ್ರಾ 3 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30, ಸೂರ್ಯೋದಯ : 06-11 ಸೂರ್ಯಾಸ್ತ : 06-58, ಮುಸ್ಲಿಂ ದಿನಾಂಕ : 15 ಮೊಹರಂ , ಅದೃಷ್ಟ ಸಂಖ್ಯೆ : 7, 11

ಮೇಷ: ಕಟ್ಟಡ ಗುತ್ತಿಗೆದಾರರಿಗೆ ಆರ್ಥಿಕವಾಗಿ ನಷ್ಟ ಮತ್ತು ಕಾರ್ಮಿಕರ ಕೊರತೆ ಉಂಟಾಗಲಿದೆ. ಜಮೀನು ಅಥವಾ ನಿವೇಶನ ಖರೀದಿಸುವ ಯೋಜನೆ ಹಾಕಿಕೊಳ್ಳಿ. ಹವ್ಯಾಸಿ ಬರಹಗಾರರಿಗೆ ಅವಕಾಶ ಸಿಗಲಿವೆ.

ವೃಷಭ: ಕೆಲಸ ಕಾರ್ಯಗಳು ಈಡೇರಿದರೂ ಹಣ ವ್ಯಯಿಸಬೇಕಾಗ ಬಹುದು. ವೃತ್ತಿ ಅಥವಾ ಕೆಲಸಗಳಲ್ಲಿ ಬದಲಾವಣೆ ಇರಲಿದೆ. ತಿಳಿ ವಾತಾವರಣ ಮನಸ್ಸಿನ ಆಯಾಸವನ್ನು ನೀಗಿಸಲಿದೆ.

ಮಿಥುನ: ಆರೋಗ್ಯದಲ್ಲಿ ಜೀರ್ಣಕ್ರಿಯೆಗೆ ಸಂಬಂಧಿಸಿದಂತೆ ಕಿರಿಕಿರಿ ಎನಿಸಲಿದೆ. ಅನಾರೋಗ್ಯ ಭೀತಿ ಉಂಟಾಗುವುದು. ಆದಾಯ ವೃದ್ಧಿ ಇದ್ದು, ಕೃಷಿ ಕಾರ್ಯಗಳು ಬಿಡುವಿಲ್ಲದೆ ನಡೆಯಲಿವೆ.

ಕರ್ಕಾಟಕ: ದೈಹಿಕ ಪರಿಸ್ಥಿತಿಯಿಂದ ಯಾವ ಕೆಲಸದಲ್ಲೂ ಆಸಕ್ತಿ ಇಲ್ಲ. ವಿಶಾಲ ಮನೋಭಾವದ ಗುಣದಿಂದ ದೇವರ ರಕ್ಷಣೆ ಪ್ರಾಪ್ತಿಯಾಗುವುದು. ನೂತನ ಗೃಹ ನಿರ್ಮಾಣದ ಯೋಜನೆಗೆ ಯೋಚಿಸಬಹುದು.

ಸಿಂಹ: ವಿಶೇಷ ವ್ಯಕ್ತಿಗಳ ಭೇಟಿ ಸಂತೋಷ ತರುವುದಲ್ಲದೆ, ಹೊಸ ಯೋಜನೆಗಳಿಗೆ ಚೈತನ್ಯ ತುಂಬಲಿದೆ. ಶ್ರಮದಿಂದಾಗಿ ಸಾಲ ತೀರಿದ ನೆಮ್ಮದಿಯನ್ನು ಹೊಂದಬಹುದು.

ಕನ್ಯಾ: ಬಂದ ಅವಕಾಶವನ್ನು ವಿವೇಚನೆಯಿಂದ ಉಪಯೋಗಿಸಿಕೊಳ್ಳಿ. ಯಶಸ್ಸಿನ ಹಾದಿಯಲ್ಲಿದ್ದೀರಿ. ಯಶಸ್ಸಿಗೆ ಕಾರಣರಾದವರನ್ನು ಜೊತೆ ಇರಿಸಿಕೊಳ್ಳಿ. ಮದುವೆ ಕೆಲಸಗಳಿಗಾಗಿ ಓಡಾಟ ನಡೆಸುವಿರಿ.

ತುಲಾ: ಬಿಡುವಾದ ಸಂದರ್ಭದಲ್ಲಿ ಹತ್ತಿರದ ಶಿವನ ದೇವಾಲಯದಲ್ಲಿ ಕೈಲಾದ ಸೇವೆ ಮಾಡುವ ಆಲೋಚನೆ ಮಾಡಿ. ಕಮಿಷನ್ ಏಜೆಂಟರಿಗೆ ಮತ್ತು ಸರಕು ಸಾಗಣೆದಾರರಿಗೆ ಉತ್ತಮ ದಿನ.

ವೃಶ್ಚಿಕ: ನಿರ್ಧಾರದ ಬಗ್ಗೆ ಪುನರ್ ಪರಿಶೀಲಿಸಲು ಸ್ವಲ್ಪ ಸಮಯ ಮೀಸಲಿಡಿ. ಆಲೋಚನೆಗಳಿಗೆ ಗ್ರಹಣ ಸಂಭವಿಸಿದಂತಾಗುವುದರಿಂದ ಅಸಮಾಧಾನ, ಹೆದರಿಕೆ ಉಂಟಾಗಲಿದೆ.

ಧನು: ನೀವು ತೋರಿದ ತಾಳ್ಮೆಗೆ ಪ್ರತಿಯಾಗಿ ನಿಜವಾದ ಕಾರ್ಯಗಳಿಗೆ ಕಾಲ ಕೂಡಿಬರಲಿದೆ. ತೆರೆಮರೆಯಲ್ಲಿ ನಡೆಸಿದ ಕೆಲಸಗಳಿಂದ ಹೆಚ್ಚಿನ ಅಧಿಕಾರ ಪಡೆದುಕೊಳ್ಳುವಿರಿ. ಕಿರಿಯರಿಗೆ ಮಾರ್ಗದರ್ಶನದ ಅವಶ್ಯಕತೆ ಇದೆ.

ಮಕರ: ರಫ್ತು ಮಾರಾಟದಲ್ಲಿ ಸ್ವಲ್ಪ ಮಟ್ಟಿನ ಹಿನ್ನಡೆಯಾದರೂ ಆದಾಯಕ್ಕೇನೂ ತೊಂದರೆಯಿಲ್ಲ. ವೈಯಕ್ತಿಕ ವಿಷಯಗಳ ಬಗ್ಗೆ ನಿಗಾ ವಹಿಸಿ. ಬೆಲೆ ಬಾಳುವ ವಸ್ತು ಕಾಣೆಯಾಗುವ ಸಂಭವವಿದೆ. ಜಾಗ್ರತೆವಹಿಸಿ.


ಕುಂಭ: ಕೆಲಸದ ಹೊರತಾಗಿ ಕೆಲ ಸಮಯಗಳ ಕಾಲ ಸಂಗತಿಗಳ ಬಗ್ಗೆ ಗಮನ ಕೊಡುವುದರಿಂದ ಮಾನಸಿಕ ಒತ್ತಡ ಕಡಿಮೆಯಾಗುವುದು. ಅವಿವಾಹಿತರಿಗೆ ಕಂಕಣಭಾಗ್ಯ ಕೂಡಿಬರುವುದು.

ಮೀನ: ವಾತಾವರಣದಲ್ಲಿ ತೇವಾಂಶ ಹೆಚ್ಚಾಗುತ್ತಿದ್ದು, ದೇಹವನ್ನು ಶೀತ ಹೊಂದದಂತೆ ನೋಡಿಕೊಳ್ಳಿ. ದಾಂಪತ್ಯ ಜೀವನ ಸುಖಮಯವಾಗಿರುವುದು. ಜೀವನಪ್ರೀತಿ ಹೆಚ್ಚಲಿದೆ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 23,946
ಇಂದಿನ ಅಂತ್ಯ: 23,865
ದಿನದ ಕನಿಷ್ಠ: 23,829
80

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹710
	12 ಕ್ಕೆ	₹94
ಮೈಸೂರು:	100 ಕ್ಕೆ	₹725

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹461-703
ದ್ವಿತಳಿ (ಬಿ.ವಿ)	₹520-969

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹262
ಆರ್‌ಎಸ್‌ಎಸ್-5	₹257
ಗುಡ್ ಲಾಟ್	₹223

ಮುದ್ರೆ-ಮನೆ ಕಾಫಿ (50 ಕೆಜಿಗೆ)

ಎಪಿ	₹23,600
ಎಸಿ	₹14,000
ಆರ್‌ಪಿ	₹18,400
ಆರ್‌ಸಿ	₹10,050

ದಶಕಗಳ ಕನಿಷ್ಠ ಮಟ್ಟದಲ್ಲಿ ಎನ್‌ಪಿಎ

ಅರ್ಧವಾರ್ಷಿಕ ಆರ್ಥಿಕ ಸ್ಥಿರತೆ ವರದಿಯಲ್ಲಿ ಆರ್‌ಬಿಐ ಹೇಳಿಕೆ

ಮುಂಬೈ (ಪಿಟಿಐ): ದೇಶದ ಬ್ಯಾಂಕಿಂಗ್ ವ್ಯವಸ್ಥೆಯ ಒಟ್ಟು ಅನುತ್ಪಾದಕ ಆಸ್ತಿಗಳ (ಜಿಎನ್‌ಪಿಎ) ಪ್ರಮಾಣವು ಮಾರ್ಚ್ ಅಂತ್ಯದ ಹೊತ್ತಿಗೆ ಹಲವು ದಶಕಗಳ ಕನಿಷ್ಠ ಮಟ್ಟವಾದ ಶೇ 1.8ಕ್ಕೆ ಇಳಿಕೆ ಕಂಡಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೇಳಿದೆ.

‘ದೇಶದ ಅರ್ಥ ವ್ಯವಸ್ಥೆಯ ಮೂಲಭೂತ ಅಂಶಗಳು ಬಲಿಷ್ಠವಾಗಿವೆ. ಇವು ಭಾರತವನ್ನು ಇತರ ದೇಶಗಳಿಗೆ ಹೋಲಿಸಿದರೆ ಹೆಚ್ಚು ದೃಢವಾಗಿ ಇರಿಸಿವೆ. ಹಿಂದಿನ ಬಿಕ್ಕಟ್ಟುಗಳ ಸಂದರ್ಭಕ್ಕೆ ಹೋಲಿಸಿದರೆ ದೇಶವು ಈಗ ಇನ್ನಷ್ಟು ಹೆಚ್ಚು ಶಕ್ತಿಯುತವಾಗಿದೆ’ ಎಂದು ಆರ್‌ಬಿಐ ತನ್ನ ಅರ್ಧವಾರ್ಷಿಕ ಹಣಕಾಸು ಸ್ಥಿರತೆ ವರದಿಯಲ್ಲಿ ಹೇಳಿದೆ.

ಮುಖ್ಯಾಂಶಗಳು
- ಎನ್‌ಪಿಎ ತುಸು ಹೆಚ್ಚುವ ಸಾಧ್ಯತೆ ಇದೆ
- ಬ್ಯಾಂಕ್‌ಗಳ ಬಂಡವಾಳ ಸಂಗ್ರಹ ವೆಚ್ಚ ಹೆಚ್ಚಳ

ಆದರೆ ಪೂರೈಕೆ ವ್ಯವಸ್ಥೆ ಸರಿಹೋಗುವುದು ಇನ್ನಷ್ಟು ವಿಳಂಬ ಆಗಿ, ತೈಲದ ದರವು ಜಾಸ್ತಿ ಆದಲ್ಲಿ ಕರೆನ್ಸಿ ವಿನಿಮಯ ದರದಲ್ಲಿ ಅಸ್ಥಿರತೆ ಉಂಟಾಗುತ್ತದೆ ಎಂದು ವಿವರಿಸಿದೆ. ಆದರೆ ಅಮೆರಿಕ ಮತ್ತು ಇರಾನ್ ನಡುವಿನ ಮಧ್ಯಂತರ ಶಾಂತಿ ಒಪ್ಪಂದವು ದೇಶದ ಆರ್ಥಿಕ ಬೆಳವಣಿಗೆಗೆ ಪೂರಕವಾಗಿ ಒದಗಿಬರಬಹುದು ಎಂದಿದೆ.

ಆದರೆ ಜಿಎನ್‌ಪಿಎ ಪ್ರಮಾಣವು ಶೇ 1.9ರ ಮಟ್ಟಕ್ಕೆ ಏರಿಕೆ ಕಾಣುವ ಸಾಧ್ಯತೆಯೂ ಇದೆ ಎಂದು ವರದಿಯಲ್ಲಿ ಹೇಳಲಾಗಿದೆ.

ದೇಶದ ಬ್ಯಾಂಕಿಂಗ್ ವ್ಯವಸ್ಥೆಯು ಬಹಳ ಗಟ್ಟಿಯಾಗಿ ಇದೆಯಾದರೂ, ಉಳಿತಾಯ ಪ್ರವೃತ್ತಿಯ ಜನರು ಹೆಚ್ಚು ಗಳಿಕೆ ಸಿಗುವ ಷೇರುಗಳ ಹಾಗೂ ಮ್ಯೂಚುವಲ್ ಫಂಡ್‌ಗಳ ಕಡೆ ವಾಲುತ್ತಿರುವ ಕಾರಣದಿಂದಾಗಿ ಬ್ಯಾಂಕ್‌ಗಳ ಪಾಲಿಗೆ ಬಂಡವಾಳ ಸಂಗ್ರಹವು ಸವಾಲಿನ ಕೆಲಸ ವಾಗುತ್ತಿದೆ ಎಂದು ಅದು ವಿವರಿಸಿದೆ.

ಬ್ಯಾಂಕ್‌ಗಳ ಹೊಣೆಗಾರಿಕೆಯು ಈಗ ಕಡಿಮೆ ವೆಚ್ಚದ ಚಾಲ್ತಿ ಖಾತೆ, ಉಳಿತಾಯ ಖಾತೆಗಳಿಂದ ಹೆಚ್ಚಿನ ವೆಚ್ಚದ ಅವಧಿ ಠೇವಣಿಗಳು ಹಾಗೂ ಠೇವಣಿ ಪ್ರಮಾಣಪತ್ರದ ಕಡೆ ಸಾಗಿದೆ. ಇದರಿಂದಾಗಿ ಬ್ಯಾಂಕ್‌ಗಳ ಬಂಡವಾಳ ಸಂಗ್ರಹಣೆ ವೆಚ್ಚವು ಜಾಸ್ತಿ ಆಗಿದೆ. ಹೀಗಾಗಿ ಬ್ಯಾಂಕ್‌ಗಳು ಹೆಚ್ಚಿನ ಬಡ್ಡಿ ತಂದುಕೊಡುವ ಸಣ್ಣ ಉದ್ಯಮ ಸಾಲಗಳನ್ನು ಜಾಸ್ತಿ ನೀಡಲಾರಂಭಿಸಿವೆ ಎಂದು ವಿವರಿಸಿದೆ.

‘ಭಾರಿ ಪ್ರಮಾಣದ ಬಾಹ್ಯ ಆಘಾತಕ್ಕೆ ತುತ್ತಾಗಿದ್ದರೂ ದೇಶದ ಅರ್ಥ ವ್ಯವಸ್ಥೆ ಹಾಗೂ ಹಣಕಾಸಿನ ವ್ಯವಸ್ಥೆಯು ಗಮನಾರ್ಹವಾದ ಗಟ್ಟಿತನವನ್ನು ಪ್ರದರ್ಶಿಸಿವೆ. ಬೆಳವಣಿಗೆಯ ಗತಿ ಚೆನ್ನಾಗಿರುವುದು, ಹಣದುಬ್ಬರ ಕಡಿಮೆ ಮಟ್ಟದಲ್ಲಿರುವುದು ಹಾಗೂ ಹಣಕಾಸು ಸಂಸ್ಥೆಗಳ ಆರ್ಥಿಕ ಸ್ಥಿತಿ ಚೆನ್ನಾಗಿರುವುದು ದೇಶದ ಅರ್ಥ ವ್ಯವಸ್ಥೆಯಲ್ಲಿ ಸ್ಥಿರತೆ ಸಾಧಿಸಲು ನೆರವಾಗಿವೆ’ ಎಂದು ವರದಿಯ ಮುನ್ನುಡಿಯಲ್ಲಿ ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಅವರು ಹೇಳಿದ್ದಾರೆ.

ಪೆಟ್ರೊ ರಾಸಾಯನಿಕ: ಸುಂಕ ವಿನಾಯಿತಿ ವಿಸ್ತರಣೆ

ನವದೆಹಲಿ (ಪಿಟಿಐ): ಮಹತ್ವದ 40 ಬಗೆಯ ಪೆಟ್ರೊ ರಾಸಾಯನಿಕಗಳ ಆಮದಿಗೆ ನೀಡಿದ್ದ ಸೀಮಾಸುಂಕ ವಿನಾಯಿತಿಯನ್ನು ಕೇಂದ್ರ ಸರ್ಕಾರವು 15 ದಿನಗಳವರೆಗೆ ವಿಸ್ತರಣೆ ಮಾಡಿದೆ.

ಈ ಪೆಟ್ರೊ ರಾಸಾಯನಿಕಗಳ ಪೂರೈಕೆಯಲ್ಲಿ ಸ್ಥಿರತೆ ಮುಂದುವರಿಯಬೇಕು ಎಂಬ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಹೇಳಿದೆ.

ಇವುಗಳಿಗೆ ಸೀಮಾಸುಂಕ ವಿನಾಯಿತಿ ನೀಡಿ ಕೇಂದ್ರವು ಏಪ್ರಿಲ್ 2ರಂದು ಆದೇಶಿಸಿತ್ತು. ಇದು ಜೂನ್ 30ರವರೆಗೆ ಜಾರಿಯಲ್ಲಿತ್ತು. ಈಗ ವಿನಾಯಿತಿಯನ್ನು ಜುಲೈ 15ರವರೆಗೆ ವಿಸ್ತರಣೆ ಮಾಡಲಾಗಿದೆ.

ಸೀಮಾಸುಂಕ ವಿನಾಯಿತಿಯು ಪೆಟ್ರೊ ರಾಸಾಯನಿಕಗಳನ್ನು ಅವಲಂಬಿಸಿರುವ ಪ್ಲಾಸ್ಟಿಕ್, ಜವಳಿ, ಫಾರ್ಮಾ, ರಾಸಾಯನಿಕ,ವಾಹನ ಬಿಡಿಭಾಗ ಹಾಗೂ ಇತರ ಹಲವು ವಲಯಗಳಿಗೆ ಪ್ರಯೋಜನಕಾರಿ ಆಗಲಿದೆ ಎಂಬ ನಿರೀಕ್ಷೆ ಇದೆ ಎಂದು ಕೇಂದ್ರ ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1580 (1580)
ಸೋಯಾ (ರಿಫೈನ್ಡ್)	₹1455 (1465)
ಸೂರ್ಯಕಾಂತಿ (ರಿಫೈನ್ಡ್)	₹1655 (1655)
ಪಾಮೋಲಿನ್	₹1450 (1455)

ಮುಂಬೈ ಧಾರಣೆ (ಶೇಂಗಾ)
30-06-2026

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10200-10300
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1585 (1585)
ಪಾಮ್ ವಾರದ ಡೆಲಿವರಿ	1448 (1453)
ಸೂರ್ಯಕಾಂತಿ ಎಣ್ಣೆ ಕಚ್ಚಾ	1580 (1580)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,40,200 (1,40,500)
ಬೆಳ್ಳಿ ಕೆ.ಜಿಗೆ	2,25,000 (2,20,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸೆಣಬು ಹದಗೊಳಿಸುವ ಕಲೆ

–ಪಿಟಿಐ ಚಿತ್ರ



ಅಸ್ಸಾಂ ರಾಜ್ಯದ ನಾಗಾಂವ್‌ನಲ್ಲಿ ಕೊಯ್ದ ಸೆಣಬನ್ನು ಹದಗೊಳಿಸುವ ಕಾರ್ಯದಲ್ಲಿ ಕಾರ್ಮಿಕರು ತೊಡಗಿದ್ದರು

‘ಇಂಡೊ ಪೆಸಿಫಿಕ್ ಕಮಾಂಡ್’ ಹೆಸರು ಬದಲಾವಣೆ ವಿವಾದ

‘ಭಾರತ, ಅಮೆರಿಕ ಬಾಂಧವ್ಯ ಸದೃಢ’

ವಾಷಿಂಗ್ಟನ್ (ಪಿಟಿಐ): ‘ಇಂಡೊ–ಪೆಸಿಫಿಕ್ ಕಮಾಂಡ್’ ಹೆಸರಿನಿಂದ ‘ಇಂಡೊ’ ಪದ ಕೈಬಿಟ್ಟಿರುವ ಕುರಿತು ಉಂಟಾಗಿರುವ ವಿವಾದದ ಕುರಿತು ಪ್ರತಿಕ್ರಿಯಿಸಿರುವ ಭಾರತದಲ್ಲಿನ ಅಮೆರಿಕ ರಾಯಭಾರಿ ಸರ್ಗಿಯೊ ಗೋರ್,‘ಲೆಟರ್‌ಹೆಡ್’ನಲ್ಲಿನ ಹೆಸರು ಮುಖ್ಯವಾಗುವುದಿಲ್ಲ. ‘ಇಂಡೊ’ ಪದವನ್ನು ಕೈಬಿಟ್ಟದ್ದರೂ ಉಭಯ ದೇಶಗಳ ಬಾಂಧವ್ಯ ಗಟ್ಟಿಯಾಗಿಯೇ ಇದೆ’ ಎಂದು ಹೇಳಿದ್ದಾರೆ.

ಅಮೆರಿಕ–ಭಾರತ ರಕ್ಷಣಾತ್ಮಕ ಪಾಲುದಾರಿಕೆ ವೇದಿಕೆಯ ‘ನಾಯಕತ್ವ ಶೃಂಗಸಭೆ’ ಉದ್ದೇಶಿಸಿ ಮಾತನಾಡಿದ ಅವರು,‘ಇತರ ಯಾವುದೇ ದೇಶಗಳಿಗಿಂತ ಭಾರತವು ಅಮೆರಿಕದೊಂದಿಗೆ ಹೆಚ್ಚಿನ ಪ್ರಮಾಣದಲ್ಲಿ ಸೇನಾ ತಾಲೀಮುಗಳನ್ನು ನಡೆಸುತ್ತದೆ. ಉಭಯ ದೇಶಗಳ ರಕ್ಷಣಾ ಅಧಿಕಾರಿಗಳು ಮೇಲಿಂದ ಮೇಲೆ ಭೇಟಿಯಾಗಿ ದ್ವಿಪಕ್ಷೀಯ ಮಾತುಕತೆ ನಡೆಸುತ್ತಾರೆ’ ಎಂದು ಹೇಳಿದ್ದಾರೆ.

‘ಇಂಡೊ–ಪೆಸಿಫಿಕ್ ಕಮಾಂಡ್ ಹೆಸರನ್ನು ಬದಲಾಯಿಸಿದ್ದರೂ ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧ ದುರ್ಬಲವಾಗಿಲ್ಲ. ಈ ವಿಚಾರ ಮುಂದಿಟ್ಟುಕೊಂಡು ಕೆಲವರು ಹುಯಿಲೆಬ್ಬಿಸುತ್ತಿದ್ದಾರೆ. ಇದರ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ’ ಎಂದು ಗೋರ್ ಹೇಳಿದ್ದಾರೆ.

‘ಮುಂದಿನ ಎರಡು ವಾರ ಭಾರತದ ನೌಕಾಪಡೆಯ ನಿಯೋಗಗಳು ಅಮೆರಿಕಕ್ಕೆ ಭೇಟಿ ನೀಡುತ್ತಿವೆ. ಪ್ರತಿ ತಿಂಗಳು ಉಭಯ ದೇಶಗಳ ಸೇನೆಗಳು ಒಂದಿಲ್ಲೊಂದು ಕಾರ್ಯದಲ್ಲಿ ಭಾಗಿಯಾಗಿರುತ್ತವೆ. ಭಾರತೀಯ ಸೈನಿಕರು ಇಲ್ಲಿಗೆ ಬರುತ್ತಿರುತ್ತಾರೆ ಇಲ್ಲವೇ ಅಮೆರಿಕ ಯೋಧರು ಭಾರತದಲ್ಲಿ ನಡೆಯುವ ತಾಲೀಮಿನಲ್ಲಿ ಪಾಲ್ಗೊಂಡಿರುತ್ತಾರೆ’ ಎಂದೂ ಹೇಳಿದ್ದಾರೆ.

‘ಪೆಸಿಫಿಕ್ ಕಮಾಂಡ್’ಅನ್ನು 1947ರಲ್ಲಿ ಸ್ಥಾಪಿಸಲಾಗಿತ್ತು. ಅತ್ಯಂತ ಹಳೆಯ ಸೇನಾ ಕಮಾಂಡ್ ಆಗಿರುವ ಇದು, ಅಮೆರಿಕದ ಪಶ್ಚಿಮ ಕರಾವಳಿಯಿಂದ ಭಾರತದ ಪಶ್ಚಿಮ ಗಡಿವರೆಗೆ ವ್ಯಾಪ್ತಿ ಹೊಂದಿತ್ತು.

ಡೊನಾಲ್ಡ್ ಟ್ರಂಪ್ ಅವರು ಅಧ್ಯಕ್ಷರಾಗಿದ್ದ ಮೊದಲ ಅವಧಿಯಲ್ಲಿ, ಕಮಾಂಡ್‌ನ ಹೆಸರನ್ನು ‘ಇಂಡೊ–ಪೆಸಿಫಿಕ್ ಕಮಾಂಡ್’ ಎಂದು ಬದಲಾಯಿಸಲಾಗಿತ್ತು. ಹಿಂದೂಮಹಾಸಾಗರ–ಪೆಸಿಫಿಕ್ ಪ್ರದೇಶದಲ್ಲಿ ಭಾರತದ ಪ್ರಾಮುಖ್ಯ ಹೆಚ್ಚುತ್ತಿರುವುದನ್ನು ಪರಿಗಣಿಸಿ, ಅಮೆರಿಕ ಈ ಕ್ರಮ ಕೈಗೊಂಡಿತ್ತು.

ಆದರೆ, ಜೂನ್ ಆರಂಭದಲ್ಲಿ ‘ಇಂಡೊ’ ಪದವನ್ನು ಕೈಬಿಟ್ಟ ಅಮೆರಿಕ, ಮೊದಲಿನಂತೆ ‘ಪೆಸಿಫಿಕ್ ಕಮಾಂಡ್’ ಎಂದು ಮರುನಾಮಕರಣ ಮಾಡಿದೆ. ಇದು, ವಿವಾದಕ್ಕೆ ಕಾರಣವಾಗಿದೆ.

ಟ್ರಂಪ್, ಮೋದಿ ಬಾಂಧವ್ಯ ಮೆಲುಕು

ಭಾರತದೊಂದಿಗಿನ ಸಂಬಂಧಕ್ಕೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಹತ್ವ ನೀಡುತ್ತಾರೆ ಎಂದು ಹೇಳಿದ ಗೋರ್, ಟ್ರಂಪ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕರೆ ಮಾಡಲು ನಿರ್ಧರಿಸಿದ ವೇಳೆ ನಡೆದ ಘಟನೆಯನ್ನು ಮೆಲುಕು ಹಾಕಿದರು.

‘ಕೆಲ ತಿಂಗಳ ಹಿಂದೆ ನಡೆದ ಘಟನೆ ಇದು. ಪ್ರಧಾನಿ ಮೋದಿ ಅವರಿಗೆ ಕರೆ ಮಾಡೋಣ ಎಂದು ನನಗೆ ಸೂಚಿಸಿದರು’ ಎಂದು ಗೋರ್ ಹೇಳಿದರು. ಇದಕ್ಕೆ, ‘ಸರ್, ಈಗ ಭಾರತದಲ್ಲಿ ಬೆಳಗಿನ 6 ಗಂಟೆ ಸಮಯ ಎಂದು ನಾನು ಪ್ರತಿಕ್ರಿಯಿಸಿದೆ’.ಆಗ, ‘ಅವರು(ಮೋದಿ) ನನ್ನಂತೆ ಈಗಾಗಲೇ ಎದ್ದಿರುತ್ತಾರೆ ಎಂದು ಟ್ರಂಪ್ ಪ್ರತಿಕ್ರಿಯಿಸಿದರು. ಬಳಿಕ, ಭಾರತದ ಕೆಲ ಗಣ್ಯರೊಂದಿಗೆ ಟ್ರಂಪ್ ಅದಾಗಲೇ ಮಾತುಕತೆ ನಡೆಸಿದ್ದರಲ್ಲದೇ, ಮೋದಿ ಅವರೊಂದಿಗಿನ ಮಾತುಕತೆ ಯುದ್ಧ ಮಾರನೇ ದಿನವೇ ನಿಗದಿ ಮಾಡಲಾಗಿತ್ತು’ ಎಂದು ಹೇಳಿದರು.

‘ಈ ಘಟನೆ ಟ್ರಂಪ್ ಹಾಗೂ ಪ್ರಧಾನಿ ಮೋದಿ ನಡುವಿನ ಸಂಬಂಧವನ್ನು ತೋರಿಸುತ್ತದೆ’ ಎಂದರು.

‘ಅಂತಿಮ ಹಂತದಲ್ಲಿ ವ್ಯಾಪಾರ ಒಪ್ಪಂದ’

‘ಅಮೆರಿಕ ಮತ್ತು ಭಾರತ ನಡುವಿನ ವ್ಯಾಪಾರ ಒಪ್ಪಂದವು ಅಂತಿಮ ಹಂತದಲ್ಲಿದೆ. ಶೇ1ರಷ್ಟು ಮಾತುಕತೆ ಬಾಕಿ ಇದೆ’ ಎಂದು ಹೇಳಿದ ಸರ್ಗಿಯೊ ಗೋರ್, ಒಪ್ಪಂದಕ್ಕೆ ಶೀಘ್ರವೇ ಸಹಿ ಹಾಕುವ ವಿಶ್ವಾಸ ಹೊಂದಿರುವುದಾಗಿ ಹೇಳಿದ್ದಾರೆ. ‘ಒಪ್ಪಂದ ಕುರಿತ ಮಾತುಕತೆ ಬಹುತೇಕ ಪೂರ್ಣಗೊಂಡಿದೆ. ಕೆಲ ಅಂಶಗಳ ಕುರಿತು ಎರಡೂ ಕಡೆಯವರಿಂದ ಮಾತುಕತೆ ನಡೆಯುತ್ತಿದೆ’ ಎಂದರು.

ಮೊಬೈಲ್ ಆ್ಯಪ್ ಬಳಕೆ ತರಬೇತಿ ಇಲ್ಲ

ಒಂದನೇ ಪುಟದಿಂದ...

‘ಗಣತಿ ನಮೂನೆಗಳ ವಿತರಣಾ ಕಾರ್ಯವನ್ನು ಮಂಗಳವಾರ ಆರಂಭಿಸಲೇಬೇಕಿದ್ದ ಕಾರಣಕ್ಕೆ, ವಿತರಣೆ ಮಾಡಲು ಅಗತ್ಯವಿರುವಷ್ಟು ಮಾತ್ರ ಮಾಹಿತಿ ನೀಡಿದರು. ಕೆಲಸ ಮುಂದುವರಿಸಿ, ಒಂದೆರಡು ದಿನಗಳಲ್ಲಿ ತರಬೇತಿ ನೀಡುತ್ತೇವೆ ಎಂದು ಮೇಲ್ವಿಚಾರಕರು ತಿಳಿಸಿದರು’ ಎಂದು ಜಿಬಿಎ ಕೇಂದ್ರ ಪಾಲಿಕೆ ವ್ಯಾಪ್ತಿಯ ಬಿಎಲ್‌ಒ ಒಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ನಾವು ಗಣತಿ ನಮೂನೆಯನ್ನು ವಿತರಿಸಿ, ವಿವರ ಭರ್ತಿ ಮಾಡಿದ ನಮೂನೆಗಳನ್ನು ಸಂಗ್ರಹಿಸಿದ್ದೇವೆ. ಆದರೆ, ಅವುಗಳನ್ನು ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡುವುದು ಹೇಗೆ ಎಂದು ಹೇಳಿಕೊಟ್ಟಿಲ್ಲ. ಹೀಗಾಗಿ ಅಪ್‌ಲೋಡ್ ಮಾಡಲಾಗಿಲ್ಲ. ದಿಢೀರ್ ಎಂದು ಆ್ಯಪ್ ನೀಡಿ, ಆ ಮೂಲಕ ಕೆಲಸ ಮಾಡಿ ಎನ್ನುತ್ತಿದ್ದಾರೆ. ವಿಡಿಯೊ ಮೂಲಕ ಆ್ಯಪ್ ಬಳಕೆ ಬಗ್ಗೆ ತಿಳಿದುಕೊಂಡು, ಕೆಲಸ ಮಾಡಿದೆವು. ಈ ಕಾರಣದಿಂದ ಇಡೀ ದಿನ ಎರಡು ನಮೂನೆಗಳನ್ನಷ್ಟೇ ವಿತರಿಸಲು ಸಾಧ್ಯವಾಯಿತು’ ಎಂದು ತುಮಕೂರು ಜಿಲ್ಲೆಯ ಬಿಎಲ್‌ಒ ಒಬ್ಬರು ಅಸಹಾಯಕತೆ ತೋಡಿಕೊಂಡರು.

ರಾಜ್ಯದಾದ್ಯಂತ ಮೊದಲ ದಿನವೇ 12.48 ಲಕ್ಷ ಗಣತಿ ನಮೂನೆಗಳನ್ನು ವಿತರಿಸಲಾಗಿದೆ. ಆದರೆ ಈ ಪೈಕಿ ಡಿಜಿಟಲೀಕರಿಸಲು ಸಾಧ್ಯವಾಗಿರುವುದು 47,817 ನಮೂನೆಗಳು ಮಾತ್ರ. ಭರ್ತಿ ಮಾಡಿದ ನಮೂನೆಗಳನ್ನು ಪಡೆದುಕೊಂಡಿದ್ದರೂ, ಆ್ಯಪ್‌ನಲ್ಲಿ ದಾಖಲಾಗದ ಕಾರಣ ಎಷ್ಟು ನಮೂನೆಗಳನ್ನು ಸಂಗ್ರಹಿಸಲಾಗಿದೆ ಎಂಬ ಪೂರ್ಣ ಮಾಹಿತಿ ಸಿಕ್ಕಿಲ್ಲ.

‘ಈ ಆ್ಯಪ್ ಬಳಕೆ ಕುರಿತಾಗಿ ಮತದಾರರ ನೋಂದಣಾಧಿಕಾರಿ, ಮತ್ತು ಸಹಾಯಕ ಮತದಾರರ ನೋಂದಣಾಧಿಕಾರಿಗಳಿಗೆ ತರಬೇತಿ ನೀಡಲಾಗಿದೆ. ಆದರೆ ನಂತರದ ಹಂತದ ಅಧಿಕಾರಿಗಳಿಗೆ ಪ್ರಾಯೋಗಿಕ ತರಬೇತಿಯಾಗಿಲ್ಲ. ತರಬೇತಿಯ ವಿಡಿಯೊವನ್ನು ಬಿಎಲ್‌ಒ ಮೇಲ್ವಿಚಾರಕರಿಗೆ ಕಳುಹಿಸಿ, ಅದನ್ನೇ ಬಿಎಲ್‌ಒಗಳಿಗೆ ಕಳುಹಿಸಿ ಎಂದು ಸೂಚಿಸುತ್ತಿದ್ದಾರೆ. ಸ್ಮಾರ್ಟ್‌ಫೋನ್ ಬಳಕೆಯ ಚಾಕಚಕ್ಯತೆ ಇದ್ದವರು, ತರಬೇತಿ ಇಲ್ಲದಿದ್ದರೂ ಗಣತಿ ನಮೂನೆಗಳನ್ನು ಡಿಜಿಟಲೀಕರಣ ಮಾಡುತ್ತಿದ್ದಾರೆ. ಆದರೆ, ಬಹುತೇಕ ಬಿಎಲ್‌ಒಗಳಿಗೆ ಇದು ಸಾಧ್ಯವಾಗುತ್ತಿಲ್ಲ’ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಿಎಲ್‌ಒ ಮೇಲ್ವಿಚಾರಕರೊಬ್ಬರು ಮಾಹಿತಿ ನೀಡಿದರು. ಜಿಬಿಎ ಕೇಂದ್ರ ಪಾಲಿಕೆ ವ್ಯಾಪ್ತಿಯ ಮತದಾರರ ನೋಂದಣಾಧಿಕಾರಿ ಒಬ್ಬರು, ‘ಗಣತಿ ನಮೂನೆ ಸಂಗ್ರಹದ ವೇಳೆಯೇ ವಿವರಗಳನ್ನು ತಿದ್ದುಪಡಿ ಮಾಡಲು ಅವಕಾಶವಿದೆ. ಆದರೆ, ತರಬೇತಿ ಇಲ್ಲದ ಕಾರಣ ಹಲವು ಬಿಎಲ್‌ಒಗಳು ಗಣತಿ ನಮೂನೆಯನ್ನು ವಿತರಿಸಿ ಬಂದಿದ್ದಾರೆ. ತರಬೇತಿ ಪಡೆದ ನಂತರ ಮತ್ತೊಮ್ಮೆ ಆ ಮನೆಗಳಿಗೆ ಭೇಟಿ ನೀಡಿ, ಪ್ರಕ್ರಿಯೆ ಪೂರ್ಣಗೊಳಿಸಬೇಕಿದೆ. ತರಬೇತಿ ಇಲ್ಲದ ಕಾರಣಕ್ಕೆ, ಒಂದೇ ಕೆಲಸಕ್ಕಾಗಿ ಪ್ರತಿ ಮನೆಗೆ ಮತ್ತೆ-ಮತ್ತೆ ಭೇಟಿ ಕೊಡಬೇಕಾಗುತ್ತದೆ’ ಎಂದರು.

ಶೇ 2.25ರಷ್ಟು ಪ್ರಗತಿ

ಬಿಎಲ್‌ಒಗಳು ಮೊದಲ ದಿನ ರಾಜ್ಯದಾದ್ಯಂತ ಒಟ್ಟು 12.48 ಲಕ್ಷದಷ್ಟು ಗಣತಿ ನಮೂನೆಗಳನ್ನು ವಿತರಿಸಿದ್ದಾರೆ. ರಾಜ್ಯದಲ್ಲಿ ಒಟ್ಟು 5.54 ಕೋಟಿ ಮತದಾರರು ಇದ್ದು, ಈ ಪೈಕಿ ಮೊದಲ ದಿನವೇ ಶೇ 2.25ರಷ್ಟು ಮತದಾರರು ಗಣತಿ ನಮೂನೆಗಳನ್ನು ಪಡೆದುಕೊಂಡಿದ್ದಾರೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯ ಪ್ರಕಟಣೆ ತಿಳಿಸಿದೆ.

ಹಾಸನ ಜಿಲ್ಲೆಯಲ್ಲಿ ಅತಿಹೆಚ್ಚು, 1.46 ಲಕ್ಷ ಗಣತಿ ನಮೂನೆಗಳನ್ನು ವಿತರಿಸಿದ್ದು, 1,793 ನಮೂನೆಗಳನ್ನು ಮಾತ್ರ ಡಿಜಿಟಲೀಕರಿಸಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಇಡೀ ದಿನ ವಿತರಿಸಲು ಸಾಧ್ಯವಾಗಿರುವುದು 3,923 ಗಣತಿ ನಮೂನೆಗಳನ್ನು ಮಾತ್ರ. ಈ ಪೈಕಿ 266 ನಮೂನೆಗಳನ್ನು ಡಿಜಿಟಲೀಕರಿಸಲಾಗಿದೆ.

47,817 ಡಿಜಿಟಲೀಕರಿಸಿದ ಗಣತಿ ನಮೂನೆಗಳ ಸಂಖ್ಯೆ

6,840 ಆನ್‌ಲೈನ್ ಮೂಲಕ ಗಣತಿ ನಮೂನೆ ಸಲ್ಲಿಸಿದ ಮತದಾರರು

488 ವಿಳಾಸ ಬದಲಾದ, ಮೃತಪಟ್ಟ ಮತ್ತು ಎರಡು ಕಡೆ ಮತದಾರ ಚೀಟಿ ಹೊಂದಿದ್ದ ಮತದಾರರು

ಎಚ್ಚರಿಕೆಯಿಂದ ನಮೂನೆ ತುಂಬಿರಿ: ಸಿ.ಎಂ

ತಮ್ಮ ಎನ್ಯುಮರೇಶನ್ ಅರ್ಜಿ (ಗಣತಿ ನಮೂನೆ) ಭರ್ತಿ ಮಾಡುವ ಮೂಲಕ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರಾಜ್ಯದಲ್ಲಿ ವಿಶೇಷ ಎಸ್‌ಐಆರ್ ಪ್ರಕ್ರಿಯೆಗೆ ಚಾಲನೆ ನೀಡಿದರು.

ಸದಾಶಿವನಗರ ನಿವಾಸದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ಶಿವಕುಮಾರ್ ಹಾಗೂ ಅವರ ಪತ್ನಿ ಉಷಾ ಶಿವಕುಮಾರ್ ಅವರು ಗಣತಿ ನಮೂನೆ ತುಂಬಿದರು. ‘ಎಲ್ಲರೂ ಎಚ್ಚರಿಕೆಯಿಂದ ಗಣತಿ ನಮೂನೆಗಳನ್ನು ತುಂಬಬೇಕು. ಇದು ನಿಮ್ಮ ಪೌರತ್ವವನ್ನು ನಿರ್ಧರಿಸಲಿದೆ’ ಎಂದು ರಾಜ್ಯದ ಮತದಾರರಿಗೆ ಕಿವಿಮಾತು ಹೇಳಿದರು.

ಮುಖ್ಯ ಚುನಾವಣಾಧಿಕಾರಿ ಮನೆಯಲ್ಲೂ ಚಾಲನೆ: ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ಅವರ ಜಕ್ಕೂರು ನಿವಾಸಕ್ಕೆ ಭೇಟಿ ನೀಡಿದ್ದ ಮತಗಟ್ಟೆ ಅಧಿಕಾರಿಗಳು, ಗಣತಿ ನಮೂನೆಯನ್ನು ವಿತರಿಸಿದರು. ಅನ್ಬುಕುಮಾರ್ ಮತ್ತು ಕುಟುಂಬದ ಸದಸ್ಯರು ಗಣತಿ ನಮೂನೆಯನ್ನು ಭರ್ತಿ ಮಾಡಿ, ಮತಗಟ್ಟೆ ಅಧಿಕಾರಿಗಳಿಗೆ ಹಿಂತಿರುಗಿಸಿದರು.

ಆಯೋಗದ ಪಾತ್ರ ಕುರಿತು ಸಿಜೆಐಗೆ ವಿಪಕ್ಷಗಳ ಪತ್ರ

ಒಂದನೇ ಪುಟದಿಂದ...

‘ಆಯೋಗವು ಚುನಾವಣೆಗಳನ್ನು ನಿಷ್ಪಕ್ಷಪಾತವಾಗಿ ನಡೆಸುತ್ತಿಲ್ಲ ಹಾಗೂ ಫಲಿತಾಂಶಗಳನ್ನು ತಿರುಚುತ್ತಿದೆ. ಆಯೋಗದ ಇಂತಹ ನಡೆಗಳು ಹಾಗೂ ಎಸ್‌ಐಆರ್ ಕುರಿತು ಪರಾಮರ್ಶೆ ನಡೆಸುವಂತೆ ಈ ಪತ್ರದ ಮೂಲಕ ‘ನ್ಯಾಯಾಂಗದ ಆತ್ಮಸಾಕ್ಷಿ’ಗೆ ಮನವಿ ಮಾಡುತ್ತೇವೆ’ ಎಂದು ವಿಪಕ್ಷಗಳು ಈ ಪತ್ರದಲ್ಲಿ ಹೇಳಿವೆ.

ಕತಾರ್‌ಗೆ ಬಂದಿಳಿದ ವಿಟ್ಕಾಫ್, ಕಶ್ನರ್

ದುಬೈ(ಎಪಿ): ಇರಾನ್ ಜೊತೆಗಿನ ಯುದ್ಧವನ್ನು ಕೊನೆಗಾಣಿಸುವ ಉದ್ದೇಶದ ಶಾಂತಿ ಒಪ್ಪಂದದ ಪ್ರಾಥಮಿಕ ಅಂಶಗಳ ಅನುಷ್ಠಾನಕ್ಕೆ ಸಂಬಂಧಿಸಿ ಮಾತುಕತೆ ನಡೆಸುವುದಕ್ಕಾಗಿ ಅಮೆರಿಕದ ಇಬ್ಬರು ಪ್ರತಿನಿಧಿಗಳು ಕತಾರ್‌ಗೆ ಮಂಗಳವಾರ ಬಂದಿಳಿದಿದ್ದಾರೆ.

‘ಡೊನಾಲ್ಡ್ ಟ್ರಂಪ್ ಅವರ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್, ಶ್ವೇತಭವನದ ಸಲಹೆಗಾರ ಜಾರೆಡ್ ಕಶ್ನರ್ ಅವರು ರಾಜಧಾನಿ ದೋಹಾಕ್ಕೆ ಬಂದಿಳಿದಿದ್ದಾರೆ’ ಎಂದು ಕತಾರ್ ವಿದೇಶಾಂಗ ಸಚಿವಾಲಯ ವಕ್ತಾರ ಮಜೀದ್ ಅಲ್ ಅನ್ಸಾರಿ ಹೇಳಿದ್ದಾರೆ.‘ಅಮೆರಿಕದ ಈ ಇಬ್ಬರು ಪ್ರತಿನಿಧಿಗಳು ಇರಾನ್ ರಾಜತಾಂತ್ರಿಕರೊಂದಿಗೆ ನೇರ ಮಾತುಕತೆ ನಡೆಸುವುದಿಲ್ಲ. ಮಧ್ಯಸ್ಥಿಕೆದಾರರ ಮೂಲಕವೇ ಮಾತುಕತೆ ನಡೆಯಲಿದೆ’ ಎಂದೂ ಅನ್ಸಾರಿ ತಿಳಿಸಿದ್ದಾರೆ.

‘ಇರಾನ್‌ನ ನಿಯೋಗವೊಂದು ಈ ವಾರ ಕತಾರ್‌ಗೆ ತೆರಳಲಿದೆ. ಅಮೆರಿಕದ ಪ್ರತಿನಿಧಿಗಳೊಂದಿಗೆ ಇರಾನ್ ರಾಜತಾಂತ್ರಿಕ ಅಧಿಕಾರಿಗಳು ಮಾತುಕತೆ ನಡೆಸುವ ಯಾವುದೇ ಯೋಜನೆ ಇಲ್ಲ’ ಎಂದು ಇರಾನ್ ವಿದೇಶಾಂಗ ಸಚಿವಾಲಯ ವಕ್ತಾರ ಎಸ್ಮಾಯಿಲ್ ಬಾಘೈ ಹೇಳಿದ್ದಾರೆ.

ಅಡಿಕೆ ಧಾರಣೆ

ಶಿವಮೊಗ್ಗ		ಬಿಳಿಗೋಟು	27880-30599	ಕೆಂಪುಗೋಟು	30600-35500
ಸರಕು/ಹಸ	56599-91896	ಚಾಲಿ	38199-39230	ರಾಶಿ	46889-50099
ಬೆಟ್ಟೆ	54829-61299	ಕೋಕ	18999-19299	ತಟ್ಟಿಬೆಟ್ಟೆ	36900-45229
ರಾಶಿಇಡಿ	40399-52109	ಕೆಂಪುಗೋಟು	36599-36599	**ಯಲ್ಲಾಪುರ**	
ಗೊರಬಲು	19389-42719	ರಾಶಿ	48569-50609	ಬಿಳಿಗೋಟು	16909-33892
ಪುತ್ತೂರು		ಸಿಪ್ಪೆಗೋಟು	21601-21601	ಚಾಲಿ	37005-46751
ಕೋಕ	20000-33000	**ಸಿದ್ದಾಪುರ**		ಕೋಕ	16000-24369
ಹೊಸತು	30000-47000	ಬಿಳಿಗೋಟು	25619-34609	ಕೆಂಪುಗೋಟು	16829-34506
ಹಳತು	49000-55000	ಚಾಲಿ	37609-45599	ರಾಶಿ	48906-53039
ಸಾಗರ		ಕೋಕ	22400-32299	ತಟ್ಟಿಬೆಟ್ಟೆ	36666-44100

ಸಣ್ಣ ಉಳಿತಾಯ ಬಡ್ಡಿ ಯಥಾಸ್ಥಿತಿ

ನವದೆಹಲಿ (ಪಿಟಿಐ): ಸಾರ್ವಜನಿಕ ಉಳಿತಾಯ ಯೋಜನೆ (ಪಿಪಿಎಫ್), ರಾಷ್ಟ್ರೀಯ ಉಳಿತಾಯ ಪ್ರಮಾಣಪತ್ರ (ಎನ್‌ಎಸ್‌ಸಿ) ಸೇರಿದಂತೆ ವಿವಿಧ ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿ ದರವನ್ನು ಕೇಂದ್ರ ಸರ್ಕಾರವು ಜುಲೈ 1ರಿಂದ ಆರಂಭವಾಗುವ ತ್ರೈಮಾಸಿಕದಲ್ಲಿ ಯಥಾಸ್ಥಿತಿಯಲ್ಲಿ ಇರಿಸಿದೆ.

ಇದರಿಂದಾಗಿ ಸತತ ಒಂಬತ್ತು ತ್ರೈಮಾಸಿಕಗಳವರೆಗೆ ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿ ದರವು ಬದಲಾಗದೆ ಉಳಿದಂತಾಗಿದೆ.

ಕೇಂದ್ರ ಹಣಕಾಸು ಸಚಿವಾಲಯ ಹೊರಡಿಸಿರುವ ಅಧಿಸೂಚನೆ ಅನ್ವಯ ಸುಕನ್ಯಾ ಸಮೃದ್ಧಿ ಯೋಜನೆಗೆ ನೀಡುವ ಬಡ್ಡಿ ಶೇ 8.2ರ ಮಟ್ಟದಲ್ಲಿ, ಮೂರು ವರ್ಷಗಳ ಅವಧಿ ಠೇವಣಿ ಬಡ್ಡಿ ದರ ಶೇ 7.1ರ ಮಟ್ಟದಲ್ಲಿ ಉಳಿಯಲಿದೆ.

ಕೆಲವು ಪ್ರಮುಖ ಯೋಜನೆಗಳ ಬಡ್ಡಿ ದರ ಹೀಗಿರಲಿದೆ

ಪಿಪಿಎಫ್	7.1%
ಅಂಚೆ ಕಚೇರಿ ಉಳಿತಾಯ ಠೇವಣಿ	4%
ಕಿಸಾನ್ ವಿಕಾಸ ಪತ್ರ	7.5%
ಎನ್‌ಎಸ್‌ಸಿ	7.7%
ಮಾಸಿಕ ಉಳಿತಾಯ ಯೋಜನೆ	7.4%

ಡ್ರಗ್ಸ್ ಮುಕ್ತ ಕರ್ನಾಟಕ ಗುರಿ

ಫ್ಲ್ಯಾಪ್ ಒಂದನೇ ಪುಟದಿಂದ...

ಯುವಜನರಿಗೆ ಅರ್ಥವಾಗುವ, ಅವರ ಮನಸ್ಸಿಗೆ ಹತ್ತಿರವಾಗುವ ಮತ್ತು ಯುವ ಸ್ನೇಹಿ ಸಂದೇಶಗಳ ಮೂಲಕ ಮಾದಕ ವ್ಯಸನದ ದೈಹಿಕ, ಮಾನಸಿಕ, ಸಾಮಾಜಿಕ ಹಾಗೂ ಕಾನೂನುಬದ್ಧ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಗುತ್ತದೆ.

ಗೃಹ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ‘ಆಪರೇಷನ್ ರೈಸ್ ಮತ್ತು ಬೇಡ ಬ್ರೋ ಅಭಿಯಾನವನ್ನು ರಾಜ್ಯದಾದ್ಯಂತ ಹಮ್ಮಿಕೊಳ್ಳಲಾಗುವುದು. ಬೇಡ ಬ್ರೋ ಎಂಬುದು ಕೇವಲ ಅಭಿಯಾನವಲ್ಲ, ಯುವಜನರ ಬದುಕು ಉಳಿಸುವ ಸಾಮಾಜಿಕ ಸಂದೇಶವಾಗಿದೆ’ ಎಂದು ಹೇಳಿದರು.

ಡಿ.ಕೆ.ಶಿವಕುಮಾರ್ ಮಾತನಾಡಿ, ‘2028ರ ವೇಳೆಗೆ ಮಾದಕ ವಸ್ತು ಮುಕ್ತ ಕರ್ನಾಟಕ ರೂಪಿಸುವುದು ನಮ್ಮ ಗುರಿ. ಸಾರ್ವಜನಿಕರು, ಯುವಜನರು ಮತ್ತು ವಿದ್ಯಾರ್ಥಿಗಳು ಸರ್ಕಾರದ ಜೊತೆ ಕೈ ಜೋಡಿಸಿದರೆ ಈ ದಂಧೆಯನ್ನು ಇಲ್ಲವಾಗಿಸಬಹುದು’ ಎಂದರು.

‘ನಶೆ ಬಿಡಿ, ಖುಷಿ ಪಡಿ ಇದು ನಮ್ಮ ಚಿಂತನೆ. ಸಮಾಜದಲ್ಲಿ ಗೌರವ ಹಾಳಾಗಲಿದೆ ಎಂದು ಪೋಷಕರು ಯಾವುದೇ ವಿಚಾರವನ್ನು ಮುಚ್ಚಿಟ್ಟುಕೊಳ್ಳಬಾರದು. ಪೊಲೀಸರನ್ನು ವಿಶ್ವಾಸಕ್ಕೆ ಪಡೆದು ಇದರ ಮೂಲವನ್ನು ಕಂಡುಹಿಡಿಯಲು ಸಹಾಯ ಮಾಡಬೇಕು. ಮಕ್ಕಳ ಹೆಸರು ಬಹಿರಂಗಗೊಳಿಸದಂತೆ ಪೊಲೀಸ್ ಇಲಾಖೆಗೆ ಮಾರ್ಗದರ್ಶನ ನೀಡಲಾಗುವುದು’ ಎಂದು ತಿಳಿಸಿದರು.

ರಾಜ್ಯ ಪೊಲೀಸರು ವಶಪಡಿಸಿಕೊಂಡಿದ್ದ ₹97.90 ಕೋಟಿ ಮೌಲ್ಯದ 4,276.405 ಕಿಲೋ ಗ್ರಾಂ ಮಾದಕ ವಸ್ತುಗಳನ್ನು ನ್ಯಾಯಾಲಯದ ಅನುಮತಿ ಮೇರೆಗೆ ಇದೇ ವೇಳೆ ನಾಶ ಪಡಿಸಲಾಯಿತು.

ಮಾದಕ ವಸ್ತು ತಡೆಗಟ್ಟುವಿಕೆ ಹಾಗೂ ಜಾಗೃತಿ ಮೂಡಿಸಲು ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಮೈಮ್ ಪ್ರದರ್ಶನ ನೀಡಿದರು.

ಶಾಸಕ ರಿಜ್ವಾನ್ ಅರ್ಷದ್, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಎಂ.ಎ.ಸಲೀಂ, ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಆರ್.ಹಿತೇಂದ್ರ, ಆದರ್ಶ್ ಗ್ರೂಪ್ ಸಿ.ಎಂ.ಡಿ. ಬಿ.ಎಂ.ಜಯಶಂಕರ್, ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನೀಟ್ ಅವ್ಯವಸ್ಥೆ ವಿರುದ್ಧ ಸಚಿವರ ಸಭೆಗೆ ಸಿದ್ಧತೆ

ಒಂದನೇ ಪುಟದಿಂದ...

ರಾಜ್ಯದ 22 ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ 550 ವೈದ್ಯಕೀಯ ಸೀಟುಗಳನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿದೆ. ಈ ಸೀಟುಗಳ ಹೆಚ್ಚಳಕ್ಕೆ ತಗಲುವ ವೆಚ್ಚ ₹1,038 ಕೋಟಿಯನ್ನು ಮಂಜೂರು ಮಾಡುವಂತೆ ಮನವಿ ಮಾಡಿದ್ದೇನೆ ಎಂದರು.

ರಾಯಚೂರಿಗೆ ಏಮ್ಸ್ ಮಂಜೂರು ಮಾಡುವಂತೆ ರಾಜ್ಯ ಸರ್ಕಾರ ಈ ಹಿಂದೆ ಹಲವು ಸಲ ಮನವಿ ಮಾಡಿತ್ತು. ರಾಯಚೂರಿನಲ್ಲಿ ಸಾವಿರ ದಿನಗಳಿಂದ ಧರಣಿ ಸತ್ಯಾಗ್ರಹ ನಡೆಯುತ್ತಿದೆ. ಆದರೂ, ಕೇಂದ್ರ ಸರ್ಕಾರ ಸ್ಪಂದಿಸಿಲ್ಲ. ಏಮ್ಸ್ ಸ್ಥಾಪನೆಗೆ 140 ಎಕರೆ ಜಾಗ ನೀಡಲು ರಾಜ್ಯ ಸರ್ಕಾರ ಸಿದ್ಧವಿದೆ. ಏಮ್ಸ್‌ಗೆ ಆದಷ್ಟು ಬೇಗ ಅನುಮೋದನೆ ನೀಡಬೇಕೆಂದು ಒತ್ತಡ ಹೇರಿದ್ದೇನೆ ಎಂದರು.

ನಿಮ್ಹಾನ್ಸ್ ಉತ್ತರ ಕ್ಯಾಂಪಸ್ ಸ್ಥಾಪಿಸುವ ಪ್ರಕ್ರಿಯೆಯನ್ನು ವೇಗಗೊಳಿಸುವಂತೆ ಕೋರಲಾಗಿದೆ. ಜತೆಗೆ, ಈ ಹಿಂದೆ ನಿಮಾನ್ಸ್ ರಿಜಿಸ್ಟ್ರಾರ್ ಆಗಿ ಹಿರಿಯ ಕೆಎಎಸ್ ಅಧಿಕಾರಿಯನ್ನು ನೇಮಿಸಲಾಗುತ್ತಿತ್ತು. ಈಗ ಈ ವ್ಯವಸ್ಥೆ ಇಲ್ಲ. ಈ ಸಂಬಂಧ ಮುಖ್ಯಮಂತ್ರಿಯವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಕೆಎಎಸ್ ಅಧಿಕಾರಿಯನ್ನು ರಿಜಿಸ್ಟ್ರಾರ್ ಆಗಿ ನೇಮಿಸಿದರೆ ರಾಜ್ಯದ ಜನರಿಗೆ ಅನುಕೂಲವಾಗಲಿದೆ. ಈ ವಿಷಯವನ್ನು ಕೇಂದ್ರ ಸಚಿವರ ಗಮನಕ್ಕೆ ತಂದಿದ್ದೇನೆ ಎಂದರು.

ಹೊರ್ಮುಜ್: ಮುಕ್ತ ಸಂಚಾರಕ್ಕೆ ಆಗ್ರಹ

ನವದೆಹಲಿ (ಪಿಟಿಐ): ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಜೊತೆ ಮಂಗಳವಾರ ದೂರವಾಣಿ ಮೂಲಕ ಮಾತುಕತೆ ನಡೆಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಮುಕ್ತ ಸಂಚಾರಕ್ಕೆ ಅವಕಾಶ ಅಗತ್ಯ ಎಂಬುದನ್ನು ಒತ್ತಿ ಹೇಳಿದ್ದಾರೆ.

‘ಪಶ್ಚಿಮ ಏಷ್ಯಾದಲ್ಲಿನ ಬೆಳವಣಿಗೆಗಳ ಕುರಿತು ಪೆಜೆಶ್ಕಿಯಾನ್ ಅವರು ಮೋದಿ ಅವರಿಗೆ ವಿವರಿಸಿದರು. ಸಹಮತಕ್ಕೆ ಬಂದಿರುವುದನ್ನು ಸ್ವಾಗತಿಸಿರುವ ಪ್ರಧಾನಿ, ಎಲ್ಲ ವಿವಾದಗಳನ್ನೂ ಮಾತುಕತೆ ಮತ್ತು ರಾಜತಾಂತ್ರಿಕ ಪ್ರಯತ್ನಗಳ ಮೂಲಕವೇ ಪರಿಹರಿಸಿಕೊಳ್ಳಬೇಕು ಎಂಬ ಭಾರತದ ನಿಲುವನ್ನು ಪುನರುಚ್ಚರಿಸಿದ್ದಾರೆ’ ಎಂದು ಪ್ರಧಾನಿಯವರ ಕಚೇರಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಈ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ನರೇಂದ್ರ ಮೋದಿ, ‘ಪಶ್ಚಿಮ ಏಷ್ಯಾದಲ್ಲಿನ ಇತ್ತೀಚಿನ ಬೆಳವಣಿಗೆಗಳ ಕುರಿತು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರೊಂದಿಗೆ ದೂರವಾಣಿಯಲ್ಲಿ ಚರ್ಚಿಸಿದೆ. ಮಾತುಕತೆಗಳಲ್ಲಿನ ಪ್ರಗತಿಯನ್ನು ಸ್ವಾಗತಿಸಿದೆ. ಪ್ರಾದೇಶಿಕವಾಗಿ ಶಾಂತಿ ಕಾಯ್ದುಕೊಳ್ಳಲು ನಿರಂತರ ಪ್ರಯತ್ನ ಅಗತ್ಯ ಎಂಬುದನ್ನು ಒತ್ತಿ ಹೇಳಿದ್ದು, ಭಾರತ ಮತ್ತು ಜಗತ್ತಿನ ಹಿತದೃಷ್ಟಿಯಿಂದ ಹೊರ್ಮುಜ್ ಜಲಸಂಧಿಯಲ್ಲಿ ಮುಕ್ತ ಸಂಚಾರಕ್ಕೆ ಅವಕಾಶ ಇರಬೇಕು ಎಂದು ಮತ್ತೆ ಮನವರಿಕೆ ಮಾಡಿದ್ದೇನೆ’ ಎಂದು ತಿಳಿಸಿದ್ದಾರೆ.

ಸಿಂಧೂ ಜಲ ಒಪ್ಪಂದ ಈಗಲೂ ಕ್ರಮಬದ್ಧ: ಪಾಕ್

ಇಸ್ಲಾಮಾಬಾದ್ (ಪಿಟಿಐ):‘ಸಿಂಧೂ ಜಲ ಒಪ್ಪಂದವನ್ನು ಅಮಾನತು ಮಾಡಿರುವ ಭಾರತದ ಕ್ರಮವನ್ನು ಪಾಕಿಸ್ತಾನ ಒಪ್ಪುವುದಿಲ್ಲ’ ಎಂದು ಪಾಕಿಸ್ತಾನ ಉಪ ಪ್ರಧಾನಿ ಇಶಾಕ್ ಡಾರ್ ಮಂಗಳವಾರ ಹೇಳಿದ್ದಾರೆ.

‘ಈ ಒಪ್ಪಂದವು ಈಗಲೂ ಕ್ರಮ ಬದ್ಧವಾಗಿದ್ದು, ಜಾರಿಯಲ್ಲಿಯೂ ಇದೆ. ಇದಕ್ಕೆ ಎರಡೂ ದೇಶಗಳು ಬದ್ಧವಾಗಿರಬೇಕು’ ಎಂದೂ ಅವರು ಹೇಳಿದ್ದಾರೆ.

ಸಿಂಧೂ ಜಲ ಒಪ್ಪಂದ ಕುರಿತು ಇಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಹುಟ್ಟಿನಿಂದ ಪೌರತ್ವ: ಟ್ರಂಪ್ ಆದೇಶ ತಿರಸ್ಕರಿಸಿದ ‘ಸುಪ್ರೀಂ’

ವಾಷಿಂಗ್ಟನ್ (ಎಪಿ): ಅಮೆರಿಕದಲ್ಲಿ ಅಕ್ರಮವಾಗಿ ಅಥವಾ ತಾತ್ಕಾಲಿಕವಾಗಿ ನೆಲಸಿರುವವರಿಗೆ ಜನಿಸುವ ಮಕ್ಕಳು ಇಲ್ಲಿನ ಪೌರರಾಗುವುದಿಲ್ಲ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೊರಡಿಸಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿದೆ.

‘ಆಂತರಿಕ ಯುದ್ಧದ ಬಳಿಕ ಮಾಡಿಕೊಂಡ 14ನೇ ತಿದ್ದುಪಡಿ ಅನ್ವಯ, ಯಾರು ಈ ದೇಶದಲ್ಲಿ ಹುಟ್ಟುತ್ತಾರೊ ಅವರು ಈ ದೇಶದ ಪ್ರಜೆಗಳಾಗುತ್ತಾರೆ. ಇದರಲ್ಲಿ ಕೆಲವೇ ಕೆಲವು ವಿನಾಯಿತಿಗಳಿಗೆ ಅಷ್ಟೆ. ಆದರೆ, ಇಲ್ಲಿ ಹುಟ್ಟಿದವರು ಇಲ್ಲಿನ ನಾಗರಿಕರು ಎನ್ನುವುದರಲ್ಲಿ ಬೇರೆ ಮಾತಿಲ್ಲ. ಇದಕ್ಕಾಗಿ ಹಲವು ಕಾನೂನುಗಳೂ ಇವೆ’ ಎಂದು ನ್ಯಾಯಾಲಯ ಹೇಳಿದೆ.

ತಮಿಳಿನ ಸೂರ್ಯ ಜೊತೆ ಹೊಂಬಾಳೆ ಸಿನಿಮಾ

ಸದ್ಯಕ್ಕೆ ಕನ್ನಡದಲ್ಲಿ ಸಿನಿಮಾ ನಿರ್ಮಾಣ ಕಡಿಮೆ ಮಾಡಿರುವ ಹೊಂಬಾಳೆ ಫಿಲ್ಮ್ಸ್, ಬಹುಭಾಷಾ ತಾರೆಯರ ಸಿನಿಮಾಗಳತ್ತಲೇ ಹೆಚ್ಚು ಗಮನಹರಿಸುತ್ತಿದೆ. ಇದೀಗ ತಮಿಳು ನಟ ಸೂರ್ಯ ಜೊತೆ ಕೈಜೋಡಿಸಿ ಹೊಸ ಚಿತ್ರ ಘೋಷಿಸಿದ್ದು, ಇತ್ತೀಚೆಗಷ್ಟೇ ಚೆನ್ನೈನಲ್ಲಿ ಸಿನಿಮಾ ಸೆಟ್ಟೇರಿದೆ.

ಪ್ಯಾನ್ ಇಂಡಿಯಾ ಚಿತ್ರಕ್ಕೆ ಟಿ.ಜೆ.ಜ್ಞಾನವೇಲ್ ನಿರ್ದೇಶನವಿದೆ. ಇವರು ಈ ಹಿಂದೆ 'ಜೈ ಭೀಮ್' ಸೇರಿದಂತೆ ಕೆಲ ಸಿನಿಮಾಗಳನ್ನು ನಿರ್ದೇಶಿಸಿದ್ದರು.

'ಚಿತ್ರರಂಗದ ಮೇಲಿನ ಅಪಾರ ಪ್ರೀತಿ ಹಾಗೂ ಒಂದೇ ರೀತಿಯ ಯೋಚನೆ ಹೊಂದಿದವರು ಒಂದಾದಾಗ ಅತ್ಯುತ್ತಮ ಸಿನಿಮಾ ಮೂಡಿಬರಲು ಸಾಧ್ಯ ಎಂದು ಹೊಂಬಾಳೆ ಫಿಲ್ಮ್ಸ್ ಸದಾ ನಂಬುತ್ತದೆ. ಸೂರ್ಯ ಮತ್ತು ಟಿ. ಜೆ. ಜ್ಞಾನವೇಲ್ ಜೊತೆ ಕೈಜೋಡಿಸಿ ಜಾಗತಿಕ ಮಟ್ಟದ ಸಿನಿಮಾವನ್ನು ನಿರ್ಮಾಣ ಮಾಡುವ ಯೋಚನೆಯಿದೆ' ಎಂದು ಹೊಂಬಾಳೆ ಫಿಲ್ಮ್ಸ್‌ನ ವಿಜಯ್ ಕಿರಗಂದೂರು ಹೇಳಿದ್ದಾರೆ.

ಈ ಚಿತ್ರಕ್ಕೆ ಸಾಯಿ ಅಭ್ಯಂಕರ್ ಅವರ ಸಂಗೀತ ನಿರ್ದೇಶನವಿದ್ದು, ಎಸ್. ಆರ್. ಕದಿರ್ ಅವರ ಛಾಯಾಚಿತ್ರಗ್ರಹಣವಿದೆ. ಚಿತ್ರದ ಕಲಾ ನಿರ್ದೇಶನವನ್ನು ಕೆ.ಕದಿರ್ ನಿರ್ವಹಿಸುತ್ತಿದ್ದು, ಫಿಲೋಮಿನ್ ರಾಜ್ ಅವರ ಸಂಕಲನ ಕಾರ್ಯವಿರಲಿದೆ.


ಚಿತ್ರತಂಡ


ಜೂ.ಎನ್‌ಟಿಆರ್

ತ್ರಿವಿಕ್ರಂ ನಿರ್ದೇಶನದಲ್ಲಿ ಜೂ.ಎನ್‌ಟಿಆರ್

ಜೂನಿಯರ್ ಎನ್‌ಟಿಆರ್ ಅವರು ಜನಪ್ರಿಯ ನಿರ್ದೇಶಕ ತ್ರಿವಿಕ್ರಂ ಶ್ರೀನಿವಾಸ್ ಜತೆ ಮತ್ತೆ ಕೈಜೋಡಿಸಿದ್ದಾರೆ. ಈ ಜೋಡಿ ಕಾರ್ತಿಕೇಯನ ಕುರಿತಾದ ಪೌರಾಣಿಕ ಚಿತ್ರ ಮಾಡಲಿದೆ ಎಂದು ನಿರ್ಮಾಪಕ ನಾಗವಂಶಿ ಸುಳಿವು ನೀಡಿದ್ದಾರೆ. ಇವರ ಈ ಹಿಂದಿನ ಸಿನಿಮಾ 'ಅರವಿಂದ ಸಮೇತ ವೀರ ರಾಘವ' ಸೂಪರ್ ಹಿಟ್ ಆಗಿತ್ತು.

ತ್ರಿವಿಕ್ರಂ 'ಅತಡು', 'ಜಲ್ಸಾ', 'ಅತ್ತಾರಿಂಟಿಕಿ ದಾರೇದಿ', 'ಅಲಾ ವೈಕುಂಠಪುರಂಲೋ' ಸೇರಿದಂತೆ ಹಲವು ಸೂಪರ್ ಹಿಟ್ ಸಿನಿಮಾಗಳನ್ನು ನೀಡಿದ್ದಾರೆ. ಹೀಗಾಗಿ ಈ ಜೋಡಿಯ ಚಿತ್ರಕ್ಕೆ ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದರು. ತಿಂಗಳ ಹಿಂದೆಯೇ ಈ ಜೋಡಿ ಮತ್ತೆ ಕೈಜೋಡಿಸಲಿದೆ ಎಂಬ ವದಂತಿ ಇತ್ತು.

'ದಕ್ಷಿಣದಲ್ಲಿ ಜನಿಸಿ, ಹೃದಯದಲ್ಲಿ ನೆಲೆಯಾಗಿ, ಉತ್ತರದಲ್ಲಿ ಆರಾಧಿಸುವವ' ಎಂಬ ಅಡಿಬರಹದೊಂದಿಗೆ ಚಿತ್ರದ ಪೋಸ್ಟರ್ ಅನ್ನು ನಾಗವಂಶಿ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಇವರ ಸಿತಾರ ಎಂಟರ್‌ಟೈನ್‌ಮೆಂಟ್ ಚಿತ್ರವನ್ನು ನಿರ್ಮಾಣ ಮಾಡುತ್ತಿದೆ.

ಪ್ಯಾನ್ ಇಂಡಿಯಾ ಚಿತ್ರ ಇದಾಗಿದ್ದು, ಬೃಹತ್ ಬಜೆಟ್‌ನಲ್ಲಿ ನಿರ್ಮಾಣಗೊಳ್ಳುತ್ತಿದೆ. ಅನಿರುದ್ಧ್ ರವಿಚಂದರ್ ಸಂಗೀತವಿದೆ.




ಶಿವರಾಜ್‌ಕುಮಾರ್

ಮಹಾನ್: ವಿಶೇಷ ಪಾತ್ರದಲ್ಲಿ ಶಿವರಾಜ್‌ಕುಮಾರ್

ನಟ ಶಿವರಾಜ್‌ಕುಮಾರ್ 'ಮಹಾನ್' ಚಿತ್ರದಲ್ಲಿ ವಿಶೇಷ ಪಾತ್ರವೊಂದರಲ್ಲಿ ಕಾಣಿಸಿಕೊಳ್ಳಲಿದ್ದಾರೆ. ವಿಜಯ ರಾಘವೇಂದ್ರ ನಾಯಕನ ಪಾತ್ರದಲ್ಲಿರುವ ಈ ಚಿತ್ರ ರೈತರ ಕುರಿತಾದ ಕಥಾಹಂದರವಿದೆ.

ಆಕಾಶ್ ಪಿಕ್ಚರ್ಸ್ ಬ್ಯಾನರ್‌ನಡಿ ಪ್ರಕಾಶ್ ಬುದ್ದೂರು ಅವರು ಚಿತ್ರ ನಿರ್ಮಿಸುತ್ತಿದ್ದು, ಪಿ.ಸಿ.ಶೇಖರ್ ನಿರ್ದೇಶನವಿದೆ. ಈ ಮೂಲಕ ಬಹಳ ವರ್ಷಗಳ ನಂತರ ಶಿವರಾಜ್‌ಕುಮಾರ್, ವಿಜಯ ರಾಘವೇಂದ್ರ ಒಟ್ಟಿಗೆ ಕಾಣಿಸಿಕೊಳ್ಳುತ್ತಿದ್ದಾರೆ.

ಚಿತ್ರದಲ್ಲಿ ಬರುವ ಪ್ರತಿ ಪಾತ್ರವೂ ಪ್ರಮುಖವಾದುವೇ. ಮನೆಯಲ್ಲಿ ತಪ್ಪು ಮಾಡಿದರೆ ಬುದ್ಧಿ ಹೇಳಲು ತಂದೆ-ತಾಯಿ ಇರುತ್ತಾರೆ. ಸಮಾಜದಲ್ಲಿ ಇಂಥದೇ ಸ್ಥಿತಿ ನಿರ್ಮಾಣವಾದಾಗ ಅಲ್ಲಿನ ತೊಂದರೆಗಳನ್ನು ತಿದ್ದಲು ಪ್ರಮುಖರ ಉಪಸ್ಥಿತಿ ಅಗತ್ಯವಿದೆ. ಶಿವರಾಜ್‌ಕುಮಾರ್ ಈ ಚಿತ್ರದಲ್ಲಿ ಹಿರಿಯ ವಕೀಲರಾಗಿ ಕಾಣಿಸಿಕೊಳ್ಳಲಿದ್ದಾರೆ ಎಂದು ಚಿತ್ರತಂಡ ಹೇಳಿದೆ.

'ನಿರ್ದೇಶಕರಿಗೆ ಶಿವರಾಜ್‌ಕುಮಾರ್ ಅವರ ಚಿತ್ರ ನಿರ್ದೇಶಿಸುವ ಆಸೆ ಇರುತ್ತದೆ. ನನಗೂ ಬಹಳ ದಿನಗಳಿಂದ ಇಂತಹ ಆಸೆ ಇತ್ತು. ಈಗ ಈಡೇರಿದೆ' ಎಂದು ನಿರ್ದೇಶಕ ಪಿ.ಸಿ.ಶೇಖರ್ ಅವರು ಸಂತಸ ಹಂಚಿಕೊಂಡರು.

ರಾಧಿಕಾ ನಾರಾಯಣ್, ಮಿತ್ರ, ನಮ್ರತಾ ಗೌಡ, ವರ್ಷಾ ಬೊಳ್ಳಮ್ಮ, ಕಿರಣ್ ಶ್ರೀನಿವಾಸ್ ಚಿತ್ರದಲ್ಲಿದ್ದಾರೆ.

ರಕ್ಕಿ ಟ್ರೇಲರ್ ಬಿಡುಗಡೆ

ಜುಲೈ 10ರಂದು ತೆರೆಕಾಣಲಿರುವ ಕ್ರೈಮ್, ಥ್ರಿಲ್ಲರ್ ಕಥಾಹಂದರದ ಚಿತ್ರ 'ರಕ್ಕಿ' ಟ್ರೇಲರ್ ಅನ್ನು ಅಶ್ವಿನಿ ಪುನೀತ್ ರಾಜಕುಮಾರ್ ಅವರು ಈಚೆಗೆ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು.

ಎಸ್.ಎನ್.ಆರ್. ಪ್ರೊಡಕ್ಷನ್ ಬ್ಯಾನರ್‌ನಡಿ ಸಾಲಿಗ್ರಾಮ ಸುರೇಶ್ ಚಿತ್ರ ನಿರ್ಮಿಸುತ್ತಿದ್ದು, ವೆಂಕಟ್ ಭಾರದ್ವಾಜ್ ಅವರು ಚಿತ್ರ ನಿರ್ದೇಶಿಸುತ್ತಿದ್ದಾರೆ. ಪಿ.ಆರ್.ಕೆ ಆಡಿಯೊದ ಯೂಟ್ಯೂಬ್ ಚಾನಲ್‌ನಲ್ಲಿ ಟ್ರೇಲರ್ ಲಭ್ಯವಿದೆ.

ಜರ್ಮನಿಯಲ್ಲಿ ಹಲವು ವರ್ಷಗಳಿಂದ ನೆಲೆಸಿರುವ, ಸಾಲಿಗ್ರಾಮದ ಸುರೇಶ್ ಅವರ ಪುತ್ರ ಚಿತ್ರದ ನಾಯಕ. ನಾಯಕನ ಹೆಸರು ರಕ್ಕಿ. ಅದೇ ಚಿತ್ರದ ಶೀರ್ಷಿಕೆಯೂ ಆಗಿದೆ.

'ಸುರೇಶ್ ಅವರ ಬಳಿ ನಾನು ಎರಡು ಕಥೆ ಹೇಳಿದ್ದೆ. ಅವರು ಅಶ್ವಿನಿ ಪುನೀತ್ ರಾಜಕುಮಾರ್ ಅವರ ಬಳಿ ಕಥೆ ಹೇಳಿ. ಅವರು ಒಪ್ಪುವುದನ್ನು ಸಿನಿಮಾ ಮಾಡೋಣ ಎಂದರು. ಅಶ್ವಿನಿ ಪುನೀತ್ ರಾಜಕುಮಾರ್ ಅವರು ಒಪ್ಪಿದ ಕಥೆಯೇ ಚಿತ್ರವಾಗಿದೆ. ಮುಹೂರ್ತದಂದೂ ಅವರೇ ಚಿತ್ರಕ್ಕೆ ಚಾಲನೆ ನೀಡಿದ್ದರು. ಚಿತ್ರೀಕರಣ ಹಾಗೂ ನಂತರದ ಕೆಲಸಗಳು ಮುಗಿದು ಚಿತ್ರ ಬಿಡುಗಡೆ ಅಣಿಯಾಗಿದೆ' ಎಂದರು ವೆಂಕಟ್ ಭಾರದ್ವಾಜ್.

'ನನ್ನ ಹೆಸರು ಹಾಗೂ ಚಿತ್ರದ ಶೀರ್ಷಿಕೆ ಒಂದೇ ಆಗಿದೆ. ಚಿತ್ರದಲ್ಲಿ ನಾನು ಗ್ಯಾಂಗ್‌ಸ್ಟರ್ ಪಾತ್ರದಲ್ಲಿದ್ದೇನೆ. ಹಾಗಂತ, ಮಚ್ಚು ಹಿಡಿಯುವ ಗ್ಯಾಂಗ್‌ಸ್ಟರ್ ಅಲ್ಲ. ಸ್ಟೈಲಿಶ್ ಗ್ಯಾಂಗ್ ಸ್ಟರ್. ವಯಸ್ಸಿನ ಮಿತಿ ಇಲ್ಲದೆ ಎಲ್ಲರೂ ನೋಡಬಹುದಾದ ಚಿತ್ರವಿದು. ಜರ್ಮನಿಯಲ್ಲಿ ಚಿತ್ರಕ್ಕೆ ಬೇಕಾದ ತಯಾರಿ ಮಾಡಿಕೊಂಡು ಇಲ್ಲಿ ಪರೀಕ್ಷೆ ಬರೆದಿದ್ದೇನೆ. ಜುಲೈ 10ರಂದು ರಿಸಲ್ಟ್ ಬರಲಿದೆ' ಎಂದು ನಾಯಕ ನಟ ರಕ್ಕಿ ಅಭಿಪ್ರಾಯ ಹಂಚಿಕೊಂಡರು.

'ಸಾಲಿಗ್ರಾಮದವನಾದ ನಾನು ಐ.ಟಿ ಉದ್ಯೋಗಿ. ಇಪ್ಪತ್ತು ವರ್ಷಗಳಿಂದ ಜರ್ಮನ್‌ನಲ್ಲೇ ವಾಸಿಸುತ್ತಿದ್ದೇನೆ. ನನ್ನ ತಂದೆ ರಾಜಶೇಖರ್ ಅವರು ರಾಜಕುಮಾರ್ ಅಭಿನಯದ 'ಹೊಸಬೆಳಕು' ಚಿತ್ರ ನಿರ್ಮಿಸಿದ್ದರು. 'ರಕ್ಕಿ' ಮೂಲಕ ನನ್ನನ್ನು ಚಿತ್ರರಂಗಕ್ಕೆ ಪರಿಚಯಿಸುತ್ತಿದ್ದಾರೆ. ಕುಟುಂಬದ ಸ್ನೇಹಿತರಾದ ಅಶ್ವಿನಿ ಪುನೀತ್ ರಾಜಕುಮಾರ್ ಸಹಕಾರ ಈ ಚಿತ್ರಕ್ಕೆ ಅಪಾರ' ಎಂದು ನಿರ್ಮಾಪಕ ಸಾಲಿಗ್ರಾಮ ಸುರೇಶ್ ಸ್ಮರಿಸಿದರು.

ಲೋಕಿ ತವಸ್ಯ ಸಂಗೀತ ನೀಡಿದ್ದಾರೆ. ಐಸಾಕ್ ಪ್ರಭಾಕರ್ ಅವರ ಛಾಯಾಚಿತ್ರಗ್ರಹಣ, ಕಲಾ ನಿರ್ದೇಶನ ದೀಪಕ್ ಕಾಮತ್ ಅವರದು. ದೀಪು ಎಸ್.ಕುಮಾರ್ ಸಂಕಲನವಿದೆ. ರಕ್ಕಿ ಸುರೇಶ್, ಪಲ್ಲವಿ ಮಂಜುನಾಥ್, ಬಿ.ಸರೇಶ್, ಆಶಿಕಾ ಸೋಮಶೇಖರ್, ಸಂಪತ್ ಮೈತ್ರೇಯ, ರಮೇಶ್ ಪಂಡಿತ್, ಬಲ ರಾಜವಾಡಿ, ಜಿ.ಜಿ.ಹರಿಣಿ ಶ್ರೀಕಾಂತ್ ನಟಿಸಿದ್ದಾರೆ.


ಪಲ್ಲವಿ, ರಕ್ಕಿ, ಆಶಿಕಾ ಸೋಮಶೇಖರ್

ಗೃಹಬಂಧನದಲ್ಲಿ ಇರಿಸಲಾಗಿದೆ: ರಾಯ್

ಅಯೋಧ್ಯೆಗೆ ತೆರಳಲು ಸಿದ್ಧವಾಗಿದ್ದ ಉತ್ತರ ಪ್ರದೇಶ ಕಾಂಗ್ರೆಸ್ ನಿಯೋಗ

ಅಯೋಧ್ಯೆ (ಪಿಟಿಐ): 'ನನ್ನನ್ನು ಗೃಹಬಂಧನದಲ್ಲಿ ಇಡಲಾಗಿದೆ. ರಾಮ ಮಂದಿರದಲ್ಲಿ ಪ್ರಾರ್ಥನೆ ಸಲ್ಲಿಸಲು ಅವಕಾಶ ನೀಡುವವರೆಗೆ ಅಯೋಧ್ಯೆಯನ್ನು ಬಿಟ್ಟು ಕದಲುವುದಿಲ್ಲ' ಎಂದು ಉತ್ತರ ಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಜಯ್ ರಾಯ್ ಮಂಗಳವಾರ ಆರೋಪಿಸಿದ್ದಾರೆ.

'ಬಿಜೆಪಿ ಸರ್ಕಾರದ ನಿರಂಕುಶ ಅಧಿಕಾರವು ಎಲ್ಲೆ ಮೀರಿದೆ. ಉತ್ತರ ಪ್ರದೇಶ ಕಾಂಗ್ರೆಸ್ ಘಟಕದ ನಿಯೋಗವು ಮಂಗಳವಾರ ಅಯೋಧ್ಯೆಗೆ ತೆರಳಲು ಸಮಯ ನಿಗದಿ ಮಾಡಿತ್ತು. ಆದರೆ ಪೊಲೀಸರು ಮಧ್ಯರಾತ್ರಿ ಹೋಟೆಲ್‌ನಿಂದ ನನ್ನನ್ನು ಕರೆದೊಯ್ದು ಆಚಾರ್ಯ ನರೇಂದ್ರ ದೇವ್ ವಿಶ್ವವಿದ್ಯಾಲಯದ ಸರ್ಕಾರಿ ಅತಿಥಿಗೃಹದಲ್ಲಿ ಇಟ್ಟಿದ್ದಾರೆ. ಪೊಲೀಸರು ನನ್ನ ಮೇಲೆ ಕಣ್ಣಿಟ್ಟಿದ್ದಾರೆ' ಎಂದು ರಾಯ್ ಹೇಳಿದ್ದಾರೆ.

'ರಾಮ ಮಂದಿರ ಭೇಟಿಗೆ ಅವಕಾಶ ನೀಡಲೂ ಸರ್ಕಾರ ಭಯಪಡುತ್ತಿದೆ. ಅವರು ನನ್ನನ್ನು ಬಂಧಿಸಿದರು ಎಂದು ಭಾವಿಸಿದ್ದೆ. ಆದರೆ ಮಧ್ಯರಾತ್ರಿ ಅತಿಥಿ ಗೃಹಕ್ಕೆ ಕರೆತಂದಿರುವುದು ಏಕೆ' ಎಂದು ದೂರವಾಣಿ ಮೂಲಕ ತಿಳಿಸಿದ್ದಾರೆ.

ಈ ಬಗ್ಗೆ ಅಯೋಧ್ಯೆ ಪೊಲೀಸರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಅಮೇಠಿ ಸಂಸದ ಕಿಶೋರಿ ಲಾಲ್ ಶರ್ಮಾ ಅವರು, 'ದೇಗುಲ ಭೇಟಿಗೆ ನಿರ್ಬಂಧ ವಿಧಿಸಿದ್ದಾರೆ. ದೇಣಿಗೆ ಕಳ್ಳತನವನ್ನು ತಡೆಯದ ಅವರು ದೇಗುಲ ಭೇಟಿಯನ್ನು ತಡೆಯುತ್ತಿದ್ದಾರೆ. ದರ್ಶನಕ್ಕೆ ಅವಕಾಶ ನೀಡದಿರುವುದು ಯಾವ ರೀತಿಯ ಸನಾತನ ಸಂಪ್ರದಾಯ' ಎಂದು ವಿಡಿಯೊ ಹೇಳಿಕೆಯಲ್ಲಿ ಪ್ರಶ್ನಿಸಿದ್ದಾರೆ.

ಈ ಮಧ್ಯೆ, ತಮ್ಮ ಪಕ್ಷದ ನಾಯಕರ ಬಿಡುಗಡೆಗೆ ಆಗ್ರಹಿಸಿ ಹಲವು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

> **ದೇಣಿಗೆ ಕಳವು ಆರೋಪಿಗಳ ಪರ ವಾದ ಮಂಡಿಸದಿರಲು ಫೈಜಾಬಾದ್ ವಕೀಲರ ಸಂಘವು ನಿರ್ಧಾರ ಕೈಗೊಂಡಿರುವುದು ಸಂವಿಧಾನದ ತತ್ವಗಳು ಮತ್ತು ವೃತ್ತಿಪರ ನೈತಿಕತೆಯ ಉಲ್ಲಂಘನೆಯಾಗುತ್ತದೆ**
> **ವಿಶ್ವ ಹಿಂದೂ ಪರಿಷತ್**

> **ಅವ್ಯವಹಾರದಲ್ಲಿ ಯಾವುದೇ ಪಾತ್ರ ಇಲ್ಲ. ಕಳವಿನ ಬಗ್ಗೆ ತಿಳಿಯುತ್ತಿದ್ದಂತೆಯೇ ಕ್ರಮ ಕೈಗೊಂಡಿದ್ದೇನೆ**
> **ಚಂಪತ್ ರಾಯ್,** ರಾಮಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ

ಕಾಂಗ್ರೆಸ್, ಎಸ್‌ಪಿ ವಿರುದ್ಧ ಯೋಗಿ ವಾಗ್ದಾಳಿ

ರಾಮಪುರ: ರಾಮನ ಭಕ್ತರ ಮೇಲೆ ದಾಳಿ ನಡೆಸಿದ್ದವರು, ರಾಮನ ಅಸ್ತಿತ್ವವನ್ನು ಪ್ರಶ್ನಿಸಿದ್ದವರು ಇಂದು ನಂಬಿಕೆಯ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ವಿರೋಧ ಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷಗಳು ಕಪಟ ಪಕ್ಷಗಳು. ರಾಮಮಂದಿರ ಚಳವಳಿಗೆ ವಿರೋಧ ವ್ಯಕ್ತಪಡಿಸಿದ್ದ ಪಕ್ಷಗಳು, ಇಂದು ತಾವೇ ವಿಜಯಕ್ಕೆ ಕಾರಣ ಎಂದು ಹೇಳಿಕೊಳ್ಳುತ್ತಿವೆ ಎಂದು ಆರೋಪಿಸಿದರು.

'ಜೈ ಶ್ರೀರಾಮ್' ಎಂದು ಘೋಷಣೆ ಕೂಗಿದವರ ವಿರುದ್ಧ ಲಾಠಿಚಾರ್ಜ್ ನಡೆಸಲು ಆದೇಶಿಸಿದ್ದವರು ಇಂದು ರಾಮ ಆರಾಧನೆ ಬಗ್ಗೆ ಪಾಠ ಮಾಡುತ್ತಿದ್ದಾರೆ. ರಾಮ ಭಜನೆ ಮಾಡಿದ ಭಕ್ತರ ಮೇಲೆ ಗುಂಡು ಹಾರಿಸಿದ್ದವರು ಇಂದು 'ನಂಬಿಕೆ' ಬಗ್ಗೆ ಮಾತನಾಡುತ್ತಿದ್ದಾರೆ' ಎಂದು ಟೀಕಿಸಿದರು.

'ಜನರ ನಂಬಿಕೆ ಮತ್ತು ಮತದಾರರ ಬೆಂಬಲವು ವಿರೋಧ ಪಕ್ಷಗಳ ನಿಲುವನ್ನು ಬದಲಾಯಿಸಿದೆ. ಹಿಂದಿನ ಹೇಳಿಕೆಗಳಿಗೆ ವಿರೋಧ ಪಕ್ಷಗಳು ವಿಷಾದ ವ್ಯಕ್ತಪಡಿಸಲೇಬೇಕು. ಸಮಾಜವಾದಿ ಪಕ್ಷವು ತಪ್ಪಾದ ಹಾದಿಯಲ್ಲಿತ್ತು. ಕಾಂಗ್ರೆಸ್ ಪಕ್ಷವು ರಾಮನ ಅಸ್ತಿತ್ವವನ್ನೇ ಪ್ರಶ್ನಿಸಿತ್ತು. ಆದರೆ ಇಂದು ಈ ಪಕ್ಷಗಳು ರಾಮ ಎಲ್ಲರಿಗೂ ಸೇರಿದವನು ಎಂದು ಹೇಳುತ್ತಿವೆ. ಅಯೋಧ್ಯೆಗೆ ಭೇಟಿ ನೀಡಲು ಅವರೆಲ್ಲಾ ಉತ್ಸುಕರಾಗಿದ್ದಾರೆ' ಎಂದರು.

ಮೋದಿ ಮೌನ ಪ್ರಶ್ನಿಸಿದ ಕಾಂಗ್ರೆಸ್

ನವದೆಹಲಿ: ರಾಮಮಂದಿರ ದೇಣಿಗೆ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅವರು ಮೌನವಾಗಿರುವುದು, ದೇಶದ ಕೋಟ್ಯಂತರ ಜನರ ನಂಬಿಕೆಯ ಮೇಲೆ ಮಾಡುತ್ತಿರುವ 'ನೇರ ದಾಳಿ' ಎಂದು ಕಾಂಗ್ರೆಸ್ ಮಂಗಳವಾರ ವಾಗ್ದಾಳಿ ನಡೆಸಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, 'ಪ್ರಧಾನಿ ಮೋದಿ ನೇತೃತ್ವದ ಸರ್ಕಾರವು ಯಾವುದೇ ಪಾರದರ್ಶಕ ಮಾನದಂಡಗಳು ಮತ್ತು ಸಾರ್ವಜನಿಕರ ಸಲಹೆ ಪಡೆಯದೇ ಶ್ರೀ ರಾಮಜನ್ಮ ಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ರಚಿಸಿದೆ. ಆರ್‌ಎಸ್‌ಎಸ್ ಕಾರ್ಯಕರ್ತರನ್ನು ಟ್ರಸ್ಟ್‌ನ ಸದಸ್ಯರನ್ನಾಗಿಸಿದೆ. ಇದೇ ವೇಳೆ ಟ್ರಸ್ಟ್ ಅನ್ನು ಆರ್‌ಟಿಐ ವ್ಯಾಪ್ತಿಯಿಂದ ಹೊರಗಿಟ್ಟಿದೆ. ಮೋದಿ ಅವರೇ ನಿಮ್ಮ ಮೌನವನ್ನು ಮುರಿಯಿರಿ' ಎಂದಿದ್ದಾರೆ.

ಟ್ರಸ್ಟ್ ವಿಸರ್ಜಿಸಿ ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ಪ್ರಕರಣದ ತನಿಖೆ ನಡೆಸಬೇಕೆಂದು ಕಾಂಗ್ರೆಸ್ ಒತ್ತಾಯಿಸಿದೆ.

ವಿಂಬಲ್ಡನ್: ಜೊಕೊವಿಚ್, ಫೆಲಿಕ್ಸ್, ಮೆಡ್ವೆಡೇವ್ ಮುನ್ನಡೆ
ಶ್ವಾಂಟೆಕ್, ಮೀರಾ ಶುಭಾರಂಭ

ಲಂಡನ್ (ಎಎಫ್‌ಪಿ): ಹಾಲಿ ಚಾಂಪಿಯನ್ ಇಗಾ ಶ್ವಾಂಟೆಕ್ ಅವರು ಮಂಗಳವಾರ ಮೂರು ಸೆಟ್‌ಗಳ ಪ್ರಯಾಸದ ಗೆಲುವಿನೊಡನೆ ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು. ಫ್ರೆಂಚ್ ಓಪನ್ ಚಾಂಪಿಯನ್ ಮೀರಾ ಅಂದ್ರೆಯೇವಾ, ಸರ್ಬಿಯಾದ ದಿಗ್ಗಜ ನೊವಾಕ್ ಜೊಕೊವಿಚ್ ಅವರೂ ಎರಡನೇ ಸುತ್ತು ತಲುಪಿದರು.

ಮಹಿಳಾ ಸಿಂಗಲ್ಸ್‌ನಲ್ಲಿ ಮೂರನೇ ಶ್ರೇಯಾಂಕದ ಶ್ವಾಂಟೆಕ್ 6-1, 2-6, 6-3ರಿಂದ ಅಮೆರಿಕದ ಟೇಲರ್ ಟೌನ್‌ಸೆಂಡ್ ಅವರನ್ನು ಹಿಮ್ಮೆಟ್ಟಿಸಿದರು. ಮೊದಲ ಸೆಟ್‌ನಲ್ಲಿ ಪಾರಮ್ಯ ಮೆರೆದ ಪೋಲೆಂಡ್ ಆಟಗಾರ್ತಿ ನಂತರ ಲಯ ತಪ್ಪಿದರು.

ಮೀರಾ ಓಟ: ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ತಮ್ಮ ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದ 19 ವರ್ಷದ ಮೀರಾ, ಆರಂಭಿಕ ಸುತ್ತಿನಲ್ಲಿ 7-5, 6-4ರಿಂದ ಪೋಲೆಂಡ್‌ನ ಮ್ಯಾಗ್ದಾ ಲಿನೆಟ್ ಅವರನ್ನು ಹಿಮ್ಮೆಟ್ಟಿಸಿದರು. ಐದನೇ ಶ್ರೇಯಾಂಕದ ಮೀರಾ 64ರ ಘಟ್ಟದ ಪಂದ್ಯದಲ್ಲಿ 2024ರ ವಿಂಬಲ್ಡನ್ ಚಾಂಪಿಯನ್ ಬಾರ್ಬೊರಾ ಕ್ರಾಚಿಕೋವಾ (ಜೆಕ್ ರಿಪಬ್ಲಿಕ್) ಅವರನ್ನು ಎದುರಿಸಲಿದ್ದಾರೆ.

ಏಳನೇ ಶ್ರೇಯಾಂಕದ ಕೊಕೊ ಗಾಫ್ (ಅಮೆರಿಕ) 6-2, 6-1ರಿಂದ ತಮಾರಾ ಕೊರ್ಪಾಟ್ಷ್ ಅವರನ್ನು ಮಣಿಸಿದರು. ಆರನೇ ಶ್ರೇಯಾಂಕದ ಅಮಂಡಾ ಅನಿಸಿಮೊವಾ (ಅಮೆರಿಕ) ಅವರೂ ಎರಡನೇ ಸುತ್ತು ತಲುಪಿದರು.

ಜೊಕೊವಿಚ್‌ಗೆ ಪ್ರಯಾಸದ ಜಯ: ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ನಿರೀಕ್ಷೆಯಲ್ಲಿರುವ ಜೊಕೊವಿಚ್ ಅವರು ಪುರುಷರ ಸಿಂಗಲ್ಸ್‌ನಲ್ಲಿ 6-4, 5-7, 6-4, 6-4ರಿಂದ ಚೀನಾದ ವು ಯಿಬಿಂಗ್ ಅವರನ್ನು ನಾಲ್ಕು ಸೆಟ್‌ಗಳ ಹೋರಾಟದಲ್ಲಿ ಮಣಿಸಿದರು. ಆಲ್ ಇಂಗ್ಲೆಂಡ್ ಕ್ಲಬ್‌ನ ಸೆಂಟರ್ ಕೋರ್ಟ್‌ನಲ್ಲಿ ಮೂರು ಗಂಟೆ 12 ನಿಮಿಷ ನಡೆದ ಪಂದ್ಯದಲ್ಲಿ 39 ವರ್ಷದ ಜೊಕೊವಿಚ್ ಅವರು ವಿಶ್ವದ 102ನೇ ಕ್ರಮಾಂಕದ ಆಟಗಾರನಿಂದ ಕಠಿಣ ಸವಾಲು ಎದುರಿಸಿದರು.

ಮೂರನೇ ಶ್ರೇಯಾಂಕದ ಫೆಲಿಕ್ಸ್ ಆಗರ್ (ಕೆನಡಾ) 6-3 6-1 6-4ರಿಂದ ಕಜಾಕಸ್ತಾನದ ಅಲೆಕ್ಸಾಂಡರ್ ಶೆವ್ಚೆಂಕೊ ಅವರನ್ನು ಸುಲಭವಾಗಿ ಮಣಿಸಿ ಅಭಿಯಾನ ಆರಂಭಿಸಿದರು.

ಶೆಲ್ಟನ್‌ಗೆ ಆಘಾತ: ವಿಶ್ವದ ನಾಲ್ಕನೇ ಶ್ರೇಯಾಂಕದ ಬೆನ್ ಶೆಲ್ಟನ್ ಅವರು ಪುರುಷರ ಸಿಂಗಲ್ಸ್‌ನ ಆರಂಭಿಕ ಸುತ್ತಿನಲ್ಲೇ ಆಘಾತ ಅನುಭವಿಸಿದರು. ಫಿನ್ಲೆಂಡ್‌ನ ಒಟ್ಟೊ ವಿರ್ಟನೆನ್ 6-4, 3-6, 6-7 (8/10), 6-2, 7-6 (11/9) ರಿಂದ ಅಮೆರಿಕದ ಆಟಗಾರನನ್ನು ಸದೆಬಡಿದರು.

ರಿಬಾಕಿನಾ ಮುನ್ನಡೆ: 2022ರ ಚಾಂಪಿಯನ್, ಕಜಾಕಸ್ತಾನದ ಎಲಿನಾ ರಿಬಾಕಿನಾ ಅವರು 6-4, 1-6, 6-3ರಿಂದ ಫ್ರಾನ್ಸ್‌ನ ಲೂಯಿಸ್ ಬೊಯ್ಸನ್ ಅವರನ್ನು ಸೋಲಿಸಿ, ಎರಡನೇ ಸುತ್ತು ತಲುಪಿದರು.


ಇಗಾ ಶ್ವಾಂಟೆಕ್ —ಎಎಫ್‌ಪಿ ಚಿತ್ರ

ಶಾರ್ಟ್ ಸರ್ಕಿಟ್: ಶಸ್ತ್ರಚಿಕಿತ್ಸಾ ಕೊಠಡಿ ಭಸ್ಮ

ಫ್ಲ್ಯಾಪ್ ಒಂದನೇ ಪುಟದಿಂದ...

ಕೈಮೀರಿದ್ದನ್ನು ಅರಿತು ಓಡಿ ಹೊರಗೆ ಬಂದಿದ್ದಾರೆ.

ಅರಿವಳಿಕೆ ಉಪಕರಣ, ವೈದ್ಯಕೀಯ ಯಂತ್ರಗಳು ಸಂಪೂರ್ಣ ಸುಟ್ಟು ಹೋಗಿವೆ. ಕೊಠಡಿಯಲ್ಲಿದ್ದ ರಾಸಾಯನಿಕ, ಬಟ್ಟೆಗಳಿಗೆ ಬೆಂಕಿ ತಗುಲಿ ದಟ್ಟ ಹೊಗೆ ಕಾಣಿಸಿಕೊಂಡಿತ್ತು. ವೈದ್ಯಕೀಯ ಸಿಬ್ಬಂದಿ ರೋಗಿಗಳನ್ನು ಕಟ್ಟಡದಿಂದ ಹೊರಗೆ ಕರೆತಂದರು. ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ಮತ್ತು ತುರ್ತು ಸೇವಾ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ.

'ಅರಿವಳಿಕೆ ವರ್ಕ್ ಸ್ಟೇಷನ್‌ನಲ್ಲಿ ಶಾರ್ಟ್ ಸರ್ಕಿಟ್ ಉಂಟಾಗಿ ಬೆಂಕಿ ಹೊತ್ತಿಕೊಂಡಿದೆ. ಇದಕ್ಕೆ ಸಂಪರ್ಕ ಕಲ್ಪಿಸಿದ್ದ ಎರಡು ಆಕ್ಸಿಜನ್ ಸಿಲಿಂಡರ್‌ಗಳು ಸೋರಿಕೆಯಾಗಿ ಅವಘಡದ ತೀವ್ರತೆ ಹೆಚ್ಚಿಸಿತ್ತು. ಆಕ್ಸಿಜನ್ ಸಿಲಿಂಡರ್‌ಗಳು ಸ್ಫೋಟಗೊಂಡಿಲ್ಲ' ಎಂದು ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಎಂ.ಎನ್. ನಾಗೇಶ್ ತಿಳಿಸಿದ್ದಾರೆ.

ರಾಜನಾಥ ಸಿಂಗ್ ವಿರುದ್ಧ ಹಕ್ಕುಚ್ಯುತಿ ಪ್ರಕ್ರಿಯೆಗೆ ಆಗ್ರಹ

ನವದೆಹಲಿ (ಪಿಟಿಐ): 'ಪಹಲ್ಗಾಮ್ ದಾಳಿ ಬಳಿಕ ಯಾವುದೇ ಭಾರತೀಯ ಸೈನಿಕರು ಹುತಾತ್ಮರಾಗಿಲ್ಲ ಎಂದು ಹೇಳಿಕೆ ನೀಡುವ ಮೂಲಕ ರಕ್ಷಣಾ ಸಚಿವ ರಾಜನಾಥ ಸಿಂಗ್ ಸಂಸತ್ತಿನ ಹಾದಿ ತಪ್ಪಿಸಿದ್ದಾರೆ, ಹೀಗಾಗಿ ಅವರ ವಿರುದ್ಧ ಹಕ್ಕುಚ್ಯುತಿ ಪ್ರಕ್ರಿಯೆ ಆರಂಭಿಸಬೇಕು' ಎಂದು ಕಾಂಗ್ರೆಸ್ ನಾಯಕ ಕೆ.ಸಿ. ವೇಣುಗೋಪಾಲ್ ಆಗ್ರಹಿಸಿದ್ದಾರೆ.

ಇದಕ್ಕೆ ಸಂಬಂಧಿಸಿದಂತೆ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಕೆ.ಸಿ.ವೇಣುಗೋಪಾಲ್ ಮಂಗಳವಾರ ಪತ್ರ ಬರೆದಿದ್ದಾರೆ.

'ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿ ಹಾಗೂ ಆಪರೇಷನ್ ಸಿಂಧೂರದ ಕುರಿತು 2025ರ ಜುಲೈ 28ರಂದು ಸಂಸತ್ತಿನಲ್ಲಿ ಚರ್ಚೆ ನಡೆಸಲಾಗಿತ್ತು. ಈ ವೇಳೆ ಭಾರತೀಯ ಸೈನಿಕರಿಗೆ ಯಾವುದೇ ತೊಂದರೆಯಾಗಿಲ್ಲ ಎಂದು ರಾಜನಾಥ ಸಿಂಗ್ ಹೇಳಿದ್ದರು' ಎಂದು ವೇಣುಗೋಪಾಲ್ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಕಾರ್ಯಾಚರಣೆ ನಡೆದ ಒಂದು ವರ್ಷದ ಬಳಿಕ, ಆಪರೇಷನ್ ಸಿಂಧೂರದ ವೇಳೆ ಸಶಸ್ತ್ರ ಪಡೆಗಳ ಆರು ಸಿಬ್ಬಂದಿ ಹುತಾತ್ಮರಾಗಿದ್ದಾರೆ ಎಂದು ಈಗ ಪ್ರಕಟಣೆ ಹೊರಡಿಸಲಾಗಿದೆ. ಇದು ಈ ಹಿಂದೆ ಸಂಸತ್ತಿಗೆ ಸಚಿವರು ತಪ್ಪು ಮಾಹಿತಿ ನೀಡಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಿದೆ. ಹೀಗಾಗಿ ಅವರ ವಿರುದ್ಧ ಹಕ್ಕುಚ್ಯುತಿ ಪ್ರಕ್ರಿಯೆ ಆರಂಭಿಸಬೇಕು' ಎಂದೂ ಅವರು ಮನವಿ ಮಾಡಿದ್ದಾರೆ.

'ಆಪರೇಷನ್ ಸಿಂಧೂರ' ಕಾರ್ಯಾಚರಣೆ ವೇಳೆ ಮೃತಪಟ್ಟ ಆರು ಯೋಧರ ಹೆಸರನ್ನು ನವದೆಹಲಿಯ ರಾಷ್ಟ್ರೀಯ ಯುದ್ಧ ಸ್ಮಾರಕದ ಗೋಡೆಯ ಮೇಲೆ ಇತ್ತೀಚೆಗೆ ಕೆತ್ತನೆ ಮಾಡಲಾಗಿದೆ. ಕಾರ್ಯಾಚರಣೆ ನಡೆದ ಬಳಿಕ ಇದೇ ಮೊದಲ ಬಾರಿ ಈ ಬಗ್ಗೆ ಮಾಹಿತಿ ಬಹಿರಂಗವಾಗಿದ್ದು, ರಾಜನಾಥ ಸಿಂಗ್ ರಾಜೀನಾಮೆಗೆ ಕಾಂಗ್ರೆಸ್ ನಾಯಕರು ಪಟ್ಟು ಹಿಡಿದಿದ್ದಾರೆ.

ವಿಶ್ವ ವಿದ್ಯಾಪೀಠದಲ್ಲಿ 'ಗುರುಕೃಪಾಮಹೋತ್ಸವಃ' ಶೃಂಗೇರಿ ಜಗದ್ಗುರುಗಳ ದಿವ್ಯ ಸಾನಿಧ್ಯದಲ್ಲಿ ವೈಭವದ ಕಾರ್ಯಕ್ರಮ

ಬೆಂಗಳೂರು: ಗುರುಕೃಪಾಮಹೋತ್ಸವಃ – ಪರಮಪೂಜ್ಯ ಶ್ರೀ ಶ್ರೀ ವಿಧುಶೇಖರ ಭಾರತೀತೀರ್ಥ ಮಹಾಸನ್ನಿಧಾನಂಗಳವರ ದಿವ್ಯ ಸಾನಿಧ್ಯದಲ್ಲಿ ವಿಶ್ವ ವಿದ್ಯಾಪೀಠದಲ್ಲಿ ಭವ್ಯ ಕಾರ್ಯಕ್ರಮ

ವಿಶ್ವ ವಿದ್ಯಾಪೀಠದ ಇತಿಹಾಸದಲ್ಲಿ ಅವಿಸ್ಮರಣೀಯ ಮತ್ತು ಸುವರ್ಣಾಕ್ಷರಗಳಲ್ಲಿ ದಾಖಲೆಯಾಗುವಂತಹ ಪವಿತ್ರ ಕ್ಷಣವು 2026ರ ಜೂನ್ 30ರಂದು ಸಾಕ್ಷಾತ್ಕಾರಗೊಂಡಿತು. ಶೃಂಗೇರಿ ಶ್ರೀ ಶಾರದಾ ಪೀಠದ ಜಗದ್ಗುರುಗಳಾದ ಪರಮಪೂಜ್ಯ ಶ್ರೀ ಶ್ರೀ ವಿಧುಶೇಖರ ಭಾರತೀ ತೀರ್ಥ ಮಹಾಸನ್ನಿಧಾನಂಗಳವರು ವಿಶ್ವ ವಿದ್ಯಾಪೀಠಕ್ಕೆ ಆಗಮಿಸಿ ತಮ್ಮ ದಿವ್ಯ ಸಾನಿಧ್ಯ, ಆಶೀರ್ವಾದ ಹಾಗೂ ಮಾರ್ಗದರ್ಶನದ ಮೂಲಕ ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು ಮತ್ತು ಭಕ್ತವೃಂದವನ್ನು ಧನ್ಯಗೊಳಿಸಿದರು. ಈ ವಿಶೇಷ ಸಂದರ್ಭವನ್ನು "ಗುರುಕೃಪಾಮಹೋತ್ಸವಃ" ಎಂಬ ಹೆಸರಿನಲ್ಲಿ ಭಕ್ತಿಭಾವದಿಂದ ಆಚರಿಸಲಾಯಿತು.

ಮಹಾಸನ್ನಿಧಾನಂಗಳವರ ಆಗಮನದ ನಿಮಿತ್ತ ಶಾಲಾ ಆವರಣವನ್ನು ಸಾಂಪ್ರದಾಯಿಕ ಹಾಗೂ ಸಾಂಸ್ಕೃತಿಕ ವೈಭವದಿಂದ ಅಲಂಕರಿಸಲಾಗಿತ್ತು. ಪ್ರವೇಶ ದ್ವಾರದಿಂದಲೇ ಮಾವಿನ ತೋರಣ, ರಂಗೋಲಿ, ಪುಷ್ಪಾಲಂಕಾರ ಹಾಗೂ ಧಾರ್ಮಿಕ ಚಿಹ್ನೆಗಳಿಂದ ಸಿಂಗಾರಗೊಂಡ ವಾತಾವರಣವು ಆಧ್ಯಾತ್ಮಿಕತೆ ಮತ್ತು ಭಾರತೀಯ ಸಂಸ್ಕೃತಿಯ ಸೊಬಗನ್ನು ಪ್ರತಿಬಿಂಬಿಸಿತು.



ವೇದಘೋಷ, ಪೂರ್ಣಕುಂಭ ಸ್ವಾಗತದೊಂದಿಗೆ ಮಹಾಸನ್ನಿಧಾನಂಗಳವರನ್ನು ಗೌರವಪೂರ್ವಕವಾಗಿ ಸ್ವಾಗತಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳು ವೇದಮಂತ್ರ ಪಠಣ, ಸ್ತೋತ್ರಗಾನ ಹಾಗೂ ಭಕ್ತಿಗೀತೆಗಳನ್ನು ಪ್ರಸ್ತುತಪಡಿಸಿದರು. ವಿದ್ಯಾರ್ಥಿಗಳಿಂದ ಸಿದ್ಧಪಡಿಸಲಾದ ವಿವಿಧ ಶೈಕ್ಷಣಿಕ ಮತ್ತು ವೈಜ್ಞಾನಿಕ ಪ್ರದರ್ಶನಗಳು ಎಲ್ಲರ ಗಮನ ಸೆಳೆದವು. ಭಾರತೀಯ ಜ್ಞಾನ ಪರಂಪರೆ ಮತ್ತು ಆಧುನಿಕ ವಿಜ್ಞಾನವನ್ನು ಸಮನ್ವಯಗೊಳಿಸುವ ವಿಶ್ವ ವಿದ್ಯಾಪೀಠದ ಪ್ರಯತ್ನವನ್ನು ಮಹಾಸನ್ನಿಧಾನಂಗಳವರು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಶೈಕ್ಷಣಿಕ ಸಾಧನೆಗಳು, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ವಿದ್ಯಾರ್ಥಿಗಳು ಗಳಿಸಿರುವ ಯಶಸ್ಸುಗಳು, ವಿವಿಧ ಸಮಾಜಮುಖಿ ಕಾರ್ಯಕ್ರಮಗಳು ಹಾಗೂ ಸಂಸ್ಥೆಯ ವಿಶಿಷ್ಟ ಶಿಕ್ಷಣ ಪದ್ಧತಿಯ ಕುರಿತು ಪರಿಚಯ ನೀಡಲಾಯಿತು. ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕಾಗಿ ವಿಶ್ವ ವಿದ್ಯಾಪೀಠ ಅನುಸರಿಸುತ್ತಿರುವ ಮೌಲ್ಯಾಧಾರಿತ ಶಿಕ್ಷಣ ವ್ಯವಸ್ಥೆಯು ಎಲ್ಲರ ಪ್ರಶಂಸೆಗೆ ಪಾತ್ರವಾಯಿತು.

ತಮ್ಮ ಆಶೀರ್ವಚನದಲ್ಲಿ ಮಹಾಸನ್ನಿಧಾನಂಗಳವರು ಶಿಕ್ಷಣದೊಂದಿಗೆ ಸಂಸ್ಕಾರ, ಶಿಸ್ತು, ಸೇವಾಮನೋಭಾವ ಮತ್ತು ರಾಷ್ಟ್ರನಿಷ್ಠೆಯ ಮಹತ್ವವನ್ನು ಒತ್ತಿ ಹೇಳಿದರು. ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಸದಾಚಾರ, ಪರಿಶ್ರಮ ಮತ್ತು ಗುರುಭಕ್ತಿಯನ್ನು ಅಳವಡಿಸಿಕೊಂಡು ಸಮಾಜಕ್ಕೆ ಆದರ್ಶ ವ್ಯಕ್ತಿಗಳಾಗಬೇಕು ಎಂದು ಕರೆ ನೀಡಿದರು. ಅವರ ಪ್ರೇರಣಾದಾಯಕ ಸಂದೇಶವು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಉತ್ಸಾಹ ಮತ್ತು ಹೊಸ ಚೈತನ್ಯವನ್ನು ತುಂಬಿತು.

ಕಾರ್ಯಕ್ರಮದಲ್ಲಿ ಗಣ್ಯ ಅತಿಥಿಗಳು, ಶಿಕ್ಷಣ ತಜ್ಞರು, ಪೋಷಕರು, ಹಳೆಯ ವಿದ್ಯಾರ್ಥಿಗಳು ಹಾಗೂ ಭಕ್ತಾದಿಗಳು ಉತ್ಸಾಹದಿಂದ ಭಾಗವಹಿಸಿದರು. ಸಂಪೂರ್ಣ ಕಾರ್ಯಕ್ರಮವು ಅತ್ಯಂತ ಶಿಸ್ತುಬದ್ಧವಾಗಿ, ಭಕ್ತಿಪೂರ್ವಕವಾಗಿ ಮತ್ತು ಯಶಸ್ವಿಯಾಗಿ ನೆರವೇರಿತು.

ಪರಮಪೂಜ್ಯ ಮಹಾಸನ್ನಿಧಾನಂಗಳವರ ದಿವ್ಯ ಆಶೀರ್ವಾದಗಳು ವಿಶ್ವ ವಿದ್ಯಾಪೀಠದ ಮುಂದಿನ ಬೆಳವಣಿಗೆ, ವಿದ್ಯಾರ್ಥಿಗಳ ಉಜ್ವಲ ಭವಿಷ್ಯ ಹಾಗೂ ಸಮಾಜಸೇವಾ ಕಾರ್ಯಗಳಿಗೆ ಸದಾ ಪ್ರೇರಣೆಯಾಗಿರಲಿವೆ.

"ಗುರುಕೃಪಾಮಹೋತ್ಸವಃ" ವಿಶ್ವ ವಿದ್ಯಾಪೀಠ ಕುಟುಂಬಕ್ಕೆ ಕೇವಲ ಒಂದು ಕಾರ್ಯಕ್ರಮವಲ್ಲ, ಗುರುಕೃಪೆಯ ಮಹಿಮೆ ಮತ್ತು ಭಾರತೀಯ ಸಂಸ್ಕೃತಿಯ ವೈಭವವನ್ನು ಅನುಭವಿಸುವ ಅಪೂರ್ವ ಆಧ್ಯಾತ್ಮಿಕ ಹಬ್ಬವಾಗಿ ಸ್ಮರಣೀಯವಾಗಿದೆ.

ಶೂಟೌಟ್: ಮೊರಾಕ್ಕೊ ಇನ್–ಡಚ್ ಔಟ್

ಮತ್ತೆ ಮಿಂಚಿದ ಇಸ್ಮಾಯಿಲ್ ಸೈಬಾರಿ • ಬೇಗನೇ ನಿರ್ಗಮಿಸಿದ ನೆದರ್ಲೆಂಡ್ಸ್

ಗ್ವಾದಲೂಪೆ (ಮೆಕ್ಸಿಕೊ), (ಎಪಿ): ಪೆನಾಲ್ಟಿ ಶೂಟೌಟ್‌ನಲ್ಲಿ ಇಸ್ಮಾಯಿಲ್ ಸೈಬಾರಿ ಗಳಿಸಿದ ನಿರ್ಣಾಯಕ ಗೋಲಿನಿಂದ ಮೊರಾಕ್ಕೊ ತಂಡ 3–2 ರಿಂದ ನೆದರ್ಲೆಂಡ್ಸ್ ತಂಡವನ್ನು ಸೋಲಿಸಿ ಫಿಫಾ ಫುಟ್‌ಬಾಲ್ ವಿಶ್ವಕಪ್ ಟೂರ್ನಿಯ ಪ್ರಿಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟಿತು. ಸೋಮವಾರ ರಾತ್ರಿ ನಡೆದ ಈ ಪಂದ್ಯದಲ್ಲಿ ನಿಗದಿತ ಅವಧಿಯ ಆಟ ಮುಗಿದಾಗ ಸ್ಕೋರ್ 1–1 ರಲ್ಲಿ ಸಮನಾಗಿತ್ತು.

ಡಚ್ ತಂಡ ವಿಶ್ವಕಪ್‌ನಲ್ಲಿ ಹಿಂದೆಂದೂ ಇಷ್ಟು ಬೇಗ ಹೊರಬಿದ್ದಿರಲಿಲ್ಲ. 'ಅಟ್ಲಸ್ ಲಯನ್ಸ್' ಉಪಮೆ ಹೊಂದಿರುವ ಮೊರಾಕ್ಕೊ ತಂಡ ಶನಿವಾರ ನಡೆಯುವ 16ರ ಸುತ್ತಿನ ಪಂದ್ಯದಲ್ಲಿ ಜಂಟಿ ಆತಿಥೇಯ ಕೆನಡಾ ತಂಡವನ್ನು ಎದುರಿಸಲಿದೆ.

ಶೂಟೌಟ್‌ನಲ್ಲಿ ನಾಲ್ಕು ಯತ್ನಗಳ ನಂತರ ಸ್ಕೋರ್ 2–2 ರಲ್ಲಿ ಸಮನಾಗಿತ್ತು. ಮೊರಾಕ್ಕೊ ಗೋಲ್‌ಕೀಪರ್ ಯಾಸಿನ್ ಬೂನೊ ಈ ಹಂತದಲ್ಲಿ ಕ್ರಿಸೆನ್ಸಿಯೊ ಸಮರ್‌ವಿಲೆ ಅವರ ಪೆನಾಲ್ಟಿ ಯತ್ನವನ್ನು ಉತ್ತಮವಾಗಿ ತಡೆದರು. ಈ ವಿಶ್ವಕಪ್‌ನ ಗುಂಪು ಹಂತದ ಪಂದ್ಯಗಳಲ್ಲಿ ಮೊರಾಕ್ಕೊ ಪಾಲಿನ ಹೀರೊ ಆಗಿದ್ದ ಸೈಬಾರಿ ಅವರು ನಿರ್ಣಾಯಕ ಯತ್ನದಲ್ಲಿ ಒದ್ದ ಚೆಂಡು ಗೋಲಿನ ಎಡಮೂಲೆ ಸೇರಿತು. ಅಂದಾಜಿನಲ್ಲಿ ತಪ್ಪಿದ ಗೋಲ್‌ಕೀಪರ್ ಬರ್ಟ್ ವೆರ್‌ಬ್ರುಗೆನ್ ಇನ್ನೊಂದು ದಿಕ್ಕಿಗೆ ವಾಲಿದ್ದರು.

ಚೆಂಡು ಗುರಿಸೇರಿದ ತಕ್ಷಣ ಜೆರ್ಸಿ ಕಳಚಿ ಓಡಿದ ಸೈಬಾರಿ ಅವರನ್ನು ತಂಡದ ಇತರ ಆಟಗಾರರು ಮುತ್ತಿಕೊಂಡು ಸಂಭ್ರಮಿಸಿದರು.

ಈ ಹಿಂದಿನ 11 ವಿಶ್ವಕಪ್‌ಗಳ-ಲ್ಲಿ ನೆದರ್ಲೆಂಡ್ಸ್ ಕಡೇಪಕ್ಷ 16ರ ಘಟ್ಟ ತಲುಪಿತ್ತು. 2022ರ ಕತಾರ್ ವಿಶ್ವಕಪ್‌ನಲ್ಲಿ ಎಂಟರ ಘಟ್ಟ ತಲುಪಿತ್ತು. ಮೊರಾಕ್ಕೊ ತಂಡ ಆ ಸಲ ಸೆಮಿಫೈನಲ್ಸ್ ತಲುಪಿದ ಆಫ್ರಿಕಾದ ಮೊದಲ ತಂಡ ಎನಿಸಿತ್ತು. ಈ ವರ್ಷವೂ 'ಅಟ್ಲಸ್ ಲಯನ್ಸ್' ಯಶಸ್ಸಿನ ಓಟವನ್ನು ಮುಂದುವರಿಸಿದೆ.

ಮೊರಾಕ್ಕೊ ತಂಡ ಹೆಚ್ಚಿನ ಭಾಗದಲ್ಲಿ ಮೇಲುಗೈ ಸಾಧಿಸಿತ್ತು. ನೆದರ್ಲೆಂಡ್ಸ್ ತಂಡ ಪ್ರತ್ಯಾಕ್ರಮಣದ ಕಡೆ ಗಮನಹರಿಸಿತು.

'ಮೊರಾಕ್ಕೊ ತಂಡ ಈಗ ಎಲ್ಲರ ಗೌರವಕ್ಕೆ ಪಾತ್ರವಾಗಿದೆಯೆಂದು ಅನಿಸುತ್ತಿದೆ' ಎಂದು ತಂಡದ ಮುಖ್ಯ ಕೋಚ್ ಮೊಹಮ್ಮದ್ ವಾಬಿ ಹೇಳುವಾಗ ಮುಖದಲ್ಲಿ ಖುಷಿ ಕಾಣುತಿತ್ತು. ಮಾರ್ಚ್‌ನಲ್ಲಷ್ಟೇ ಅವರು ಈ ಹೊಣೆ ವಹಿ-ಸಿಕೊಂಡಿದ್ದರು.

ಸಮರ್‌ವಿಲೆ ಪಾಸ್‌ನಲ್ಲಿ ಕೋಡಿ ಗಾಪ್ಕೊ ಅವರು 72ನೇ ನಿಮಿಷ ನೆದರ್ಲೆಂಡ್ಸ್ ತಂಡಕ್ಕೆ ಮುನ್ನಡೆ ಒದಗಿಸಿದರು. ಡಚ್ ಆಟಗಾರರು ಮೈದಾನಕ್ಕೆ ಓಡೋಡಿ ಬಂದು 27 ವರ್ಷದ ಗ್ಯಾಪ್ಕೊ ಅವರನ್ನು ಅಪ್ಪಿಕೊಂಡರು.

ಡಚ್ ತಂಡದ ಗೆಲುವಿನ ಲೆಕ್ಕಾಚಾರ ಕೊನೆಯ ಕ್ಷಣಗಳಲ್ಲಿ ಕೈಕೊಟ್ಟಿತು. ಸ್ಟಾಪೇಜ್ ಅವಧಿಯಲ್ಲಿ (90+1) ಮೊರಾಕ್ಕೊ ಸಮ ಮಾಡಿಕೊಂಡಿತು. ಚೆಮ್ಸ್‌ಡೈನ್ ತಲ್ಬಿ 28 ಗಜ ದೂರದಿಂದ ಕ್ರಾಸ್ ಮಾಡಿದ ಚೆಂಡನ್ನು, ಬಾಕ್ಸ್‌ನೊಳಗಿದ್ದ ಡಿಯೋಪ್ ಮಿಂಚಿನ ವೇಗದಲ್ಲಿ ಗೋಲಿನೊಳಕ್ಕೆ ಹೆಡ್ ಮಾಡಿದರು. ವೆರ್‌ಬ್ರುಗೆನ್‌ಗೆ ತಡೆಯುವ ಅವಕಾಶವೇ ಇರಲಿಲ್ಲ.

30 ನಿಮಿಷಗಳ ಹೆಚ್ಚುವರಿ ಅವಧಿಯಲ್ಲಿ ಇತ್ತಂಡಗಳಿಗೆ ಅತ್ಯುತ್ತಮ ಎನ್ನುವಂಥ ಅವಕಾಶಗಳು ಒದಗಿ ಬರಲಿಲ್ಲ. ಕೊನೆಯ 15 ನಿಮಿಷಗಳ ಆಟದಲ್ಲಿ ಡಚ್ ಕೋಚ್ ರೊನಾಲ್ಡ್ ಕೋಮನ್ ಅವರು ಜಸ್ಟಿನ್ ಕ್ಲುವರ್ಟ್ ಅವರನ್ನು ಬದಲಿ ಆಟಗಾರನಾಗಿ ಕಣಕ್ಕಿಳಿಸಿದರು. ಪೆನಾಲ್ಟಿಯಲ್ಲಿ ಗುರಿ ತಪ್ಪಿದ ಮೂವರು ಡಚ್ ಆಟಗಾರರಲ್ಲಿ ಅವರೂ ಒಬ್ಬರಾಗಿದ್ದರು.

ನೆದರ್ಲೆಂಡ್ಸ್ ತಂಡ ಸತತ ಮೂರನೇ ಬಾರಿ ಪೆನಾಲ್ಟಿ ಶೂಟೌಟ್ ಮೂಲಕ ವಿಶ್ವಕಪ್‌ನಿಂದ ನಿರ್ಗಮಿಸಿತು.



ನಿರ್ಣಾಯಕ ಪೆನಾಲ್ಟಿ ಯತ್ನದಲ್ಲಿ ಗೋಲು ಹೊಡೆದ ಮೊರಾಕ್ಕೊದ ಇಸ್ಮಾಯಿಲ್ ಸೈಬಾರಿ — ಎಎಫ್‌ಪಿ ಚಿತ್ರ


ಹಾಲಂಡ್ ಮತ್ತೆ ಮಿಂಚು; ಪ್ರಿಕ್ವಾರ್ಟರ್‌ಗೆ ನಾರ್ವೆ

ಅರ್ಲಿಂಗ್ಟನ್ (ಎಎಫ್‌ಪಿ): ತಾರಾ ಆಟಗಾರ ಅರ್ಲಿಂಗ್ ಹಾಲಂಡ್ ಅವರು ಕೊನೆಯ ಕ್ಷಣದಲ್ಲಿ ಗಳಿಸಿದ ನಿರ್ಣಾಯಕ ಗೋಲಿನ ಬಲದಿಂದ ನಾರ್ವೆ ತಂಡವು 2–1ರಿಂದ ಐವರಿ ಕೋಸ್ಟ್ ತಂಡವನ್ನು ಮಣಿಸಿತು. ಅದರೊಂದಿಗೆ, ಫಿಫಾ ವಿಶ್ವಕಪ್ ನಲ್ಲಿ 16ರ ಘಟ್ಟಕ್ಕೆ ಮುನ್ನಡೆಯಿತು.

ನಾರ್ವೆ	ಐವರಿಕೋಸ್ಟ್
2	1

ಡಲ್ಲಾಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ 39ನೇ ನಿಮಿಷದಲ್ಲಿ ಗೋಲು ಹೊಡೆದ ಆ್ಯಂಟನಿಯೊ ನ್ಯೂಸಾ ಅವರು ನಾರ್ವೆ ಪಡೆಗೆ ಆರಂಭಿಕ ಮುನ್ನಡೆ ಒದಗಿಸಿದ್ದರು. ಐವರಿಕೋಸ್ಟ್ ತಂಡದ ಪ್ರತಿಭಾನ್ವಿತ ಆಟಗಾರ ಅಮದ್ ಡಯಲ್ಲೊ 74ನೇ ನಿಮಿಷದಲ್ಲಿ ಸಮಬಲ ಮಾಡಿದರು.

ಗುಂಪುಹಂತದ ಪಂದ್ಯಗಳಲ್ಲಿ ಮಿಂಚಿದ್ದ ಹಾಲಂಡ್ ಅವರು 86ನೇ ನಿಮಿಷದಲ್ಲಿ ಗೋಲು ಗಳಿಸಿ, ತಮ್ಮ ತಂಡವು ಪ್ರಿಕ್ವಾರ್ಟರ್‌ಗೆ ಮುನ್ನಡೆಯಲು ಕಾರಣರಾದರು. ಅವರು ಹಾಲಿ ಲೀಗ್‌ನಲ್ಲಿ ಐದನೇ ಗೋಲು ಆಗಿದೆ. ನಾರ್ವೆ ತಂಡವು 28 ವರ್ಷಗಳ ನಂತರ ವಿಶ್ವಕಪ್‌ಗೆ ಮರಳಿದೆ.



ಅರ್ಲಿಂಗ್ ಹಾಲಂಡ್ — ಎಎಫ್‌ಪಿ ಚಿತ್ರ

ಶೂಟೌಟ್‌ನಲ್ಲಿ ದಕ್ಷಿಣ ಅಮೆರಿಕದ ತಂಡಕ್ಕೆ ಒಲಿದ ಗೆಲುವು

ಜರ್ಮನಿಗೆ ಪರಗ್ವೆ ಆಘಾತ

ಫಾಕ್ಸ್‌ಬರೊ (ಮೆಸಾಚುಸೆಟ್ಸ್), (ಎಎಫ್‌ಪಿ): ಪರಗ್ವೆ ಎದುರು 32ರ ಸುತ್ತಿನ ಪಂದ್ಯದ ಪೆನಾಲ್ಟಿ ಶೂಟೌಟ್‌ನಲ್ಲಿ 4–3 ಗೋಲುಗಳಿಂದ ಆಘಾತ ಅನುಭವಿಸಿದ ಜರ್ಮನಿ ತಂಡ ವಿಶ್ವಕಪ್ ಟೂರ್ನಿಯಿಂದ ಹೊರಬಿತ್ತು. ಸೋಮವಾರ ರಾತ್ರಿ ನಡೆದ ಈ ಪಂದ್ಯದ ನಿಗದಿ ಅವಧಿಯ ಆಟ ಮುಗಿದಾಗ ಸ್ಕೋರ್ 1–1 ಡ್ರಾ ಆಗಿತ್ತು.

ಜರ್ಮನಿ ತಂಡವು ವಿಶ್ವಕಪ್ ಟೂರ್ನಿಯ ಇತಿಹಾಸದಲ್ಲಿ ಶೂಟೌಟ್ ಮೂಲಕ ಪಂದ್ಯ ಸೋತಿದ್ದು ಇದೇ ಮೊದಲು. ಫಿಫಾ ಕ್ರಮಾಂಕದಲ್ಲಿ ಪರಗ್ವೆ 34ನೇ ಸ್ಥಾನದಲ್ಲಿದ್ದರೆ, ಜರ್ಮನಿ 12ನೇ ಸ್ಥಾನದಲ್ಲಿದೆ. ಶೂಟೌಟ್‌ನಲ್ಲಿ ಜರ್ಮನಿಯ ಎರಡು ಯತ್ನಗಳನ್ನು ತಡೆದ ಪರಗ್ವೆ ಗೋಲ್‌ಕೀಪರ್ ಒರ್ಲಾಂಡೊ ಹೀಲ್ ಅವರು ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.

ಜೂಲಿಯೊ ಎನ್ಸಿನೊ ಅವರು ವಿರಾಮಕ್ಕೆ ಮೊದಲು ಪರಗ್ವೆ ತಂಡಕ್ಕೆ ಮುನ್ನಡೆ ಒದಗಿಸಿದರು. ಆದರೆ ಕೈ ಹಾವರ್ಟ್ಜ್ (54ನೇ ನಿ.) ಜರ್ಮನಿ ತಂಡ ಸ್ಕೋರ್ ಮಾಡಲು ನೆರವಾದರು.

30 ನಿಮಿಷಗಳ ಹೆಚ್ಚುವರಿ ಅವಧಿಯ ಆಟದಲ್ಲಿ ಜರ್ಮನಿಯ ಯೊನಾಥನ್ ಟಾ ಅವರು ಗೋಲು ಹೊಡೆದಿದ್ದರು. ಆದರೆ ವಿಡಿಯೊ ವಿಶ್ಲೇ-ಷಣೆಯಲ್ಲಿ ಗೋಲ್‌ಕೀಪರ್ ಹೀಲ್ ಅವರ ಮೇಲೆ ಜರ್ಮನಿ ಆಟಗಾರ ವಾಲ್ಡೆಮರ್ ಆಂಟನ್ ಫೌಲ್ ಮಾಡಿದ್ದು ಖಚಿತವಾಗಿ ಗೋಲು ನಿರಾಕರಿಸಲಾಯಿತು.

ರೋಚಕವಾಗಿದ್ದ ಪೆನಾಲ್ಟಿ ಶೂಟೌಟ್‌ನಲ್ಲಿ ಪರಗ್ವೆ ಗೋಲ್‌ಕೀಪರ್ ಒರ್ಲಾಂಡೊ ಹೀಲ್ ಅವರು ಹಾವರ್ಟ್ಜ್ ಮತ್ತು ನಿಕ್ ವೊಲ್ಟ್‌ಮೇಡ್ ಅವರ ಯತ್ನಗಳನ್ನು ತಡೆದರು. ಆದರೆ ಅವರ ತಂಡದ ಇಬ್ಬರು ಗೋಲು ಅವಕಾಶದಲ್ಲಿ ಎಡವಿದರು. ಪರಗ್ವೆಯ ಹೋರ್ಖೆ ಕನಾಲೆ ತಮ್ಮ ಯತ್ನದಲ್ಲಿ ಮಿಂಚಿನಂತೆ ಗೋಲು ಹೊಡೆದರು. ಯೊನಾಥನ್ ಟಾ ಅವರ ಯತ್ನ ಅಡ್ಡಪಟ್ಟಿಯ ಮೇಲಿನಿಂದ ಹೋಯಿತು.

2014ರಲ್ಲಿ ವಿಶ್ವಕಪ್ ಚಾಂಪಿಯನ್ ಆಗಿದ್ದ ಜರ್ಮನಿ, ನಂತರ ಇದೇ ಮೊದಲ ಬಾರಿ ನಾಕೌಟ್ ತಲುಪಿತ್ತು.

ಪರಗ್ವೆ ತನ್ನ ಅತಿ ದೊಡ್ಡ ವಿಜಯವನ್ನು ಆಚರಿಸಿತು. ಆದರೆ 32ರ ಘಟ್ಟದ ಇನ್ನೊಂದು ಪಂದ್ಯದಲ್ಲಿ ಸ್ವೀಡನ್ ವಿರುದ್ಧ ಫ್ರಾನ್ಸ್ ಗೆದ್ದಲ್ಲಿ ಪರಗ್ವೆಗೆ ಆ ತಂಡ ಎದುರಾಳಿಯಾಗಲಿದೆ. ಫ್ರಾನ್ಸ್ ಪ್ರಸ್ತುತ ಅತ್ಯುತ್ತಮ ತಂಡವಾಗಿ ಕಾಣಿಸುತ್ತಿದೆ.

'ದೇವರ ದಯೆ. ನಾನು ಎರಡು ಪೆನಾಲ್ಟಿ ಯತ್ನಗಳನ್ನು ತಡೆಯುವಲ್ಲಿ ಯಶಸ್ವಿಯಾದೆ. ನಾವು ಚಾಂಪಿಯನ್ ತಂಡವನ್ನು ಹೊರದೂಡಿದೆವು. ಈ ಗೆಲುವನ್ನು ಎಲ್ಲ ಪರಗ್ವೆಯನ್ನರಿಗೆ ಅರ್ಪಿಸುತ್ತೇವೆ' ಎಂದು ನಿರಾಳರಾದ ಪರಗ್ವೆ ಗೋಲ್‌ಕೀಪರ್ ಒರ್ಲಾಂಡೊ ಹೀಲ್ ಪ್ರತಿಕ್ರಿಯಿಸಿದರು.

42ನೇ ನಿಮಿಷ ಪರಗ್ವೆ ಗಳಿಸಿದ ಗೋಲು ವಿಶ್ವಕಪ್ ನಾಕೌಟ್‌ನಲ್ಲಿ ಆ ತಂಡ ಗಳಿಸಿದ ಮೊದಲ ಗೋಲೆನಿಸಿತು.



ಜರ್ಮನಿಯ ನಿಕ್ ವೊಲ್ಟಿಮೇಡ್ ಅವರ ಪೆನಾಲ್ಟಿ ಯತ್ನವನ್ನು ತಡೆದ ಪರಗ್ವೆ ಗೋಲ್‌ಕೀಪರ್ ಒರ್ಲಾಂಡೊ ಹೀಲ್ — ಎಎಫ್‌ಪಿ ಚಿತ್ರ

ಜರ್ಮನಿ ಗೋಲ್‌ಕೀಪರ್ ವಿದಾಯ

ಜರ್ಮನಿ ತಂಡ ವಿಶ್ವಕಪ್‌ನಿಂದ ಬೇಗ ಹೊರಬಿದ್ದ ನಂತರ ಗೋಲ್‌ಕೀಪರ್ ಮಾನುವೆಲ್ ನೋಯಾ ಅವರು ಎರಡನೇ ಬಾರಿ ಅಂತರರಾಷ್ಟ್ರೀಯ ಫುಟ್‌ಬಾಲ್‌ಗೆ ಮಂಗಳವಾರ ವಿದಾಯ ಹೇಳಿದರು.

40 ವರ್ಷ ವಯಸ್ಸಿನ ನೋಯಾ ಅವರು ವಿಶ್ವಕಪ್‌ಗೆ ಕೆಲವೇ ತಿಂಗಳು ಮೊದಲು ನಿವೃತ್ತಿ ತ್ಯಜಿಸಿ ರಾಷ್ಟ್ರೀಯ ತಂಡಕ್ಕೆ ಮರಳಿದ್ದರು. ಆದರೆ ಸೋಮವಾರ ಅಚ್ಚರಿಯ ಸೋಲಿನ ನಂತರ, 'ಪರಗ್ವೆ ಎದುರಿನ ಪಂದ್ಯ ತಮ್ಮ ಕೊನೆಯ ಅಂತರರಾಷ್ಟ್ರೀಯ ಪಂದ್ಯ' ಎಂದು ಟಿ.ವಿ. ಸಂದರ್ಶನದಲ್ಲಿ ತಿಳಿಸಿದರು. 2024ರ ಯುರೋಪಿಯನ್ ಚಾಂಪಿಯನ್‌ಷಿಪ್ ನಂತರ ಅವರು ಮೊದಲ ಬಾರಿ ನಿವೃತ್ತಿ ಘೋಷಿಸಿದ್ದರು.

ಹ್ಯಾರಿಕೇನ್, ಬೆಲಿಂಗ್‌ಹ್ಯಾಮ್ ಮೇಲೆ ಕಣ್ಣು

ಅಟ್ಲಾಂಟಾ (ಎಎಫ್‌ಪಿ): ಹ್ಯಾರಿ ಕೇನ್ ಮತ್ತು ಜೂಡ್ ಬೆಲಿಂಗ್‌ಹ್ಯಾಮ್ ಅವರ ಮಾಂತ್ರಿಕ ಆಟದ ಬಲದಿಂದ ಇಂಗ್ಲೆಂಡ್ ತಂಡವು ವಿಶ್ವಕಪ್ ನಾಕೌಟ್ ಹಂತಕ್ಕೆ ತಲುಪಿದ್ದು, ಬುಧವಾರ 'ಮುಮ್ಮುಖ ಸಿಂಹ' ಕಾಂಗೊ ರಿಪಬ್ಲಿಕ್ ತಂಡವನ್ನು ಎದುರಿಸಲಿದೆ.

ಆದರೆ ಥಾಮಸ್ ಟುಷೆಲ್ ಮಾರ್ಗದರ್ಶನದ ಇಂಗ್ಲೆಂಡ್ ತಂಡಕ್ಕೆ ಆಟಗಾರರ ಸಮತೋಲನ ಕಾಪಾಡಿ ಕೊಳ್ಳುವುದೇ ಸವಾಲಾಗಿದೆ. ಆಕ್ರಮಣಶೈಲಿಯ ಸಬ್‌ಸ್ಟಿಟ್ಯೂಟ್ ನಿಯೋಜನೆಯಲ್ಲಿ ಥಾಮಸ್ ಅವರ ತಂತ್ರಗಾರಿಕೆಯು ಅಪಾರ ಮೆಚ್ಚುಗೆಗೆ ಪಾತ್ರವಾಗಿದೆ. ಆದರೂ 32ರ ಘಟ್ಟದ ಪಂದ್ಯದಲ್ಲಿ ಇಂಗ್ಲೆಂಡ್ ಗೆಲುವಿನ ನೆಚ್ಚಿನ ತಂಡವಾಗಿದೆ. 60 ವರ್ಷಗಳಿಂದ ಪ್ರಶಸ್ತಿ ಬರ ಎದುರಿಸುತ್ತಿರುವ ಇಂಗ್ಲೆಂಡ್ ತಂಡಕ್ಕೆ ಈ ಬಾರಿಯೂ ಹಾದಿ ಸುಲಭವಾಗಿಲ್ಲ.

ಬೆಲಿಂಗ್‌ಹ್ಯಾಮ್ ಮತ್ತು ಕೇನ್ ಅವರು ಒಟ್ಟು ಐದು ಗೋಲು ಗಳಿಸಿದ್ದಾರೆ. ಅವರು ಕಾಂಗೊ ಎದುರು ಕೂಡ ಮಿಂಚುವ ಭರವಸೆ ಇದೆ. ಗಾಯಾಳುಗಳ ಸಮಸ್ಯೆಯ ನಡುವೆಯೂ ಕಾಂಗೊ ತಂಡವು ಇಂಗ್ಲೆಂಡ್ ಶಕ್ತಿಗೆ ಸವಾಲೊಡ್ಡಲು ಸಿದ್ಧವಾಗಿದೆ.

ಪಂದ್ಯಗಳು

ಇಂಗ್ಲೆಂಡ್	V/s	ಕಾಂಗೊ ರಿಪಬ್ಲಿಕ್
ಬುಧವಾರ ರಾತ್ರಿ 9.30		
ಬೆಲ್ಜಿಯಂ	V/s	ಸೆನೆಗಲ್
ಬುಧವಾರ ರಾತ್ರಿ 1.30		
ಅಮೆರಿಕ	V/s	ಬೋಸ್ನಿಯಾ
ಗುರುವಾರ ಬೆಳಿಗ್ಗೆ 5.30		

ಲೈವ್: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್, ಜೀ5 ಆ್ಯಪ್

ಮೈಸೂರು ರೇಸ್

ಎಫಿಕೆಸಿ ಗೆಲ್ಲುವ ನಿರೀಕ್ಷೆ

ಸ್ಟೀವರ್ಡ್ಸ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎಫಿಕೆಸಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಟ್ರಂಪ್ ಬೇಬಿ 2, ಜಸ್ಟ್ ಬ್ಲೂಸ್ 1, ಪೆಟ್ಟೀಸ್ ಚಾಯ್ಸ್ 5
2ನೇ ರೇಸ್: ನ್ಯಾಚುರಲ್ ಒನ್ 7, ಐರನ್ ಕಿಂಗ್ 1, ವಾಲ್ಟರ್ 5
3ನೇ ರೇಸ್: ಐ ಲೈಕ್ ಟೂ ಹೂ ಹಾ 8, ಹೇಸ್ಟಿಂಗ್ ಸನ್‌ರೈಸ್ 2, ಸೀಕ್ರೆಟ್ ಶ್ಯಾಡೊ 3
4ನೇ ರೇಸ್: ಫಿನಾಮಿನನ್ 1, ಲೇಡಿ ಲಯನ್ 11, ಫಾಲ್ಕನ್ ಫ್ಯೂರಿ 5
5ನೇ ರೇಸ್: ಎಫಿಕೆಸಿ 9, ಸ್ಟಿಲ್ ಐ ರೈಝ್ 3, ರೈಝ್ ಎಗೈನ್ 2
6ನೇ ರೇಸ್: ಸ್ಟಾರ್ ಆಫ್ ಲೈಟ್ 4, ರೀನ್ ಆಫ್ ಟೆರರ್ 1, ನ್ಯಾಚುರಲ್ ಕ್ವೀನ್ 8
7ನೇ ರೇಸ್: ಸಿಲ್ವರ್ ಕ್ವೆಸ್ಟ್ 12, ಶೆರ್ಪಾ 6, ರಫಿನಾಟೊ 1

ಉತ್ತಮ ಬೆಟ್: ಟ್ರಂಪ್ ಬೇಬಿ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಆರ್‌ಸಿಬಿ ಖರೀದಿ ಪ್ರಕ್ರಿಯೆಗೆ ಸಿಸಿಐ ಅನುಮೋದನೆ

ಬೆಂಗಳೂರು: ಇಂಡಿಯನ್ ಪ್ರೀಮಿಯರ್‌ನ ಲೀಗ್‌ನಲ್ಲಿ ಆಡುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರ್ಯಾಂಚೈಸಿಯ ಮಾಲೀಕತ್ವ ಹಸ್ತಾಂತರ ಪ್ರಕ್ರಿಯೆಗೆ ಭಾರತ ಸ್ಪರ್ಧಾತ್ಮಕ ಆಯೋಗ (ಸಿಸಿಐ) ಮಂಗಳವಾರ ಒಪ್ಪಿಗೆ ನೀಡಿದೆ.

ಆದಿತ್ಯ ಬಿರ್ಲಾ ಸಮೂಹ ನೇತೃತ್ವದ ಒಕ್ಕೂಟದಲ್ಲಿ ಟೈಮ್ಸ್ ಆಫ್ ಇಂಡಿಯಾ, ಬೋಲ್ಟ್ ವೆಂಚರ್ಸ್, ಬ್ಲ್ಯಾಕ್‌ಸ್ಟೋನ್ ಒಳಗೊಂಡಿವೆ, ₹16,600 ಕೋಟಿ ಮೊತ್ತಕ್ಕೆ ಖರೀದಿ ನಡೆದಿದೆ.

ಝಾಗ್ರೆಬ್ ಚೆಸ್: ಕಣದಲ್ಲಿ ಗುಕೇಶ್

ಝಾಗ್ರೆಬ್ (ಕ್ರೊವೇಷಿಯಾ), (ಪಿಟಿಐ): ವಿಶ್ವ ಚಾಂಪಿಯನ್ ಗುಕೇಶ್ ಅವರು ಕ್ಲಾಸಿಕಲ್ ಮಾದರಿಯ ಚೆಸ್‌ನಿಂದ ಕೆಲಕಾಲ ಬಿಡುವು ತೆಗೆದುಕೊಂಡಿರಬಹುದು. ಆದರೆ ಪ್ರಮುಖ ಟೂರ್ನಿಗಳಲ್ಲಿ ಆಡುವ ಅವರ ಬದ್ಧತೆ ಮುಂದುವರಿದಿದೆ. ಬುಧವಾರ ಇಲ್ಲಿ ಆರಂಭವಾಗಲಿರುವ ಝಾಗ್ರೆಬ್ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಟೂರ್ನಿಯಲ್ಲಿ ಅವರು ವಿಶ್ವದ ಅಗ್ರ ಆಟಗಾರರ ಜೊತೆ ಕಣಕ್ಕಿಳಿಯಲಿದ್ದಾರೆ.

ಈ ಟೂರ್ನಿಯು ಗ್ರ್ಯಾಂಡ್‌ಚೆಸ್ ಟೂರ್‌ನ (ಜಿಸಿಟಿ) ಭಾಗವಾಗಿದೆ. ಈ ಟೂರ್ನಿಯಲ್ಲಿ ಭಾರತದ ಇನ್ನೊಬ್ಬ ಯುವತಾರೆ, ಇತ್ತೀಚಿನ ನಾರ್ವೆ ಚೆಸ್ ಟೂರ್ನಿಯ ವಿಜೇತ ಆರ್.ಪ್ರಜ್ಞಾನಂದ ಸಹ ಆಡಲಿದ್ದಾರೆ. ಜರ್ಮನಿಯ ವಿನ್ಸೆಂಟ್ ಕೀಮರ್, ಹಾಲೆಂಡ್‌ನ ಅನಿಶ್ ಗಿರಿ ಅವರೂ ಕಣದಲ್ಲಿದ್ದಾರೆ.

ರ್‍ಯಾಪಿಡ್‌ನಲ್ಲಿ 9 ಸುತ್ತು ಮತ್ತು ಬ್ಲಿಟ್ಜ್‌ನಲ್ಲಿ 19 ಸುತ್ತುಗಳಿರಲಿವೆ.

ಟಿ20 ಸರಣಿ ಇಂದಿನಿಂದ • ಸೂರ್ಯವಂಶಿ ಪದಾರ್ಪಣೆ ನಿರೀಕ್ಷೆ

ಗೆಲುವಿನ 'ವೈಭವ'ಕ್ಕೆ ಮರಳುವತ್ತ ಚಿತ್ತ

ಚೆಸ್ಟರ್ ಲಿ ಸ್ಟ್ರೀಟ್, ಯು.ಕೆ (ಪಿಟಿಐ): ಬುಧವಾರ ಇಂಗ್ಲೆಂಡ್ ಎದುರು ಆರಂಭವಾಗಲಿರುವ ಟಿ20 ಕ್ರಿಕೆಟ್ ಸರಣಿಯು ಎರಡು ಕಾರಣಗಳಿಗೆ ಕುತೂಹಲ ಕೆರಳಿಸಿದೆ.

ಮೊದಲನೇಯದ್ದು ಹದಿನೈದರ ಪೋರ ವೈಭವ್ ಸೂರ್ಯವಂಶಿಯ ಅಂತರರಾಷ್ಟ್ರೀಯ ಕ್ರಿಕೆಟ್ ಪದಾರ್ಪಣೆಯ ನಿರೀಕ್ಷೆ. ಇನ್ನೊಂದು; ಈಚೆಗೆ ಐರ್ಲೆಂಡ್‌ನಲ್ಲಿ ಭಾರತ ತಂಡವು ಸರಣಿಯಲ್ಲಿ ಹೀನಾಯ ಸೋಲು ಅನುಭವಿಸಿತ್ತು. ಅದಕ್ಕೆ ಕಾರಣವಾದ ಬ್ಯಾಟಿಂಗ್ ಲೋಪಗಳನ್ನು ಸುಧಾರಣೆ ಮಾಡಿಕೊಳ್ಳಲು ಯಾವ ತಂತ್ರಗಾರಿಕೆಯನ್ನು ತಂಡವು ರೂಪಿಸಲಿದೆ ಎಂಬ ಕೌತುಕವೂ ಇದೆ.

ಶ್ರೇಯಸ್ ಅಯ್ಯರ್ ಪಡೆಯು ಐರ್ಲೆಂಡ್ ಎದುರು 0-2 ರಿಂದ ವೈಟ್‌ವಾಷ್ ಆಗಿತ್ತು. ಆರಂಭಿಕ ಬ್ಯಾಟರ್ ಸಂಜು ಸ್ಯಾಮ್ಸನ್ ಅವರು ಎರಡೂ ಪಂದ್ಯಗಳಲ್ಲಿ ವಿಫಲರಾಗಿದ್ದರು. ಅದರಿಂದಾಗಿ ಅಭಿಷೇಕ್ ಶರ್ಮಾ ಅವರೊಂದಿಗೆ ಸೂರ್ಯವಂಶಿ ಅವರನ್ನು ಕಣಕ್ಕಿಳಿಸುವ ಸಾಧ್ಯತೆಗಳ ಕುರಿತು ಮಾತುಗಳು ಕೇಳಿಬರುತ್ತಿವೆ. ಅಭಿಷೇಕ್ ಐರ್ಲೆಂಡ್ ಎದುರಿನ ಮೊದಲ ಪಂದ್ಯದಲ್ಲಿ 20 ಎಸೆತಗಳಿಂದ 49 ರನ್ ಗಳಿಸಿದ್ದರು.

'ವೈಭವ್ ಆಡುವ ಹನ್ನೊಂದರಲ್ಲಿ ಸ್ಥಾನ ಪಡೆಯಲು ಉಳಿದ ಆಟಗಾರರಂತೆಯೇ ಪ್ರಕ್ರಿಯೆಯನ್ನು ಅನುಸರಿಸಬೇಕಾಗುತ್ತದೆ. ಅವರಿಗೆ ಅವಕಾಶ ಸಿಗಬಹುದು' ಎಂದು ತಂಡದ ಸಹಾಯಕ ಕೋಚ್ ಟೆನ್ ಡೊಶೆಟ್ ಹೇಳಿದರು.

ಐರ್ಲೆಂಡ್‌ನಲ್ಲಿ ಸೂರ್ಯಾಂಶ್ ಶೆಡಗೆ ಮತ್ತು ಪ್ರಿನ್ಸ್ ಯಾದವ್ ಅವರಿಗೆ ಪದಾರ್ಪಣೆಯ ಅವಕಾಶವನ್ನು ತಂಡದ ಚಿಂತಕರ ಚಾವಡಿಯು ನೀಡಿತ್ತು. ತಂಡದ ಏಳ್ಗೆಗಾಗಿ ಯಾವುದೇ ರೀತಿಯ ಕಟ್ಟುನಿಟ್ಟಿನ ಕ್ರಮಕ್ಕೂ ಅಜಿತ್ ಅಗರಕರ್ ನೇತೃತ್ವದ ಆಯ್ಕೆ ಸಮಿತಿ ಮತ್ತು ಕೋಚ್ ಗೌತಮ್ ಗಂಭೀರ್ ಅವರು ಹಿಂಜರಿಯುವುದಿಲ್ಲ ಎಂಬುದನ್ನು ಇದರಿಂದ ಅರಿಯಬಹುದು.

ಭಾರತ ತಂಡವು ಇಂಗ್ಲೆಂಡ್‌ನಲ್ಲಿ ಐದು ಟಿ20 ಪಂದ್ಯಗಳ ಸರಣಿಯನ್ನು ಆಡಲಿದೆ. ಆದ್ದರಿಂದ ಪ್ರಯೋಗಗಳಿಗೆ ಬಹಳಷ್ಟು ಅವಕಾಶಗಳಂತೂ ಇವೆ.

ಸಂಜು ಅವರು ಟಿ20 ವಿಶ್ವಕಪ್ ವಿಜಯದಲ್ಲಿ ಬಹಳ ಪ್ರಮುಖ ಪಾತ್ರ ವಹಿಸಿದ್ದರು. ಐಪಿಎಲ್ ಟೂರ್ನಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿ ಆಡಿ ಎರಡು ಶತಕ ಹೊಡೆದಿದ್ದರು.

ಆದ್ದರಿಂದ ಅನುಭವಿ ಸಂಜು ಅವರಿಗೆ ಇಂಗ್ಲೆಂಡ್‌ನಲ್ಲಿ ಮತ್ತೊಂದು ಅವಕಾಶ ಲಭಿಸಬಹುದು. ಇದರಿಂದ ವೈಭವ್ ಪದಾರ್ಪಣೆ ಮತ್ತಷ್ಟು ಮುಂದಕ್ಕೆ ಹೋಗುವ ಸಾಧ್ಯತೆಯೂ ಇದೆ.

ಇಶಾನ್ ಕಿಶನ್, ಶ್ರೇಯಸ್ ಅವರೂ ಲಯಕ್ಕೆ ಮರಳುವುದು ಮುಖ್ಯವಾಗಿದೆ. ತಿಲಕ್ ವರ್ಮಾ ಅವರ ಮೇಲೆ ವಿಶ್ವಾಸವಿಡಬಹುದು. ತಂಡದ ವೇಗಿಗಳಾದ ಅರ್ಷದೀಪ್ ಸಿಂಗ್, ಪ್ರಿನ್ಸ್ ಯಾದವ್ ಹಾಗೂ ಕನ್ನಡಿಗ ಪ್ರಸಿದ್ಧ ಕೃಷ್ಣ ಅವರ ಪಾತ್ರವು ಇಂಗ್ಲೆಂಡ್ ಪಿಚ್‌ಗಳಲ್ಲಿ ಮಹತ್ವದ್ದಾಗಲಿದೆ.

ಇಂಗ್ಲೆಂಡ್ ನಾಯಕ ಹ್ಯಾರಿ ಬ್ರೂಕ್, ಜೋಸ್ ಬಟ್ಲರ್, ಜೋರ್ಡನ್ ಕಾಕ್ಸ್, ಜೇಕಬ್ ಬೆಥೆಲ್, ವಿಲ್ ಜಾಕ್ಸ್, ಫಿಲ್ ಸಾಲ್ಟ್ ಮತ್ತು ಟಾಮ್ ಬ್ಯಾಂಟನ್ ಬ್ಯಾಟಿಂಗ್ ವಿಭಾಗದ ಶಕ್ತಿಯಾಗಿದ್ದಾರೆ. ವೇಗಿ ಜೋಫ್ರಾ ಆರ್ಚರ್, ಸ್ಯಾಮ್ ಕರನ್ ಅವರು ಭಾರತದ ಬ್ಯಾಟಿಂಗ್ ಪಡೆಗೆ ಸವಾಲೊಡ್ಡಬಲ್ಲರು.

ಇಂಗ್ಲೆಂಡ್ VS ಭಾರತ
ಇಂದು 9:00 PM
SONY SPORTS 1 · SONY SPORTS 4 · SONY SPORTS 5
ಕನ್ನಡ



ಶ್ರೇಯಸ್ ಅಯ್ಯರ್ — 'ಎಕ್ಸ್' ಚಿತ್ರ

ವೈಭವ್ ಆಡುವ ವಿಶ್ವಾಸ: ಗಾವಸ್ಕರ್

ಇಂಗ್ಲೆಂಡ್ ಎದುರಿನ ಸರಣಿಯ ಮೊದಲ ಪಂದ್ಯದಲ್ಲಿ ಆಡಲು ವೈಭವ್ ಸೂರ್ಯವಂಶಿಗೆ ಅವಕಾಶ ನೀಡಬೇಕು ಎಂದು ಕ್ರಿಕೆಟ್ ವೀಕ್ಷಕ ವಿವರಣೆಗಾರ ಸುನಿಲ್ ಗಾವಸ್ಕರ್ ಹೇಳಿದರು.

'ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್' ಸಂವಾದದಲ್ಲಿ ಮಾತನಾಡಿದ ಅವರು, 'ವೈಭವ್ ಮೊದಲ ಪಂದ್ಯದಲ್ಲಿ ಆಡುವ ಭರವಸೆ ನನಗಿದೆ. ಮೊದಲ ಪಂದ್ಯದಿಂದಲೇ ಅಬ್ಬರದ ಆರಂಭ ದೊರೆಯ ಬೇಕು. ಅದನ್ನು ವೈಭವ್ ಕೊಡಬಲ್ಲರು' ಎಂದರು.

ಬೆಂಗಳೂರಿಗೆ ನೆಲೆ ಬದಲಾಯಿಸಿದ ಹಾರ್ದಿಕ್ ಪಾಂಡ್ಯ

ನವದೆಹಲಿ (ಪಿಟಿಐ): ಭಾರತ ತಂಡದ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಬಿಸಿಸಿಐನ ಶ್ರೇಷ್ಠತಾ ಕೇಂದ್ರ (ಸಿಒಇ) ವನ್ನು ತಮ್ಮ ತರಬೇತಿ ನೆಲೆಯನ್ನಾಗಿಸುವ ಗುರಿಯೊಂದಿಗೆ ಬೆಂಗಳೂರಿಗೆ ಸ್ಥಳಾಂತರಗೊಂಡಿದ್ದಾರೆ.

ಬಿಸಿಸಿಐನ ಕೇಂದ್ರೀಯ ಗುತ್ತಿಗೆ ಪಡೆದ ಆಟಗಾರರು ಸಾಮಾನ್ಯವಾಗಿ ಗಾಯದ ಪುನರ್ವಸತಿ, ಫಿಟ್‌ನೆಸ್ ಮೌಲ್ಯಮಾಪನ ಅಥವಾ ರಾಷ್ಟ್ರೀಯ ಶಿಬಿರಗಳಿಗಾಗಿ ಮಾತ್ರ ಬೆಂಗಳೂರಿನಲ್ಲಿರುವ ಶ್ರೇಷ್ಠತಾ ಕೇಂದ್ರಕ್ಕೆ ಭೇಟಿ ನೀಡುವುದರಿಂದ ಹಾರ್ದಿಕ್ ಅವರ ಈ ನಡೆ ವಿಶಿಷ್ಟವಾಗಿದೆ.

ಯೋಧಾಸ್‌ಗೆ ರೋಚಕ ಗೆಲುವು

• ಸತೀಶ ಬಿ.

ಹುಬ್ಬಳ್ಳಿ: ಶಿವಮೊಗ್ಗ ಯೋಧಾಸ್ ತಂಡವು ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಒಂದು ರನ್‌ನಿಂದ ಗುಲ್ಬರ್ಗ ಮಿಸ್ಟಿಕ್ಸ್ ತಂಡದ ವಿರುದ್ಧ ರೋಚಕ ಜಯ ಸಾಧಿಸಿತು.

ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಶಿವಮೊಗ್ಗ 181 ರನ್‌ಗಳ ಗುರಿ ಒಡ್ಡಿತು. ಗುಲ್ಬರ್ಗ 6 ಓವರ್‌ಗಳಲ್ಲಿ 4 ವಿಕೆಟ್‌ಗೆ 52 ರನ್ ಗಳಿಸಿದ್ದಾಗ ಮಳೆ ಸುರಿಯಿತು. ಪಂದ್ಯ ಒಂದು ಗಂಟೆ ಸ್ಥಗಿತವಾಯಿತು. ಗುಲ್ಬರ್ಗ ತಂಡದ ಗುರಿಯನ್ನು ಪರಿಷ್ಕರಿಸಿ 12 ಓವರ್‌ಗಳಲ್ಲಿ 128 ರನ್‌ಗಳಿಗೆ ನಿಗದಿಪಡಿಸಲಾಯಿತು. ತಂಡವು 7 ವಿಕೆಟ್‌ಗೆ 126 ರನ್ ಗಳಿಸಿ ಸೋಲೊಪ್ಪಿಕೊಂಡಿತು.

ಕೊನೆಯ ಓವರ್‌ನಲ್ಲಿ ಗುಲ್ಬರ್ಗ ತಂಡಕ್ಕೆ ಗೆಲುವಿಗೆ 26 ರನ್‌ಗಳ ಅಗತ್ಯವಿತ್ತು. ನಾಯಕ ಮನೀಷ್ ಪಾಂಡೆ ಮತ್ತು ಧ್ರುವ್ ಪ್ರಭಾಕರ್ ಕ್ರೀಸ್‌ನಲ್ಲಿದ್ದರು. ಆದರೆ, ಈ ಜೋಡಿ ಹೋರಾಟ ತೋರಿ 24 ರನ್ ಗಳಿಸಿ ಸ್ವಲ್ಪದರಲ್ಲೇ ನಿರಾಸೆ ಅನುಭವಿಸಿತು.

ಇದಕ್ಕೂ ಮುನ್ನ ಬ್ಯಾಟ್ ಮಾಡಿದ ಶಿವಮೊಗ್ಗ ತಂಡದ ಪರ ಲವನೀತ್ ಸಿಸೋಡಿಯಾ (31 ರನ್, 18ಎ), ತುಷಾರ್ ಸಿಂಗ್ (35 ರನ್, 27ಎ) ಮತ್ತು ಸುಜಯ್ ಸಾತೇರಿ (ಔಟಾಗದೇ 47, 30ಎ) ಬಿರುಸಿನ ಆಟವಾಡಿದರು.

ಸಂಕ್ಷಿಪ್ತ ಸ್ಕೋರು: ಶಿವಮೊಗ್ಗ ಯೋಧಾಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 180 (ಸುಜಯ್ ಸಾತೇರಿ ಔಟಾಗದೇ 47, ತುಷಾರ್ ಸಿಂಗ್ 35; ಧ್ರುವ್ ಪ್ರಭಾಕರ್ 16ಕ್ಕೆ 2). ಗುಲ್ಬರ್ಗ ಮಿಸ್ಟಿಕ್ಸ್: 12 ಓವರ್‌ಗಳಲ್ಲಿ 7 ವಿಕೆಟ್‌ಗೆ 126 (ಮನೀಷ್ ಪಾಂಡೆ ಔಟಾಗದೇ 36, ಮೆಕ್ನಿಲ್ ನೊರೊನ್ಹಾ 34; ಯಶೋವರ್ಧನ್ ಪರಂತಾಪ್ 24ಕ್ಕೆ 2, ಅಂಬರೀಷ್ ಕೆ. 33ಕ್ಕೆ 2). ಪಂದ್ಯದ ಆಟಗಾರ: ಸುಜಯ್ ಸಾತೇರಿ



ಸುಜಯ್ ಸಾತೇರಿ ಬ್ಯಾಟಿಂಗ್ — ಚಿತ್ರ: ಗೋವಿಂದರಾಜ ಜವಳಿ

ವಾರಿಯರ್ಸ್‌ಗೆ ಮಣಿದ ಕಿಂಗ್ಸ್

ರಿತೇಶ್ ಭಟ್ಕಳ (66 ರನ್, 39ಎ, 4x8, 6x3) ಅವರ ಅರ್ಧಶತಕದ ನೆರವಿನಿಂದ ಮೈಸೂರು ವಾರಿಯರ್ಸ್ ತಂಡವು 2 ವಿಕೆಟ್‌ಗಳಿಂದ ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡವನ್ನು ಮಣಿಸಿತು. ಮಳೆಯಿಂದಾಗಿ ಮಂಗಳವಾರದ ಎರಡನೇ ಪಂದ್ಯವನ್ನು 19 ಓವರ್‌ಗಳಿಗೆ ಸೀಮಿತಗೊಳಿಸಲಾಯಿತು. ಮಂಗಳೂರು ನೀಡಿದ 162 ರನ್ ಗುರಿ ಬೆನ್ನಟ್ಟಿದ ಮೈಸೂರು ತಂಡವು 18.5 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 167 ರನ್ ಗಳಿಸಿ, ಹಾಲಿ ಲೀಗ್‌ನಲ್ಲಿ ಎರಡನೇ ಜಯ ದಾಖಲಿಸಿತು.

ಇಂದಿನ ಪಂದ್ಯ:
ಬೆಂಗಳೂರು ಬ್ಲಾಸ್ಟರ್ಸ್–ಹುಬ್ಬಳ್ಳಿ ಟೈಗರ್ಸ್ (ಮಧ್ಯಾಹ್ನ 2)

ಟಿ20 ವಿಶ್ವಕಪ್: ಫೈನಲ್‌ಗೆ ಆಸ್ಟ್ರೇಲಿಯಾ

ಲಂಡನ್ (ಎಎಫ್‌ಪಿ): ಆಸ್ಟ್ರೇಲಿಯಾ ವನಿತೆಯರು ಟಿ20 ಕ್ರಿಕೆಟ್ ಮಾದರಿಯಲ್ಲಿ ಏಳನೇ ಬಾರಿ ವಿಶ್ವಕಪ್ ಗೆಲುವಿನ ಹೊಸ್ತಿಲಿಗೆ ಬಂದು ನಿಂತಿದೆ. ಆರು ಸಲದ ಚಾಂಪಿಯನ್ ಆಸ್ಟ್ರೇಲಿಯಾ ಎಂಟನೇ ಸಲ ಫೈನಲ್‌ಗೆ ಲಗ್ಗೆ ಇಟ್ಟಿದೆ.

ಕೆನಿಂಗ್ಟನ್ ಓವಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ 8 ವಿಕೆಟ್‌ಗಳಿಂದ ವೆಸ್ಟ್ ಇಂಡೀಸ್ ತಂಡವನ್ನು ಸುಲಭವಾಗಿ ಮಣಿಸಿತು.

ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡವು ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕಿ ಸೋಫಿ ಮಾಲಿನೆ (30ಕ್ಕೆ2), ಆ್ಯಷ್ಲೆ ಗಾರ್ಡನರ್ (13ಕ್ಕೆ2) ಮತ್ತು ಜಾರ್ಜಿಯಾ ವೆರ್ಹಾಮ್ (17ಕ್ಕೆ2) ಅವರ ಅಮೋಘ ಬೌಲಿಂಗ್ ರಂಗೇರಿತು. ವಿಂಡೀಸ್ ಬಳಗವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 125 ರನ್‌ಗಳ ಸಾಧಾರಣ ಮೊತ್ತ ಗಳಿಸಿತು. ಬೆತ್ ಮೂನಿ (ಔಟಾಗದೇ 61, 36ಎ, 4X8) ಅವರ ಅರ್ಧಶತಕದ ಬಲದಿಂದ ಆಸ್ಟ್ರೇಲಿಯಾ ತಂಡವು 13 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 127 ರನ್ ಗಳಿಸಿತು.

ಎರಡನೇ ಸೆಮಿಫೈನಲ್ ಪಂದ್ಯವು ಗುರುವಾರ ಇಂಗ್ಲೆಂಡ್ ಮತ್ತು ದಕ್ಷಿಣ ಆಫ್ರಿಕಾ ನಡುವಣ ನಡೆಯಲಿದೆ. ಈ ಪಂದ್ಯದಲ್ಲಿ ಗೆದ್ದ ತಂಡವು ಜುಲೈ 5ರಂದು ನಡೆಯುವ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಆಡುವರು. ಭಾರತ ತಂಡವು ಲೀಗ್ ಹಂತದಲ್ಲಿಯೇ ನಿರ್ಗಮಿಸಿತ್ತು.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 20 ಓವರ್‌ಗಳಲ್ಲಿ 7ಕ್ಕೆ125 (ಹೆಯಲಿ ಮ್ಯಾಥ್ಯೂಸ್ 30, ಶೆಮೈನ್ ಕ್ಯಾಂಪ್‌ಬೆಲ್ 22, ದಿಯಾಂದ್ರ ಡಾಟಿನ್ ಔಟಾಗದೇ 26, ಸೋಫಿ ಮಾಲಿನೆ 30ಕ್ಕೆ2, ಆ್ಯಷ್ಲೆ ಗಾರ್ಡನರ್ 13ಕ್ಕೆ2, ಜಾರ್ಜಿಯಾ ವೆರ್ಹಾಮ್ 17ಕ್ಕೆ2) ಆಸ್ಟ್ರೇಲಿಯಾ: 13 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 127 (ಜಾರ್ಜಿಯಾ ವೊಲ್ 16, ಬೆತ್ ಮೂನಿ ಔಟಾಗದೇ 61, ಆ್ಯಷ್ಲೆ ಗಾರ್ಡನರ್ ಔಟಾಗದೇ 35, ಹೆಯಲಿ ಮ್ಯಾಥ್ಯೂಸ್ 23ಕ್ಕೆ1) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 8 ವಿಕೆಟ್ ಜಯ



ಗೆಲುವಿನ ಸಂಭ್ರಮದಲ್ಲಿ ಬೆತ್ ಮೂನಿ — ಎಎಫ್‌ಪಿ ಚಿತ್ರ